ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 37

ಸೆಪ್ಟಂಬರ್ 7-13, 1998 ರೂ. 2.00

ಉದಾರೀಕರಣದ, ಕೋಮುವಾದದ ವಿರುದ್ಧ ರಾಜ್ಯಾದ್ಯಂತ ವ್ಯಾಪಕ ಪ್ರಚಾರ-ಹೋರಾಟಕ್ಕೆ ಪಣ

ಸೆಪ್ಟಂಬರ 1.1998. ರಾಜ್ಯದ ಪ್ರಜಾಪ್ರಭುತ್ವ ಆಂದೋಲನದ ಇತಿಹಾಸದಲ್ಲಿ ಒಂದು ಪ್ರಮುಖ ದಿನ. ಕಳೆದ 7 ವರ್ಷಗಳಿಂದ ಉದಾರೀಕರಣ, ಜಾಗತೀಕರಣದ ಹೆಸರಲ್ಲಿ ಬರುತ್ತಿದ್ದ ಆರ್ಥಿಕ ನೀತಿಗಳ ವಿರುದ್ಧ ತಂತಮ್ಮ ವಲಯಗಳಲ್ಲಿ ಹೋರಾಟ ನಿರತವಾಗಿದ್ದ, ಆ ಹೋರಾಟಗಳನ್ನು ಛಿದ್ರಗೊಳಿಸಿ ದೇಶದ ಐಕ್ಯತೆಗೆ ಸಂಚಕಾರ ತರುತ್ತಿರುವ ಕೋಮುವಾದದ ವಿರುದ್ಧ ತಂತಮ್ಮ ಹೋರಾಟಗಳನ್ನು ನಡೆಸುತ್ತಿದ್ದ ರಾಜ್ಯದ ವಿವಿಧ ಜನವಿಭಾಗಗಳು ಒಟ್ಟು ಸೇರಿ ಐಕ್ಯ ಹೋರಾಟ ನಡೆಸಿ ಜನಗಳ ಬದುಕನ್ನು, ದೇಶದ ಸಾರ್ವಭೌಮತೆಯನ್ನು ರಕ್ಷಿಸುವ ಪಣ ತೊಟ್ಟಿದ್ದಾರೆ. ಅದಕ್ಕಾಗಿ ಐಕ್ಯತೆಯಿಂದ ಹೋರಾಟದ ಕಣಕ್ಕೆ ಧುಮುಕಲು ನಿರ್ಧರಿಸಿದ್ದಾರೆ.

ಅಂದು ಬೆಂಗಳೂರಿನಲ್ಲಿ ನಡೆದ ರಾಜ್ಯದ ವಿವಿಧ ಉದ್ದಿಮೆಗಳ, ವಲಯಗಳ ಕಾರ್ಮಿಕರು ಮತ್ತು ನೌಕರರು, ರೈತರು, ಕೃಷಿಕೂಲಿ ಕಾರರು, ಮಹಿಳೆಯರು, ವಿದ್ಯಾರ್ಥಿಗಳು, ಯುವಜನರು, ವಿಜ್ಞಾನಿಗಳು, ಪತ್ರಕರ್ತರು ಮತ್ತಿತರ ಜನ ವಿಭಾಗಗಳ ನಡುವೆ ದುಡಿಯುತ್ತಿರುವ ಸುಮಾರು 30 ಸಾಮೂಹಿಕ ಸಂಘಟನೆಗಳ ಒಂದೂವರೆ ಸಾವಿರ ಪ್ರತಿನಿಧಿಗಳು ದಿನವಿಡೀ ಅತ್ಯಂತ ತತ್ಪರತೆಯಿಂದ ಭಾಗವಹಿಸಿದ್ದ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ರಾಜ್ಯ ಮಟ್ಟದ ಸಮಾವೇಶ ನಾಲ್ಕು ಹಂತಗಳ ಹೋರಾಟದ ಕಾರ್ಯಕ್ರಮವನ್ನು ಅಂಗೀಕರಿಸಿದೆ.

1. ಅಕ್ಟೋಬರ್ 15ರೊಳಗೆ ಎಲ್ಲಾ ತಾಲೂಕು, ಜಿಲ್ಲಾ ಮಟ್ಟಗಳಲ್ಲಿ ವೇದಿಕೆಯ ಘಟಕಗಳನು ರಚಿಸಿ ಸಮಾವೇಶಗಳನು ನಡೆಸುವುದು.

2. ಅಕ್ಟೋಬರ್ 21ರಿಂದ ನವಂಬರ್ 7ರ ನಡುವೆ ಇಡೀ ರಾಜ್ಯವನ್ನು ವ್ಯಾಪಿಸುವಂತೆ ಒಂಭತ್ತು ಜಾಥಾಗಳ ಮೂಲಕ ಜನಗಳ, ದೇಶದ ಸಮಸ್ಯೆಗಳನ್ನು, ಅದಕ್ಕೆ ಕಾರಣಗಳನ್ನು ಹಾಗೂ ಪರ್ಯಾಯಗಳನ್ನು ವಿವರಿಸುವ ಬೃಹತ್ ಕಾರ್ಯಕ್ರಮ.

3. ನವಂಬರ್ 16ರಂದು ಬೆಂಗಳೂರಿನಲ್ಲಿ ಬೃಹತ್ ರ‍್ಯಾಲಿ.

4. ಡಿಸೆಂಬರ್ 11ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರದ ಭಾಗವಾಗಿ ರಾಜ್ಯದೆಲ್ಲೆಡೆ ರಸ್ತೆರೋಕೋ, ರೈಲು ರೋಕೋ ಹಾಗೂ ಒಂದು ದಿನದ ಮುಷ್ಕರ.

ಕಳೆದ ಏಳು ವರ್ಷಗಳಿಂದ ದೇಶದ ಎಲ್ಲಾ ದುಡಿಯುವ ಜನವಿಭಾಗಗಳ ಬದುಕನ್ನು ಸತತವಾಗಿ ಘಾಸಿಗೊಳಿಸುತ್ತಾ ಬಂದಿರುವ ಉದಾರೀಕರಣದ ಆರ್ಥಿಕ ನೀತಿಗಳು, ಬಲಪಂಥೀಯ ಬಿ.ಜೆ.ಪಿ. ನೇತೃತ್ವದ ಸರಕಾರ ಕೇಂದ್ರದಲ್ಲಿ ಬಂದ ನಂತರ ಇನ್ನಷ್ಟು ತೀವ್ರಗೊಳ್ಳುವ ಜೊತೆಗೆ ಕೋಮುವಾದಿ ವಿಷವನ್ನು ಹರಡುತ್ತಿರುವ ಸನ್ನಿವೇಶದ ಗಂಭೀರತೆಯನ್ನರಿತು ಆಗಸ್ಟ್ 12ರಂದು ನವದೆಹಲಿಯಲ್ಲಿ ನಡೆದ ಅಖಿಲ ಭಾರತ ಸಮಾವೇಶದ ಘೋಷಣೆಗಳನ್ನು ಮತ್ತು ಕಾರ್ಯ ಯೋಜನೆಯನ್ನು ಅಂಗೀಕರಿಸಿದ ಈ ಕರ್ನಾಟಕ ರಾಜ್ಯ ಸಮಾವೇಶ ಈ ಬಗ್ಗೆ ಒಂದು ಪ್ರಣಾಳಿಕೆಯನ್ನೂ ಅಂಗೀಕರಿಸಿತು.

ವಿವಿಧ ರಂಗಗಳಲ್ಲಿ ಉದಾರೀಕರಣ, ಜಾಗತೀಕರಣ ನೀತಿಗಳಿಂದ, ಕೋಮುವಾದದ ಜ್ವಾಲೆಯಿಂದ ಆಗುತ್ತಿರುವ ಅನಾಹುತಗಳನ್ನು ಪರಿಶೀಲಿಸಿದ ಎಂಟು ಪ್ರಬಂಧಗಳನ್ನು ಆಯಾಯ ರಂಗಗಳಲ್ಲಿ ದುಡಿಯುತ್ತಿರುವ ಮುಖಂಡರುಗಳು ಮಂಡಿಸಿದ್ದು ರಾಜ್ಯ ಸಮಾವೇಶದ ವಿಶೇಷತೆಯಾಗಿತ್ತು. ಕೃಷಿ ಕುರಿತು ಜಿ.ಎನ್.ನಾಗರಾಜ್, ಸಾರ್ವಜನಿಕ ವಲಯದ ಬಗ್ಗೆ ಬಾಲಕೃಷ್ಣನ್, ರಾಜ್ಯ ಸರಕಾರದ ವಲಯದ ಬಗ್ಗೆ ಬಾಲಕೃಷ್ಣ, ಹಣಕಾಸು ವಲಯದ ಬಗ್ಗೆ ಸುಂದರ ಮೂರ್ತಿ, ವಿದ್ಯಾರ್ಥಿ- ಯುವಜನರ ಬಗ್ಗೆ ಕೆ.ಎನ್.ಉಮೇಶ್ ಮತ್ತು ರಾಮಾಂಜನೇಯ, ಕೇಂದ್ರ ಸರ್ಕಾರದ ವಲಯದ ಬಗ್ಗೆ ರಾಧಾಕೃಷ್ಣ, ಮಹಿಳೆಯರ ಸಮಸ್ಯೆಗಳನ್ನು ಕುರಿತು ಎನ್. ಪ್ರಭಾ ಹಾಗೂ ಸಾಂಸ್ಕೃತಿಕ ರಂಗದ ಬಗೆ ಸುರೇಂದ್ರರಾವ್ ಪ್ರಬಂಧಗಳನ್ನು ಮಂಡಿಸಿದರು.

ನಂತರ ನಡೆದ ಚರ್ಚೆಗಳಲ್ಲಿ ಭಾಗವಹಿಸಿದ ವಿವಿಧ ಸಾಮೂಹಿಕ ಸಂಘಟನೆಗಳ ಪ್ರತಿನಿಧಿಗಳು ತಮ್ಮ ಅನುಭವಗಳನ್ನು ವಿವರಿಸಿದರು. ಸರಕಾರದ ಕ್ರಿಮಿನಾಶಕಗಳ, ಬಿತ್ತನೆ ಬೀಜಗಳ ನೀತಿಗಳಿಗೆ ಬಲಿಯಾದ ರೈತರ ಆತ್ಮಹತ್ಯೆ ಪ್ರಕರಣಗಳು, ಇದರಿಂದ ರೊಚ್ಚಿಗೆದ್ದ ರೈತರ ಹೋರಾಟಗಳು, ಹೊಸ ಆರ್ಥಿಕ ನೀತಿಗಳಿಂದ ಹಾಗೂ ಕೋಮುವಾದದಿಂದ ವಿದ್ಯಾರ್ಥಿಗಳ, ಯುವಜನರ ಕನಸುಗಳು ಛಿದ್ರವಾದ ಬಗ್ಗೆ, ಸಮಸ್ಯೆಗಳು ಉಲ್ಬಣಗೊಂಡ ಬಗ್ಗೆ ಪೋಖ್ರಾನ್ ಸ್ಫೋಟ ನಡೆಸಿ ಆಟಾಟೋಪ ನಡೆಸಿದ ಬಿ.ಜೆ.ಪಿ. ನಂತರ ಪೂರ್ತಿಯಾಗಿ ಬಹುರಾಷ್ಟ್ರೀಯ ಕಂಪನಿಗಳಿಗೆ, ಸಾಮ್ರಾಜ್ಯಶಾಹಿಗಳಿಗೆ ಶರಣಾಗತವಾಗಿ ದೇಶವನ್ನು ಕೋಮುವಾದದ ಜ್ವಾಲೆಗೆ ಸಿಲುಕಿಸಿ, ಫ್ಯಾಸಿಸ್ಟ್ ಮಾದರಿಯ ಪ್ರವೃತ್ತಿಯನ್ನು ಪ್ರದರ್ಶಿಸುತ್ತಿರುವುದನ್ನು ಚರ್ಚೆಯಲ್ಲಿ ಭಾಗವಹಿಸಿದ ಪ್ರತಿನಿಧಿಗಳು ವಿವರಿಸಿದರು. ಸಿಐಟಿಯು, ಎಐಟಿಯುಸಿ, ಯುಟಿಯುಸಿ, ರೈತ ಸಂಘ, ಪ್ರಾಂತ ಕೃಷಿಕೂಲಿಕಾರರ ಸಂಘ, ಎಸ್.ಎಫ್.ಐ., ಡಿ.ವೈ.ಎಫ್.ಐ., ಎ.ಐ.ಎಸ್.ಎಫ್, ಎ.ಐ.ವೈ.ಎಫ್. ಎ.ಐ.ಡಿ.ಎಸ್.ಓ., ಎ.ಐ.ಡಿ.ವೈ.ಓ., ಬ್ಯಾಂಕ್ ಮತ್ತು ವಿಮಾ ನೌಕರರ ಹಾಗೂ ಅಧಿಕಾರಿಗಳು ಮತ್ತಿತರ ಸಂಘಟನೆಗಳ ಪ್ರತಿನಿಧಿಗಳು ಈ ಚರ್ಚೆಗಳಲ್ಲಿ ಭಾಗವಹಿಸಿದರು.

ಈ ಎಲ್ಲಾ ಅನುಭವಗಳನ್ನು, ವಿಚಾರಗಳನ್ನು ಒಳಗೊಂಡ ಸಮಾವೇಶದ ಕರಡು ಪ್ರಣಾಳಿಕೆಯನ್ನು ಸಿಐಟಿಯು ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ಮಂಡಿಸಿದರು.

ಕಾರ್ಮಿಕರ ಹಾಗೂ ಶಿಕ್ಷಕರುಗಳ ಹೋರಾಟಗಳ ಬಗ್ಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಕಟು ನೀತಿಗಳನ್ನು ಸಮಾವೇಶ ತೀವ್ರವಾಗಿ ಖಂಡಿಸಿತು. ಶಿಕ್ಷಕರುಗಳ ಹೋರಾಟಕ್ಕೆ ಸಮಾವೇಶ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿ ಅವರ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಯಿತು. ಬಾಗೂರು-ನವಿಲೆ ರೈತರ ಹೋರಾಟಕ್ಕೆ ಸಮಾವೇಶ ಬೆಂಬಲ ಸೂಚಿಸಿ, ಅವರ ಮೇಲೆ ಪೋಲಿಸ್‌ನವರು ನಡೆಸಿದ ದೌರ್ಜನ್ಯವನ್ನು ಖಂಡಿಸಿತು.

ಕೆ.ಇ.ಬಿ. ಮತು ಮೈಸೂರ್ ಲ್ಯಾಂಪ್ ಮುಂತಾದ ರಾಜ್ಯ ಸರ್ಕಾರದ ಘಟಕಗಳನ್ನು ಸರ್ಕಾರ ಖಾಸಗೀಕರಣ ಮಾಡುತ್ತಿರುವುದನ್ನು ಸಮಾವೇಶ ಖಂಡಿಸಿತು. ಖಾಸಗೀಕರಣದ ವಿರುದ್ಧ ನಡೆಯುವ ಈ ಹೋರಾಟದಲ್ಲಿ ಈ ಕ್ಷೇತ್ರಗಳಿಗೆ ಸೇರಿದ ಕಾರ್ಮಿಕರು ಪಾಲ್ಗೊಳ್ಳಬೇಕೆಂದು ಸಮಾವೇಶ ಕರೆ ಕೊಟ್ಟಿತು.

ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳ ಶಕ್ತಿಗಳ ವಿರುದ್ಧ ಹೋರಾಡಲು ಹಾಗೂ ದೇಶದ ಆರ್ಥಿಕ ಸಾರ್ವಭೌಮತ್ವವನ್ನು ಮತ್ತು ಸ್ವಾತಂತ್ರ್ಯವನ್ನು ರಕ್ಷಿಸಲು ಸಿಐಟಿಯು ಅಧ್ಯಕ್ಷ ಸೂರ್ಯನಾರಾಯಣ ರಾವ್ ನೇತೃತ್ವದಲ್ಲಿ ಸಮಾವೇಶ ಪಣತೊಟ್ಟಿತು. ಕರ್ನಾಟಕ ರಾಜ್ಯ ರಾಷ್ಟ್ರೀಯ ಸಾಮೂಹಿಕ ಸಂಘಟನಗಳ ವೇದಿಕೆಯ ಸಂಚಾಲಕರಾದ ಕೆ.ವಿ.ಶ್ರೀನಿವಾಸನ್‌ರವರ ಸ್ವಾಗತದೊಂದಿಗೆ ಆರಂಭವಾದ ಸಮಾವೇಶದ ಕಾರ್ಯಕಲಾಪಗಳನ್ನು ಸೂರ್ಯನಾರಾಯಣರಾವ್, ಎಐಟಿಯುಸಿಯ ಎಂ.ಸಿ. ನರಸಿಂಹನ್, ಬ್ಯಾಂಕ್ ಅಧಿಕಾರಿಗಳ ಒಕ್ಕೂಟದ ಆರ್.ಎನ್. ಗೋಡ್‌ಬೋಳೆ, ಯುಟಿಯುಸಿಯ ಸಿಂಹಾದ್ರಿ, ಬ್ಯಾಂಕ್ ನೌಕರರ ಸಂಘದ ವಿಶ್ವನಾಥ್ ನಾಯಕ್ ಮತ್ತು ಮಹಿಳಾ ಸಂಘಟನೆಯ ಪ್ರತಿಭಾರವರಿದ್ದ ಅಧ್ಯಕ್ಷ ಮಂಡಳಿ ನಡೆಸಿಕೊಟ್ಟಿತು.

○

ಎಚ್ಚರಗೊಳ್ಳದ ರಾಜ್ಯ ಜನತಾದಳ ಮತ್ತು ಕಾಂಗ್ರೆಸ್ ಪಕ್ಷಗಳು

ಎನ್.ಕೆ. ಉಪಾಧ್ಯಾಯ

ಕೇಂದ್ರದಲ್ಲಿ ಬಿ.ಜೆ.ಪಿ. ಅಧಿಕಾರಕ್ಕೆ ಬಂದು ದೇಶದ ಐಕ್ಯತೆ ಸಮಗ್ರತೆಗೆ ದಳ್ಳುರಿ ಇಡುತ್ತಿರುವಾಗ, ತನ್ನ 'ಸ್ವದೇಶೀ' ನೀತಿಯ ಹೆಸರಲ್ಲಿ ಈಗಾಗಲೇ ಜಾರಿಯಲ್ಲಿರುವ ಆರ್ಥಿಕ ಉದಾರೀಕರಣ ನೀತಿಯ ಮೂಲಕ ಸಾರ್ವಜನಿಕ ಕ್ಷೇತ್ರವನ್ನು ಸಂಪೂರ್ಣವಾಗಿ ಖಾಸಗೀಕರಣಗೊಳಿಸಿ ವಿದೇಶಿ ಗುತ್ತೇದಾರಿ ಬಂಡವಾಳಶಾಹಿಗೊಪ್ಪಿಸುವ ತೀವ್ರ ಹುನ್ನಾರ ನಡೆಸುತ್ತಿರುವಾಗ, ಹಿಂದುತ್ವದ ಹೆಸರಲ್ಲಿ ದಲಿತರು, ಕ್ರಿಶ್ಚಿಯನ್ನರು, ಅಲ್ಪಮತಸ್ತರ ಮೇಲೆ ದೌರ್ಜನ್ಯ ನಡೆಸುತ್ತಿರುವಾಗ, ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳನ್ನೆಲ್ಲಾ ನೆಲಗೊಳಿಸಿ ಬಿ.ಜೆ.ಪಿ.ಯ ಸಿದ್ಧಾಂತ, ಬಿ.ಜೆ.ಪಿ. ಸರಕಾರದ ವಿರುದ್ಧ ಪ್ರಚಾರ, ಪ್ರಕ್ಷೋಭೆ ನಡೆಸಲು, ಸಂಯುಕ್ತ ಹೋರಾಟ ನಡೆಸಲು ತಂತಮ್ಮ ಪಕ್ಷಗಳಲ್ಲಿ ಐಕ್ಯತೆ, ಒಗ್ಗಟ್ಟು ಮಾಡಿಸಿ, ಹೋರಾಟಕ್ಕೆ ಅಣಿನೆರೆಸುವ ಚರಿತ್ರಾರ್ಹ ಜವಾಬ್ದಾರಿಯನ್ನು ಹೊರುವುದರಲ್ಲಿ ಜನತಾದಳ ಮತ್ತು ಕಾಂಗ್ರೆಸ್ ವಿಫಲವಾಗುತ್ತಿದೆಂಬ ಸಂಗತಿ ಇತ್ತೀಚೆಗೆ ನಡೆದ ಘಟನೆಗಳಿಂದ ಕಂಡು ಬರುತ್ತದೆ.

ಸಂಯುಕ್ತ ರಂಗದಲ್ಲಿ ಒಂದು ಪ್ರಮುಖ ಅಂಗ ಪಕ್ಷವಾಗಿ, ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಜನತಾದಳ ಅಧಿಕಾರಕ್ಕಾಗಿ ನಡೆಸುತ್ತಿರುವ ತೀವ್ರ ಗುಂಪುಗಾರಿಕೆಯಿಂದಾಗುತ್ತಿರುವ ಕೆಟ್ಟ ಪರಿಣಾಮಗಳತ್ತ ಈ ಹಿಂದೆಯೇ ಎಚ್ಚರಿಕೆ ನೀಡಲಾಗಿತ್ತು. ದೇಶದ ಮತ್ತು ರಾಜ್ಯದ ರಾಜಕೀಯ ಪರಿಸ್ಥಿತಿಯ ಗಾಂಭೀರ್ಯತೆಯನ್ನೇ ಅರಿಯಲು ಹಿಂದೇಟು ಹಾಕುತ್ತಿರುವ ರಾಜ್ಯದ ಜನತಾದಳ ಮುಖಂಡರಿಗೆ ಯಾವ ಭಾಷೆಯಲ್ಲಿ ತಿಳಿಹೇಳಬೇಕೆಂಬುದೇ ಅರಿವಾಗುತ್ತಿಲ್ಲ. ಬಿ.ಜೆ.ಪಿ. ಮತ್ತು ಇತರ ಮತೀಯ ಶಕ್ತಿಗಳಿಂದ ದೇಶವನ್ನು ರಕ್ಷಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳನ್ನೆಲ್ಲಾ ಒಟ್ಟಿಗೆ ಸೇರಿಸುವ ಪ್ರಯತ್ನದಲ್ಲಿ ಎಷ್ಟು ದೂರ ಕ್ರಮಿಸಲೂ ತಯಾರಿರುವಾಗ ಜನತಾದಳ ತನ್ನ ಹುಟ್ಟು ಗುಣವನ್ನೇ ಬಿಟ್ಟು ಕೊಡಲು ತಯಾರಾಗದಿರುವುದರಿಂದ ಮತೀಯ ಶಕ್ತಿಗಳಿಗೆ ಪ್ರೇರಣೆ ನೀಡುವಂತಾಗುತ್ತದೆ.

ಇನ್ನೆರಡು ತಿಂಗಳಲ್ಲಿ ಪಂಚಾಯತ್ ಚುನಾವಣೆಗಳನ್ನು, ಮುಂದಿನ ವರ್ಷ ಕೊನೆಯಲ್ಲಿ ವಿಧಾನಸಭೆ ಚುನಾವಣೆಯನ್ನು ಎದುರಿಸಬೇಕಾಗಿದೆ. ಇಂಥ ಸಂಧಿಗ್ದ ಪರಿಸ್ಥಿತಿಯಲ್ಲಿ ಪಕ್ಷ ಬಲಪಡಿಸುವುದು ಅತ್ಯಗತ್ಯ. ಆದರೆ ಕೆಲವು ತಿಂಗಳಾದರೂ ಅಧಿಕಾರ ಸ್ಥಾನದಲ್ಲಿರಬೇಕೆಂಬ ಮಹದಾಸೆ ಮುಖ್ಯ ಉದ್ದೇಶಕ್ಕೆ ಗ್ರಹಣ ಉಂಟು ಮಾಡುತ್ತಿದೆ.

ಲೋಕಸಭೆ ಚುನಾವಣೆಯ ಪರಿಣಾಮದಿಂದ ತತ್ತರಿಸಿದ ಜನತಾದಳ ಸ್ವವಿಮರ್ಶೆ ಮಾಡಿಕೊಳ್ಳದೆ ತನ್ನ ಗುಂಪುಗಾರಿಕೆಯನ್ನೇ ತೀವ್ರಗೊಳಿಸಿಕೊಂಡಿತು. ಅದನ್ನು ಬಗೆಹರಿಸಿಕೊಳ್ಳಲು ಮಂಡಳಿ-ನಿಗಮದ ಅಧ್ಯಕ್ಷರ ರಾಜೀನಾಮೆ ಪಡೆಯಿತು. ಮಂತ್ರಿ ಮಂಡಲದ ಸದಸ್ಯರ ರಾಜೀನಾಮೆ ಪಡೆಯುವ ಹಂತಕ್ಕೂ ಹೋಯಿತು. ಮಂತ್ರಿ ಮಂಡಳಿ ಪುನರ್ರಚನೆ ಅಥವಾ ವಿಸ್ತರಣೆ, ಮಂಡಳಿ-ನಿಗಮಗಳಿಗೆ ಹೊಸ ಅಧ್ಯಕ್ಷರ, ಸದಸ್ಯರ ನೇಮಕಾತಿ ಮೂಲಕ ರಾಜ್ಯದಲ್ಲಿ ಜನತಾದಳ ಸರಕಾರ ಮತ್ತು ಪಕ್ಷದ ವರ್ಚಸ್ಸನ್ನು ವೃದ್ಧಿಸುವ ನಿರ್ಣಯ ಕೈಗೊಂಡು ಗುಂಪುಗಾರಿಕೆಯನ್ನು ಮೂಲೆಗುಂಪು ಮಾಡುವ ನಿರ್ಣಯವಾಯಿತು. ವ್ಯಕ್ತಿ, ಜಾತಿ, ಗುಂಪುಗಳ ಪ್ರಭಾವದಿಂದಾಗಿ ಈ ಸಮಸ್ಯೆಗಳಿಗೆ ಪರಿಹಾರ ಕಾಣಲಿಲ್ಲ. ಮಂತ್ರಿ ಮಂಡಳದ ಪುನರ್ರಚನೆ-ವಿಸ್ತರಣೆ ಪ್ರಶ್ನೆಯನ್ನು ತಾತ್ಪೂರ್ತಿಕವಾಗಿ ಬದಿಗಿಟ್ಟು ನಿಗಮ-ಮಂಡಳಿ ಪ್ರಾಧಿಕಾರಿಗಳಿಗೆ ನೇಮಕಾತಿ ಮಾಡಲಾಗಿದೆ. ಜನತಾದಳದ 113 ಮಂದಿ ಶಾಸಕರ ಪೈಕಿ 46 ಜನ ಮಂತ್ರಿ ಮಂಡಳದಲ್ಲಿದ್ದರೆ, ಈಗ 19 ಮಂದಿ ನಿಗಮ-ಮಂಡಳಿಗಳ ಅಧ್ಯಕ್ಷರಾಗಿದ್ದಾರೆ. ಒಟ್ಟು 109 ನಿಗಮ-ಮಂಡಳಿ ಮತ್ತು ವಿವಿಧ ಪ್ರಾಧಿಕಾರಗಳಿಗೆ ಅಧ್ಯಕ್ಷರು, ಸದಸ್ಯರು ಸೇರಿ ಒಟ್ಟು 681 ಮಂದಿಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ಇಷ್ಟಾದರೂ ಇನ್ನೂ ಅಸಮಾಧಾನದ ಹೊಗೆ ಹಾರಾಡುತ್ತಿದೆ. ದೇವೇಗೌಡರ ಮಗ ಕುಮಾರಸ್ವಾಮಿ ಜನತಾದಳ ಅಧ್ಯಕ್ಷ ಬಿ.ಎಲ್. ಶಂಕರ್ ಅವರೊಡನೆ ಫೋನಿನಲ್ಲಿ ಅಸಹ್ಯರೀತಿಯಲ್ಲಿ ಮಾತಾಡಿದ ಘಟನೆ ಬೆಂಗಳೂರಿನ ಕೆಲವು ಮಂತ್ರಿಗಳು, ಶಾಸಕರು ವ್ಯಕ್ತಮಾಡಿದ ಪ್ರತಿಕ್ರಿಯೆ ಜನತಾದಳದಲ್ಲಿ ಹುದುಗಿರುವ ಭಿನ್ನಾಭಿಪ್ರಾಯದ ಆಳವನ್ನು ಗಾಂಭೀರ್ಯವನ್ನು ತೋರಿಸಿಕೊಡುತ್ತದೆ. ಇದು ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಗೆ, ಚಳುವಳಿಗೆ ಮಾರಕವಾಗಿದೆಂಬುದನ್ನು ಜನತಾದಳ ಮುಖಂಡರೂ ಕಾರ್ಯಕರ್ತರೂ ಮನದಟ್ಟು ಮಾಡಿಕೊಳ್ಳುವುದು ಅತ್ಯಗತ್ಯ.

ಬಿ.ಜೆ.ಪಿ. ಪೆಡಂಭೂತವನ್ನು ನಾಶಗೊಳಿಸಬೇಕಾಗಿರುವ ಈ ಸಂಧಿಕಾಲದಲ್ಲಿ ಮುಂಬರುವ ಪಂಚಾಯತ್ ವಿಧಾನ ಸಭೆ ಚುನಾವಣೆಗಳಲ್ಲಿ ಬಿ.ಜೆ.ಪಿಯನ್ನು ಜನರಿಂದ ದೂರೀಕರಿಸಬೇಕಾಗಿರುವ ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದಲ್ಲಿಯ ವಿದ್ಯಮಾನಗಳೂ

ಪುಟ 8 ಕ್ಕೆ





ರಾಣೇಬೆನ್ನೂರು: ಗಾಯಗಳು ಮಾಯಬೇಕು

ಬಂಗಾರಪೇಟೆಯಲ್ಲಿ ಅಂಬೇಡ್ಕರ್ ಪ್ರತಿಮೆಯನ್ನು ವಿರೂಪಗೊಳಿಸಲಾದ ಘಟನೆಯ ಪ್ರತಿಧ್ವನಿಯಾಗಿ ಹರತಾಳ ಹಿಂಸಾಚಾರಗಳಿಂದ ತತ್ತರಿಸಿದ ರಾಣೆಬೆನ್ನೂರ್ ನಗರದಲ್ಲಿ ಈಗ ಪರಿಸ್ಥಿತಿ ಸಹಜ ಸ್ಥಿತಿಗೆ ಮರಳಿದೆ. ಆದರೆ ನಗರದ ದಲಿತ ಮತ್ತು ದಲಿತೇತರರ ಮನದಾಳದಲ್ಲಾದ ಘಾಯಗಳು ಮಾಯಲು ಅದೆಷ್ಟು ಕಾಲ ಬೇಕೋ ಹೇಳಲಾಗದು.

ಅಂದು ಸೋಮವಾರ ದಲಿತ ಸಂಘರ್ಷ ಸಮಿತಿಯು ನೀಡಿದ ಬಂದ್ ಕರೆಗೆ ನಗರದ ಜನಜೀವನ ಸ್ತಬ್ಧಗೊಂಡಿತ್ತು. ಎಲ್ಲ ವ್ಯಾಪಾರವಹಿವಾಟು ಸ್ಥಗಿತಗೊಂಡಿತ್ತು. ಬಹುತೇಕ ಅಂಗಡಿಕಾರರು ಸ್ವಯಂ ಪ್ರೇರಣೆಯಿಂದ ತಮ್ಮ ಅಂಗಡಿಗಳನ್ನು ಬಂದ್ ಮಾಡಿದ್ದರು. ಕೆಲವು ಅಂಗಡಿಗಳನ್ನು ಬಲವಂತವಾಗಿಯೂ ಬಂದ್ ಮಾಡಿಸಲಾಗಿತ್ತು. ದೊಡ್ಡ ಪೇಟೆಯಲ್ಲಿ ಗಣ್ಯರೊಬ್ಬರಿಗೆ ಸೇರಿದ ಚಹದ ಅಂಗಡಿಯೊಂದು ಬೆಳಿಗ್ಗೆಯಿಂದಲೇ ತೆರೆದಿತ್ತು. ಬಂದ್‌ಪರ ಯುವಕರ ಗುಂಪೊಂದು ಬಂದು ಆಕ್ಷೇಪ ವೆತ್ತಿತು. ಇನ್ನು ಸ್ವಲ್ಪ ಸಮಯದೊಳಗಾಗಿ ಅಂಗಡಿಯನ್ನು ಮುಚ್ಚುವುದಾಗಿ ಅಂಗಡಿಯ ವನು ಭರವಸೆ ಕೊಟ್ಟಾಗ ಅವರು ಹೊರಟುಹೋಗಿದ್ದರು. ಆದರೆ ಸಂಜೆಯ ವರೆಗೂ ಆ ಚಹದ ಅಂಗಡಿ ಬಂದ್ ಆಗಲಿಲ್ಲ. ಕುಪಿತಗೊಂಡ ಯುವಕರು ಮತ್ತೆ ಬಂದರು. ಬಂದ್ ಯಶಸ್ವಿಗೊಳಿಸಲು ಬೆಳಿಗ್ಗೆಯಿಂದ ಓಡಾಡುತ್ತಿದ್ದ ಅವರಿಗೆ ತಿನ್ನಲು ಕುಡಿಯಲು ಎಲ್ಲಿಯೂ ಏನೂ ಸಿಕ್ಕಿರಲಿಲ್ಲ. ಲಭ್ಯವಿದ್ದ ತಿಂಡಿತಿನಿಸುಗಳನ್ನು ತಿಂದು ದುಡ್ಡು ಕೊಡದೆ ಹೊರಟಾಗ ಅಂಗಡಿಕಾರ ಮತ್ತು ಅವರ ನಡುವೆ ವಾಗ್ವಾದ ಆರಂಭವಾಯಿತು. ಮಾತಿಗೆ ಮಾತು ಬೆಳೆದಾಗ ಅಲ್ಲಿದ್ದ ಇಡ್ಲಿ ಸಾಂಬಾರು ಮಣ್ಣುಪಾಲಾಯಿತು. ಅಂಗಡಿಕಾರನ ಅಂಗಿ ಹರಿದುಹೋಗುವಷ್ಟು ಹಲ್ಲೆಯಾಯಿತು. ಅಂಗಡಿಯವನಿಗೆ ಸಾಂತ್ವನ ಹೇಳಲು ಬಂದ ದೊಡ್ಡ ಪೇಟೆಯ ಜಾತಿ ಬಂಧುಗಳು ಊರಿಗೆ ಬ: ವವರು ನೀರಿಗೆ ಬಾರದಿರಲಾರರು ಎಂದು ಧೈರ್ಯ ಹೇಳಿದ್ದರು.

ಸಂಜೆಗಳೆದು ಕತ್ತಲಾಗುತ್ತಿದ್ದಾಗ ಕೇರಿಯ ಒಂದಿಬ್ಬರು ಹುಡುಗರು ದೊಡ್ಡಪೇಟೆಯಲ್ಲಿ ಹಾದು ಹೋಗುತ್ತಿದ್ದಾಗ ಇವರ ಕೈಗೆ ಸಿಕ್ಕಿಬಿದ್ದರು. ಸೇಡು ತೀರಿಸಿಕೊಳ್ಳಲಾಯಿತು. ಸವರ್ಣೀಯರು ಸೇರಿ ತಮ್ಮ ಮಕ್ಕಳನ್ನು ಹೊಡೆದಿದ್ದಾರೆ ಎಂಬ ಸುದ್ದಿ ಕೇರಿಗೆ ತಲುಪಿದ ತಕ್ಷಣವೇ ರೊಚ್ಚಿಗೆದ್ದ ಗುಂಪೊಂದು ಕೇರಿಯಿಂದ ದೊಡ್ಡಪೇಟೆಯ ಕಡೆ ಧಾವಿಸಿತು. ಅಂಗಡಿಯವನ ಬೆಂಬಲಕ್ಕಾಗಿಯೂ ಅಲ್ಲಿ ಜನ ಜಂಗುಳಿ ನೆರೆದಿತ್ತು. ಎರಡೂ ಕಡೆಯವರಿಂದ ತಪ್ಪುಗಳಾಗಿದ್ದು ವಿವಾದವನ್ನು ಮುಂದುವರೆಸದಿರಲು ಆಗತಾನೇ ಪ್ರತ್ಯಕ್ಷವಾದ ಪಾಕಿ ಇಲಾಖೆಯವರು ಸೂಚಿಸಿದಾಗ ಎರಡೂ ಗುಂಪುಗಳು ಹಿಂದೆ ಸರಿದಿದ್ದವು.

ದಲಿತೇತರ ವಿಭಾಗಗಳಲ್ಲಿ ಹೊತ್ತಿದ ಬೆಂಕಿ ಆರಿರಲಿಲ್ಲ. ಪರಿಣಾಮವಾಗಿ ಬೆಳಗಾಗುತ್ತಿದ್ದಂತೆ ಮತ್ತೊಂದು ಬಂದ್ ಕರೆ ಪ್ರಸಾರವಾಯಿತು. ದಲಿತರನ್ನು ಬಿಟ್ಟು ಇನ್ನುಳಿದ ಎಲ್ಲಾ ಜಾತಿಗಳ ಜನಗಳು ಸ್ವಯಂಪ್ರೇರಣೆಯಿಂದ ಬೀದಿಗಿಳಿಯಲಾರಂಭಿಸಿದರು. ಯಾರು ಯಾರ ಮಾತನ್ನೂ ಕೇಳುವಂತಿರಲಿಲ್ಲ. ಸಾವಿರಾರು ಜನರ ಗುಂಪೊಂದು ಮನವಿಸಲ್ಲಿಸಲು ತಹಸಿಲ್ದಾರರ ಕಛೇರಿ ಕಡೆ ಹೊರಟಾಗ ಇನ್ನೊಂದು ಅನಿಯಂತ್ರಿತ ಗುಂಪು ದಲಿತರ ಹರಳಯ್ಯ ನಗರದ ಕಡೆ ನುಗ್ಗಿತು. ಪೊಲೀಸರು ಇವರನ್ನು ತಡೆಯಲು ಯತ್ನಿಸುತ್ತಿದ್ದಂತೆ ಎರಡೂ ಕಡೆಗಳಿಂದ ಕಲ್ಲುತೂರಾಟ ಆರಂಭವಾಗಿ ಪೊಲೀಸರೇ ಹೆಚ್ಚಾಗಿ ಘಾಯಗೊಂಡರು. ಕ್ಷಣಾರ್ಧದಲ್ಲಿ ಅದೊಂದು ರಣರಂಗವಾಯಿತು. ಮನೆ ಮನೆಗಳಿಗೆ ನುಗ್ಗಿ ಸಾಮಾನುಗಳನ್ನು ಬೀದಿಗೆಸೆಯ ಲಾಯಿತು. ಸಣ್ಣ ಪುಟ್ಟ ಅಂಗಡಿಗಳನ್ನು ಲೂಟಿಮಾಡಲಾಯಿತು. ಆಟೋ ರಿಕ್ಷಾಗಳು, ದ್ವಿಚಕ್ರವಾಹನಗಳು ಹುಲ್ಲಿನ ಬಣವೆಗಳು ಬೆಂಕಿಗೆ ಆಹುತಿಯಾದವು. ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದ್ದ ಜನರನ್ನು ಚದುರಿಸಲು ಪೊಲಿಸರು ಲಾಠಿಪ್ರಹಾರ, ಅಶ್ರುವಾಯು ಪ್ರಯೋಗ ಮಾತ್ರವಲ್ಲದೆ ಗುಂಡು ಸಹ ಹಾರಿಸಿದರು. ಪೊಲೀಸರ ಗುಂಡೇಟಿನಿಂದ 17 ಜನ ಗಾಯಗೊಂಡರೆ ಕಲ್ಲು ತೂರಾಟದಿಂದ 9 ಜನ ಪೋಲೀಸರು ಗಾಯಗೊಂಡಿದ್ದರು. ಸುಮಾರು 20 ರಿಂದ 25 ಲಕ್ಷ ರೂಪಾಯಿ ಬೆಲೆಯ ಆಸ್ತಿಪಾಸ್ತಿ ನಷ್ಟವಾಗಿದೆ ಎಂದು ಅಂದಾಜು ಮಾಡಲಾಗಿದ್ದು ದೊಂಬಿ ಹಾಗೂ ಕೊಲೆಯ ಯತ್ನದ ಆರೋಪದ ಮೇಲೆ ಪೋಲೀಸರು 84 ಜನರನ್ನು ಬಂಧಿಸಿ ಕ್ರಮ ಜರುಗಿಸಿದ್ದಾರೆ. ಮನೆಗಳಿಗೆ ನುಗ್ಗಿ ಮಕ್ಕಳು ಮಹಿಳೆಯರೆನ್ನದೆ ಸಿಕ್ಕವರನ್ನೆಲ್ಲಾ ಹೊಡೆದು ಬಡೆದು ಪೊಲೀಸರು ತಮ್ಮ ಸೇಡು ತೀರಿಸಿಕೊಳ್ಳಲು ಮಾತ್ರ ಮರೆಯಲಿಲ್ಲ.

ರಾಣೇಬೇನ್ನೂರಿನಲ್ಲಿ ನಡೆದ ಈ ಹಿಂಸಾಚಾರ ಮತ್ತು ತದನಂತರ ಕರ್ಫ್ಯೂ ನಗರವಾಸಿಗಳನ್ನು ತಲ್ಲಣಗೊಳಿಸಿದೆ. ಹಿಂದೆಂದೂ ಇಲ್ಲಿಯ ದಲಿತ ಮತ್ತು ದಲಿತೇತರರ ನಡುವೆ ಗಲಭೆ ನಡೆದಿರುವುದಿಲ್ಲ. ಇಲ್ಲಿ ದಲಿತರು ಮತ್ತು ಸವರ್ಣೀಯರು ವಾಸಿಸುವ ಓಣಿಗಳು ಪರಸ್ಪರ ಹತ್ತಿರದಲ್ಲಿಯೇ ಇವೆ. ದಲಿತರ ನಡುವೆ ದಲಿತ ಸಂಘರ್ಷ ಸಮಿತಿಯು ಇತ್ತೀಚಿನ ವರ್ಷಗಳಲ್ಲಿ ಕ್ರಿಯಾಶೀಲವಾಗಿದ್ದರೂ ವರ್ಷಕ್ಕೊಮ್ಮೆ ಎಪ್ರಿಲ್ ತಿಂಗಳಲ್ಲಿ ಅಂಬೇಡ್ಕರ್ ಜಯಂತಿಯನ್ನು ಆಚರಿಸುವುದೇ ಅದರ ಪ್ರಮುಖ ಚಟುವಟಿಕೆಯಾಗಿತ್ತು. ಯಾರೋ ಮಾಡಿದ ತಪ್ಪಿಗೆ ಯಾರಿಗೋ ಶಿಕ್ಷೆಯಾಯಿತು ಎಂದು ನೊಂದಿರುವ ಇಲ್ಲಿಯ ಎಲ್ಲ ಜಾತಿಗಳ ಜನಗಳ ಮನಸ್ಸಿನಲ್ಲಿ ಆಳವಾದ ಗಾಯಗಳಾಗಿದ್ದು ಅವುಗಳು ಮಾಯಲು ಬಹಳ ಕಾಲ ಬೇಕಾಗಬಹುದು.

ಅಂಬೇಡ್ಕರ್ ಅವರ ಪ್ರತಿಮೆಗಳೇ ಏಕೆ ನಮ್ಮ ದೇಶದಲ್ಲಿ ಮೇಲಿಂದ ಮೇಲೆ ಅವಮಾನಕ್ಕೆ ಒಳಗಾಗುತ್ತವೆ? ನಮಗೆ ಸ್ವಾತಂತ್ರ್ಯ ದೊರೆತು 50 ವರ್ಷಗಳಾದರೂ, ನಾವು ಇಂದು 21 ನೇ ಶತಮಾನಕ್ಕೆ ಕಾಲಿಡುತ್ತಿರುವಾಗಲೂ ನಮ್ಮ ಮನಸ್ಸುಗಳು ಇನ್ನೂ ಆ ಅನಾಗರಿಕ ಜಾತಿ ಪದ್ಧತಿಯ ಹಿಡಿತದಿಂದ ಬಿಡುಗಡೆಯಾಗಿಲ್ಲ ಎಂಬುದನ್ನು ಇಂತಹ ಘಟನೆಗಳ ಪುನರಾವರ್ತನೆ ಖಚಿತಪಡಿಸುತ್ತದೆ. ದಲಿತರು ಮೆರವಣಿಗೆಯಲ್ಲಿ ಬಂದರೆ ನಾವು ಸಹಿಸುವುದಿಲ್ಲ. ಅವರು ಜಯಘೋಷ ಮಾಡಿದರೆ ನಾವು ಸಹಿಸುವುದಿಲ್ಲ. ಅವರು ಹೊಸ ಬಟ್ಟೆ ಧರಿಸಿದರೆ ನಾವು ಸಹಿಸುವುದಿಲ್ಲ. ದಲಿತ ಹುಡುಗನೊಬ್ಬ ಎಸ್.ಎಸ್.ಎಲ್.ಸಿ ಪಾಸಾದರೆ ಅವನ ಕಾಲು ಮುರಿಯುತ್ತೇವೆ. ಅವನು ನಮ್ಮ ಮಗಳೊಬ್ಬಳನ್ನು ಪ್ರೀತಿಸಿದ್ದಾನೆಂದಾದರೆ ಅವನನ್ನು ತುಂಡು ತುಂಡಾಗಿ ಕತ್ತರಿಸಿ ಹಳ್ಳಕ್ಕೆ ಎಸೆಯುತ್ತೇವೆ. ನಾವು ಮನುಷ್ಯರಾಗುವುದು ಯಾವಾಗ?

ದಲಿತರ ನೈಜ ವಿಮೋಚನೆಯ ದಾರಿ ಕಂಡುಕೊಳ್ಳುವಲ್ಲಿ ಅಂಬೇಡ್ಕರ್ ವಿಫಲರಾಗಿದ್ದರೂ ಅವರು ಶತಮಾನಗಳಿಂದ ಧ್ವನಿ ಕಳೆದುಕೊಂಡವರ ಧ್ವನಿಯಾಗಿದ್ದಾರೆ. ತಮಗೆ ಉಸಿರು ನೀಡಿದವನಿಗೆ ಅವಮಾನ ಮಾಡಲಾಗದ ಅವರು ರೊಚ್ಚಿಗೇಳುವುದು ಸಹಜವಾಗಿದೆ. ದಲಿತೇತರರು ಅವರ ಭಾವನೆಗಳನ್ನು ಅರ್ಥಮಾಡಿಕೊಳ್ಳಲಾರದಷ್ಟು ತಮ್ಮ ಮನಸ್ಸುಗಳನ್ನು ಕಲ್ಲಾಗಿಸಬಾರದು.

ದಲಿತರಾದ ನಾವುಗಳು ಸಹ ಕೆಲವೊಮ್ಮೆ ತಪ್ಪು ದಾರಿ ತುಳಿಯುತ್ತೇವೆ. ಆರ್ಥಿಕವಾಗಿ ಭದ್ರವಾಗಿರುವ ದಲಿತ ಮುಖಂಡರು ಕೆಲವರು ತಮ್ಮ ವೈಯಕ್ತಿಕ ಸ್ವಾರ್ಥಕ್ಕಾಗಿ ನಮ್ಮ ದಾರಿ ತಪ್ಪಿಸುತ್ತಾರೆ. ಸಂಘ ಶಕ್ತಿಯನ್ನು ಕೇವಲ ಭಾವನಾತ್ಮಕ ವಿಷಯಗಳಿಗೆ ಹೆಚ್ಚಾಗಿ ಬಳಸಿಕೊಳ್ಳುತ್ತಾರೆ. ಕಿತ್ತುತಿನ್ನುತ್ತಿರುವ ಬಡತನ ಸಹಿಸಲಾಗದ ಬೆಲೆಏರಿಕೆ, ವಸತಿಹೀನತೆ ಮೊದಲಾದ ಪ್ರಶ್ನೆಗಳಿಗಾಗಿ ನಾವು ಬೀದಿಗಿಳಿಯುವುದಿಲ್ಲ. ಒಟ್ಟು ಸುಲಿಗೆಯ ವಿರುದ್ಧದ ಮುಖ ಪ್ರವಾಹದಿಂದ ದಲಿತರು ದೂರ ಉಳಿಯುವುದೆಂದರೆ ಈ ಸುಲಿಗೆಕೋರ ವ್ಯವಸ್ಥೆಯನ್ನು ಗಟ್ಟಿಗೊಳಿಸಿದಂತಾಗುತ್ತದೆ ಎಂದು ಅರ್ಥಮಾಡಿಕೊಳ್ಳಬೇಕಾಗಿದೆ.

- ನಿತ್ಯಾನಂದಸ್ವಾಮಿ

ಈಗ ಪಟೇಲರಿಗೂ ಉದಾರೀಕರಣದ ಹೆದ್ದಾರಿ



ಕರ್ನಾಟಕ ಸರ್ಕಾರವು ಈಗ ಉದಾರೀಕರಣದ ಹೆದ್ದಾರಿಯನ್ನೇ ಹಿಡಿದು ಸಾಗತೊಡಗಿದೆ. ವಿಶ್ವಾದ್ಯಂತ ಐ.ಎಂ.ಎಫ್. ಗಳು ಯಾವುದೇ ಷರತ್ತುಗಳನ್ನು ಹೇರದೆ ಸಾಲ ನೀಡುತ್ತಿವೆ ಎಂದು ಹಿಂದೆ ಕೇಂದ್ರ ಸರ್ಕಾರ ಹೇಳುತ್ತಿತ್ತು. ದೇಶದ ಹಿತದ ದೃಷ್ಟಿಯಿಂದ ನಾವು ಉದಾರೀಕರಣದ ಹಾದಿ ಹಿಡಿದಿದ್ದೇವೆ ಎಂದು ಅಂದಿನ ಕಾಂಗ್ರೆಸ್ ಸರ್ಕಾರ ಹೇಳಿತ್ತು. ಆದರೆ ಇದು ಸುಳ್ಳು ಎಂಬುದು ವಿವಿಧ ರಾಜ್ಯ ಸರ್ಕಾರಗಳ ಅನುಭವಕ್ಕೆ ಬಂದಿತ್ತು.

ವಿದ್ಯುತ್ ವಲಯದ ವಿವಿಧ ಯೋಜನೆಗಳ ಜಾರಿಗೆ ಸಾಲ ಯಾಚಿಸುವಾಗ ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್.ಗಳ ಷರತ್ತುಗಳ ಅನುಭವ ಅವುಗಳಿಗೆ ಆಗತೊಡಗಿದೆ.

ಈಗ ಕರ್ನಾಟಕ ಸರ್ಕಾರ ವಿದ್ಯುತ್ ವಿತರಣೆಯನ್ನು ಖಾಸಗೀಕರಿಸಲು ಹೊರಟಿದೆ. ಇದಕ್ಕೆ ಮುಖ್ಯ ಕಾರಣ ವಿಶ್ವಬ್ಯಾಂಕಿನ ಷರತ್ತುಗಳು. ವಿದ್ಯುತ್ ವಲಯದ ಉದಾರೀಕರಣ ಮಾಡದೇ ಹೋದಲ್ಲಿ ಈ ವಲಯದ ಯೋಜನೆಗಳಿಗೆ ಸಾಲ ನೀಡುವುದಿಲ್ಲವೆಂದು ವಿಶ್ವ ಬ್ಯಾಂಕ್ ಹಠ ಹಿಡಿದು ಕುಳಿತಿತ್ತು. ಆದ್ದರಿಂದಲೇ ಸರ್ಕಾರದ ಈ ಕ್ರಮ. ವಿಶ್ವಬ್ಯಾಂಕ್ ಅಧ್ಯಕ್ಷರು ರಾಜ್ಯದ ಭೇಟಿಗೆ ಬಂದಾಗಲೇ ಈ ಷರತ್ತನ್ನು ಸ್ಪಷ್ಟವಾಗಿ ಹೇಳಿದ್ದರಂತೆ.

ಸರ್ಕಾರ ವಿದ್ಯುತ್ ವಿತರಣೆಯ ಖಾಸಗೀಕರಣದ ನಿರ್ಧಾರ ತೆಗೆದುಕೊಂಡು ಬ್ರಿಟಿಷ್ ಕಂಪನಿಯೊಂದರ ಜೊತೆಗೆ ಒಪ್ಪಂದ ಮಾಡಿಕೊಳ್ಳುವ ನಿರ್ಧಾರವನ್ನು ಆಗಲೇ ಕೈಗೊಂಡಿದೆಯಂತೆ. ಇದಲ್ಲದೆ ಕರ್ನಾಟಕ ವಿದ್ಯುತ್ ನಿಗಮವನ್ನು ಪುನರ್ರಚಿಸುವ ನಿರ್ಧಾರವನ್ನು ಅದು ಕೈಗೊಂಡಿದೆಯಂತೆ. ಉದಾರೀಕರಣದ ಸಂದರ್ಭದಲ್ಲಿ ಪುನರ್ರಚನೆ ಎಂದರೆ ಖಾಸಗೀಕರಣದ ಕ್ರಮಗಳು ಎಂಬುದನ್ನು ಬೇರೆ ಒಡೆದು ಹೇಳಬೇಕಾಗಿಲ್ಲ.

ಕರ್ನಾಟಕ ಸರ್ಕಾರದ ಮಂತ್ರಿ ಮಂಡಳ ಈ ನಿರ್ಧಾರದ ಜೊತೆಗೆ ಎರಡು ಸರ್ಕಾರಿ ವಲಯದ (ರಾಜ್ಯ) ಉದ್ದಿಮೆಗಳಾದ ಮೈಸೂರ್ ಲ್ಯಾಂಪ್ಸ್ ಮತ್ತು ಮೈಸೂರ್ ಎಸಿಟೇಟ್ ಮತ್ತು ರಸಾಯನಿಕಗಳ ಕಂಪನಿಗಳನ್ನು ಖಾಸಗೀಕರಿಸುವ ನಿರ್ಧಾರವನ್ನು ಕೈಗೊಂಡಿದೆ.

ಈ ಎರಡು ಉದ್ದಿಮೆಗಳ ನೌಕರರ ಮೇಲೆ ಸ್ವಯಂ ನಿವೃತ್ತಿ ಯೋಜನೆಯನ್ನೂ ಹೇರಲಾಗುತ್ತದಂತೆ. ಇಂತಹ ನಿರ್ಧಾರಗಳನ್ನು ಘೋಷಿಸುವುದರ ಜೊತೆಗೆ ಈ ಕಂಪನಿಗಳು ಮತ್ತು ಕರ್ನಾಟಕ ವಿದ್ಯುತ್ ಮಂಡಳಿಯ ನೌಕರರ ಹಿತಾಸಕ್ತಿಗಳನ್ನು ಕಾಯಲಾಗುವುದು ಎಂದು ಸರ್ಕಾರೀ ವಕ್ತಾರರು ಹೇಳಿದ್ದಾರೆ. ಬೀದಿಪಾಲು ಮಾಡಿ ನೌಕರರ ಹಿತಾಸಕ್ತಿ ಕಾಯುವ ಪರಿ ಇರಬಹುದು.

ಉದಾರೀಕರಣದ ಆರ್ಥಿತ ನೀತಿ ಕೇಂದ್ರ ಸರ್ಕಾರದ್ದು, ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಸ್ವಾತಂತ್ರ್ಯ ಇಲ್ಲ. ಆದರೆ ರಾಜ್ಯ ಸರ್ಕಾರ ಪ್ರತಿಭಟನೆ ತೋರಬಹುದು ಮತ್ತು ಕಾರ್ಮಿಕ ವಿರೋಧಿ ಕ್ರಮಗಳನ್ನು ಖಂಡಿತ ತೆಗೆದುಕೊಳ್ಳದ ನಿರ್ಧಾರ ಕೈಗೊಳ್ಳಬಹುದಾಗಿತ್ತು. ಆದರೆ ಅದಕ್ಕೆ ಬದಲು ಕರ್ನಾಟಕ ಸರ್ಕಾರ ವಿಶ್ವಬ್ಯಾಂಕಿನ ಅಣತಿಯಂತೆ ಕುಣಿಯತೊಡಗಿದೆ.

ಗೋಧಿ, ಎಣ್ಣೆಕಾಳುಗಳ ಆಮದು

ದೇಶದಲ್ಲಿ ಉದಾರೀಕರಣ ಬಂದ ಮೇಲೆ ಕೃಷಿ ಏರುಪೇರಾಗಿದೆ. ಹೊಟ್ಟೆಗೆ ಆಹಾರ ಬೆಳೆದವರಿಗೆ ತೀರ ಕಷ್ಟಕರವಾದ ಪರಿಸ್ಥಿತಿ ಉಂಟಾಗಿ ರೈತರು ವಾಣಿಜ್ಯ ಬೆಳೆಗಳನ್ನು ಬೆಳೆವಂತಹ ಒತ್ತಡದ ಪರಿಸ್ಥಿತಿ ಉಂಟಾಗಿದೆ. ಇಂತಹ ಸಂದರ್ಭದಲ್ಲಿ ಆಹಾರ ಧಾನ್ಯ, ಎಣ್ಣೆಕಾಳುಗಳನ್ನು ಆಮದು ಮಾಡುವ ಬದಲು ದೇಶದೊಳಗೆ ಅವುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಬೆಳೆದು ಸ್ವಾವಲಂಬನೆಯನ್ನು ಸಾಧಿಸುವುದು ದೇಶದ ಗುರಿಯಾಗಬೇಕು.

ಆದರೆ ಕೇಂದ್ರದ ಬಿ.ಜೆ.ಪಿ.ಯ ಸರ್ಕಾರ ಈಗ ಗೋಧಿ ಮತ್ತು ಎಣ್ಣೆಕಾಳುಗಳ ಆಮದನ್ನು ಓ.ಜಿ.ಎಲ್ (ಅಂದರೆ ಓಪನ್ ಜನರಲ್ ಲೈಸನ್ಸ್)ಅಡಿ ತಂದಿದೆ.

ದೇಶದೊಳಗೆ ಈ ಸರಕುಗಳ ಬೆಲೆ ಏರಿಕೆಯನ್ನು ತಡೆಯುವುದಕ್ಕಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸರ್ಕಾರ ಹೇಳಿಕೊಂಡಿದೆ.

ಬೆಲೆ ಏರಿಕೆಯನ್ನು ತಡೆಯುವಲ್ಲಿ ಬಿ.ಜೆ.ಪಿ. ಸರ್ಕಾರ ಎಂತಹ ಸಾಧನೆ ತೋರಿದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯವೇ. ವಿರೋಧ ಪಕ್ಷದಲ್ಲಿರುವವರೆಗೆ ಉದಾರೀಕರಣವನ್ನು ವಿರೋಧಿಸುತ್ತಾ ಸ್ವಾವಲಂಬಿ ಭಾರತ ಕಟ್ಟುವ ಮಾತನಾಡಿದ ಬಿ.ಜೆ.ಪಿ. ಸರ್ಕಾರ ಈಗ ತನ್ನ ಕ್ರಮಗಳಿಂದಲೇ ತನ್ನ ನಿಜ ಗುಣವನ್ನು, ಕಾಳಜಿಯನ್ನು ತೋರಿಸುತ್ತಿದೆ.

ಈಗ ಬಡವರ ಕೈಗೆಟುಕದ ಅಂಚೆ

ಹಾಗೆ ಶ್ರೀಮಂತರು ಫೋನ್ ಇಟ್ಟುಕೊಳ್ಳುತ್ತಾರೆ. ಫೋನಿನ ಮೂಲಕ ಸಂಪರ್ಕ ಅವಶ್ಯಕತೆಗಳನ್ನು ಪೂರೈಸಿ ಕೊಳ್ಳುತ್ತಾರೆ. ಆದರೆ ಬಡವರು ಅಂಚೆಗಳ ಮೂಲಕ. ಮಧ್ಯಮ ವರ್ಗಕ್ಕೂ ಅಂಚೆಯ ಅವಶ್ಯಕತೆ ಹೆಚ್ಚಾಗಿಯೇ ಇದೆ. ಫೋನಿನಲ್ಲಿ ಮಾತನಾಡಲಾಗದಷ್ಟು ಬರವಣಿಗೆ ಮೂಲಕ ಸಾಧಿಸಬಹುದು. ವ್ಯಾಪಾರ ವಹಿವಾಟುಗಳಿಗೂ ಅಂಚೆ ಸೌಲಭ್ಯ ಬಹುಮುಖ್ಯ.

ಈಗ ಕೇಂದ್ರ ಸರ್ಕಾರ ಅಂಚೆ ಸೌಲಭ್ಯಗಳ ದರಗಳನ್ನು ತೀವ್ರವಾಗಿ ಹೆಚ್ಚಿಸಿದೆ. ಸಾಧಾರಣ ಕಾರ್ಡುಗಳನ್ನು ಬಿಟ್ಟರೆ ಬೇರೆ ಎಲ್ಲಾ ಅಂಚೆ ಸೌಲಭ್ಯಗಳ ದರಗಳನ್ನು ಹೆಚ್ಚಿಸಿದೆ.

ಆಗಸ್ಟ್ 31ರಿಂದ ಜಾರಿಗೆ ಬರುವ ಈ ದರಗಳು ಖಂಡಿತವಾಗಿ ಜನರ ಬಾಳಿನ ಹೊರೆಯನ್ನು ಹೆಚ್ಚಿಸುತ್ತದೆ. ಅಂಚೆ ಇಲಾಖೆಗೆ ವಾರ್ಷಿಕವಾಗಿ 270 ಕೋಟಿ ರೂಪಾಯಿ ಸಂಗ್ರಹಿಸಲು ಈ ಬೆಲೆ ಹೆಚ್ಚಳ ಅನುಕೂಲ ಮಾಡಿಕೊಡುತ್ತದಂತೆ.

ಉದಾರೀಕರಣದ ಆರ್ಥಿಕ ನೀತಿಗಳು ಜನ ಸಾಮಾನ್ಯರ ಮೇಲೆ ಹೊರೆಗಳ ಸರಮಾಲೆಯನ್ನೇ ಹೊರೆಸುವ ರೀತಿ ಇದು. ಕಾಂಗ್ರೆಸ್‌ಗಿಂತ ಭಿನ್ನ ಸರ್ಕಾರ ನೀಡುತ್ತೇವೆ ಎಂದ ಬಿ.ಜೆ.ಪಿ. ಸರ್ಕಾರದ ಕ್ರಮ ಇದು. ಉದಾರೀಕರಣದ ಆರ್ಥಿಕ ನೀತಿಯನ್ನು ನಾವು ವಿರೋಧಿಸುತ್ತೇವೆ ಎಂದು ಬೊಗಳೆ ಬಿಡುವ ಬಿ.ಜೆ.ಪಿ. ಸರ್ಕಾರದ ಈ ಕ್ರಮ ಹೇಗಿದೆ. ಬೇರೆ ಪುರಾವೆ ಬೇಕೆ?

ಪ್ಲಾಂಟೇಷನ್ ಉತ್ಪನ್ನಗಳ ಆಮದು

ಪ್ಲಾಂಟೇಷನ್ ಉತ್ಪನ್ನಗಳ ಆಮದನ್ನು ಕೇಂದ್ರ ಸರ್ಕಾರ ಉದಾರೀಕರಿಸಿರುವುದನ್ನು ದೇಶದ ಪ್ಲಾಂಟೇಷನ್ ಬೆಳೆಗಾರರ ಸಂಘ ಉಪಾಸಿ ಕಟುವಾಗಿ ಟೀಕಿಸಿದೆ.

ಹೀಗೆ ಆಮದನ್ನು ಉದಾರೀಕರಿಸಿದರೆ ಬಂಡವಾಳಿಗರಾದ ಪ್ಲಾಂಟೇಷನ್‌ದಾರರಿಗೆ ನಷ್ಟ. ಜನ ಸಾಮಾನ್ಯರಿಗೇನು ಎಂದು ಯಾರಾದರೂ ಕೇಳಬಹುದು. ಯಾವುದೇ ಉದ್ದಿಮೆ ಕಷ್ಟದಲ್ಲಿ ಸಿಕ್ಕಿಕೊಂಡರೂ ಮೊದಲು ಅದರ ಪರಿಣಾಮ ಬಂಡವಾಳಿಗರನ್ನು ತಟ್ಟುವುದಿಲ್ಲ. ಅಲ್ಲಿನ ಕಾರ್ಮಿಕರನ್ನು ಅದು ತಟ್ಟುತ್ತದೆ. ಬಂಡವಾಳಿಗರಿಗೆ ಹಾನಿಯಾಗು ವುದಿಲ್ಲವೆಂದೇನಲ್ಲ. ಆದರೆ ಆ ಹಾನಿಯಿಂದಾಗಿ ಬಂಡವಾಳಿಗ ಉಪವಾಸಬೀಳುವಂತಾಗುವುದಿಲ್ಲ.

ಆದರೆ ಕಾರ್ಮಿಕರು ಉಪವಾಸ ಬೀಳುವಂತಾಗುತ್ತದೆ. ಆತ ಉದ್ಯೋಗ ಕಳೆದುಕೊಳ್ಳುತ್ತಾನೆ. ನಿರುದ್ಯೋಗದ ಜೊತೆಗೆ ಉಪವಾಸ, ಬೀದಿವಾಸಗಳು ಸೇರಿಕೊಂಡೇ ಬರುತ್ತವೆ.

ಈಗಾಗಲೇ ಆಗ್ನೇಯ ಏಶಿಯಾದ ದೇಶಗಳಲ್ಲಿ ಆರ್ಥಿಕ ಬಿಕ್ಕಟ್ಟು ಇರುವುದರಿಂದ ಈ ಉತ್ಪನ್ನ ಅಲ್ಲಿ ಕಡಿಮೆ ಬೆಲೆಯಲ್ಲಿ ಸಿಗುತ್ತವೆ. ಕಡಿಮೆ ಬೆಲೆಗೆ ಭಾರತಕ್ಕೆ ಅವು ಆಮದಾದರೆ ಭಾರತದ ಪ್ಲಾಂಟೇಷನ್ ಉದ್ಯಮ ಹಾಳಾಗಿಬಿಡುತ್ತದೆ. ಕೇಂದ್ರದ ಬಿ.ಜೆ.ಪಿ. ಸರ್ಕಾರ ಪ್ಲಾಂಟೇಷನ್ ಕಾರ್ಮಿಕರಿಗೆ ನೀಡುತ್ತಿರುವ ಉಡುಗೊರೆ (ಶಾಪ) ಇದು.

ಭಾರತದ ರಫ್ತಿನ ಮೇಲೆ ಯೂರೋಪಿನ ಪ್ರಹಾರ

ಭಾರತದ ರಫ್ತು ಅಭಿವೃದ್ಧಿ ಕಾರ್ಯಕ್ರಮಗಳ ಮೇಲೆ ಯೂರೋಪಿನ ಕಮಿಷನ್ ಹೊಡೆತ ಹಾಕಿದೆ. ಇದಕ್ಕೆ ಅದು ನೀಡಿರುವ ಕಾರಣ ರಫ್ತುದಾರರಿಗೆ ಪರೋಕ್ಷ ಸಹಾಯಧನ ನೀಡಿಕೆಯಾಗುತ್ತದೆ ಎಂಬುದು.

ಈ ನಾಲ್ಕು ಯೋಜನೆಗಳು ಅಂದರೆ ಡಿಇಪಿಬಿ, ಇಪಿಸಿಜಿ, ಐಟಿಇಎಸ್ ಮತ್ತು ಪಾಸ್‌ಬುಕ್ ಪರೋಕ್ಷವಾಗಿ ಸರ್ಕಾರದ ಹಣಕಾಸು ನೆರವಾಗುತ್ತದೆ. ಆದ್ದರಿಂದ ಈ ನಿರ್ಧಾರವನ್ನು ಅದು ಕೈಗೊಂಡು ಭಾರತದ ರಫ್ತಿನ ಮೇಲೆ ನಿರ್ಬಂಧ ಹೇರುವ ಮಾತನ್ನಾಡಿದೆ.

ಭಾರತದ ರಫ್ತು ಈಗಾಗಲೇ ಒದ್ದಾಡುತ್ತಿರುವಾಗ ಈ ಕ್ರಮ ದೇಶದ ಆರ್ಥಿಕ ಸಮಸ್ಯೆಗಳನ್ನು ಹೆಚ್ಚಿಸಲಿದೆ.

ಕೃಷಿ ವಲಯಕ್ಕೆ ಕಂಪನಿಗಳಿಗೆ ಸ್ವಾಗತ

ಈ ಸ್ವಾಗತ ಕೋರುತ್ತಿರುವವರು ಕೇಂದ್ರದ ಕೃಷಿ ಖಾತೆಯ ಮಂತ್ರಿ ಸೋಮ್‌ಪಾಲ್. ಉದಾರೀಕರಣದ ಮೂಲಕ ಅಭಿವೃದ್ಧಿ ಸಾಧಿಸುವುದೆಂದರೆ ಖಾಸಗಿಯವರ ಅಭಿವೃದ್ಧಿ ಸಾಧಿಸುವುದು. ಸಣ್ಣ ಮತ್ತು ಅತಿ ಸಣ್ಣ ರೈತರೇ ಹೆಚ್ಚಾಗಿರುವ ಮತ್ತು ಬಹುತೇಕ ಭೂಮಿ ಜಮೀನುದಾರರ ಹಿಡತದಲ್ಲಿರುವಾಗ ಕೃಷಿ ವಲಯದಲ್ಲಿ ಉತ್ತಮ ತಂತ್ರಜ್ಞಾನದ ಬಳಕೆ ಸಾಧ್ಯವಾಗುವುದಿಲ್ಲ.

ಕೇಂದ್ರ ಸರ್ಕಾರ ಈ ವಲಯದಲ್ಲಿ ತಂತ್ರಜ್ಞಾನ ಅಭಿವೃದ್ಧಿಗೆ ಕ್ರಮಗಳನ್ನು ಕೈಗೊಳ್ಳಬೇಕು. ಆದರೆ ಉದಾರೀಕರಣದ ಹೆಸರಿನಲ್ಲಿ ಸರ್ಕಾರೀ ಮಧ್ಯಪ್ರವೇಶವನ್ನು ಕಡಿತಗೊಳಿಸುತ್ತಿರುವ ಸರ್ಕಾರ ಈಗ ಕಂಪನಿಗಳು ಕೃಷಿ ವಲಯಕ್ಕೆ ಬಂದು ಅಭಿವೃದ್ಧಿ ಕಾರ್ಯದಲ್ಲಿ ತೊಡಗಬೇಕು ಎಂದು ಹೇಳುತ್ತಿದೆ.

ಅದಕ್ಕೆ ಕಂಪನಿಗಳಿಗೆ ಬೇಕಾಗುವ ಎಲ್ಲಾ ಅನುಕೂಲಗಳನ್ನು ಮಾಡಿಕೊಡುವ ಕ್ರಮಗಳನ್ನು ಅದು ಕೈಗೊಳ್ಳುತ್ತಿದೆ.

ಲಾಭಗಳ ಮೇಲೇ ಕಣ್ಣಿಟ್ಟು ಕೆಲಸ ಮಾಡುವ ಕಂಪನಿಗಳು ಎಂತಹ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಬಲ್ಲವು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯವೇ!

ರಿಯಾಯಿತಿ ನೀವು ಕೊಡಿ: ನಾವು ಲಾಭ ಮಾಡಿಕೊಳ್ಳುತ್ತೇವೆ

ರಫ್ತು ಹೆಚ್ಚಿಸುವ ಸಲುವಾಗಿ ಕೇಂದ್ರ ಸರ್ಕಾರ ರಫ್ತುದಾರರಿಗೆ ಕಡಿಮೆ ಬಡ್ಡಿ ದರಗಳಲ್ಲಿ ಸಾಲ ದೊರೆಯುವಂತೆ ಮಾಡಿದೆ. ಇದರಿಂದ ನಿಜವಾಗಿ ರಫ್ತು ಹೆಚ್ಚಾಗುವುದಾದರೆ ದೇಶದ ಆರ್ಥಿಕಕ್ಕೆ ಸ್ವಲ್ಪ ಮಟ್ಟಿಗಿನ ಲಾಭವಿರುವುದು ನಿಜ. ಆದರೆ ರಫ್ತು ಹೆಚ್ಚಾಗದೇ ಹೋದರೆ?

ರಫ್ತು ಹೆಚ್ಚಾಗದೇ ಹೋದರೆ ದೇಶಕ್ಕೆ ಆ ರೀತಿಯ ಹಾನಿ ಒಂದೆಡೆಯಾದರೆ ಅನಾವಶ್ಯಕವಾಗಿ ರಿಯಾಯಿತಿ ಸಾಲ ನೀಡುವ ಖರ್ಚು ಇನ್ನೊಂದೆಡೆ.

ರಫ್ತುದಾರರು ಇನ್ನೂ ಒಂದು ನವೀನ (ಅಷ್ಟು ನವೀನವೇನಲ್ಲ) ದಾರಿಯನ್ನು ಕಂಡುಕೊಂಡಿದ್ದಾರೆ. ರಫ್ತಿನ ಹೆಸರಿನಲ್ಲಿ ಕಡಿಮೆ ಬಡ್ಡಿ ದರದಲ್ಲಿ ಸಾಲ ಪಡೆದು ಅದೇ ಹಣವನ್ನು ಬೇರೆಡೆ ಹೆಚ್ಚಿನ ಬಡ್ಡಿಗೆ ಠೇವಣಿ ಇಡುತ್ತಾರೆ. ಆ ಮೂಲಕ ಅಪಾರ ಲಾಭ ಗಳಿಸುತ್ತಾರೆ.

ಸರ್ಕಾರದ ಹಣದಲ್ಲಿ ಲಾಭ ಮಾಡಿಕೊಳ್ಳುವ ರೀತಿ ಚೆನ್ನಾಗಿದೆಯಲ್ಲವೆ?

ವಿವಿಧೆಡೆ ಸಾಮೂಹಿಕ ಸಂಘಟನೆಗಳ ವೇದಿಕೆ ರಚನೆ

ಬಿಜಾಪುರ: ಜನ ಸಾಮಾನ್ಯರನ್ನು ಹಾಗೆಯೇ ಕಾರ್ಮಿಕ, ರೈತವಿಭಾಗವನ್ನು ಬಾಧಿಸುತ್ತಿರುವ ಹೊಸ ಆರ್ಥಿಕ ನೀತಿ ಮತ್ತು ಕೋಮು ಶಕ್ತಿಗಳನ್ನು ಎದುರಿಸುವ ಸಲುವಾಗಿ ರಾಷ್ಟ್ರಮಟ್ಟದಲ್ಲಿ ನಿರ್ಮಾಣ ವಾಗಿರುವ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಮಹತ್ವವನ್ನು, ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಹೊಸ ಆರ್ಥಿಕ ನೀತಿಯಿಂದಾಗಿ ಉದ್ಭವವಾಗು ತ್ತಿರುವ, ಅದರಿಂದಾಗಿ ದುಡಿಯುವ ಜನತೆಯ ಮೇಲಾಗುತ್ತಿರುವ ದುಷ್ಪರಿಣಾಮಗಳನ್ನು ವಿವರಿಸುತ್ತಾ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ವಿಠ್ಠಲ ರಾವಗಾಳೆ, ಎಲ್ಐಸಿ ಯೂನಿಯನ್ನಿನ ಕಾರ್ಯದರ್ಶಿ ನದಾಫ, ರೈತ ಸಂಘದ ಅಧ್ಯಕ್ಷ ಭೀಮಸಿ ಕಲಾದಗಿ, ಎಐಟಿಯುಸಿ ಮುಖಂಡ ಪ್ರಕಾಶ ಹಿಡಿನಳ್ಳಿ, ಎಲ್.ಕೆ. ಚಂಚಲಕರ, ಮಹಿಳಾ ಸಂಘಟನೆಯ ಸುರೇಖಾ ರಜಪೂತ್, ಕಾರ್ಮಿಕ ಮುಖಂಡ ಮನೂಸಾಬ ಕಲಾದಗಿ ಮೊದಲಾದವರು ಭಾಷಣ ಮಾಡಿ ತೀವ್ರ ಹೋರಾಟದ ಅವಶ್ಯಕತೆಯನ್ನು ಒತ್ತಿ ಹೇಳಿದರು. ರಾಜ್ಯ ಸಮಾವೇಶದ ನಂತರ ಬಿಜಾಪುರ ಜಿಲ್ಲಾ ಸಮಾವೇಶ ಕರೆಯುವ ನಿರ್ಣಯವಾಯಿತು.

ಮಂಡ್ಯ: ಜಿಲ್ಲೆಯ ಮಳವಳ್ಳಿ ತಾಲೂಕಿನ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ (ರಾಸಾಸಂವೇ)ಯ ಸಭೆಯು ಆಗಸ್ಟ್ 25 ರಂದು ನಡೆಯಿತು. ವಿವಿಧ ಸಂಘಟನೆಗಳ 20ಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದ ಸಭೆಯಲ್ಲಿ ಎನ್.ಎಲ್. ಭರತ್ ರಾಜ್ ಸಂಚಾಲಕರಾಗಿರುವ ಸಮಿತಿಯು ರಚನೆಗೊಂಡಿತು.

ಮದ್ದೂರು: ನಗರದ ಪ್ರವಾಸಿ ಮಂದಿರದಲ್ಲಿ ಆಗಸ್ಟ್ 22 ರಂದು ನಡೆದ ಸಭೆಯಲ್ಲಿ ಸಾ.ಸಂ.ರಾ.ವೇ ಯನ್ನು ರಚಿಸಲಾಯಿತು.

ಸಿಐಟಿಯು, ಕರ್ನಾಟಕ ರಾಜ್ಯ ರೈತ ಸಂಘ ಎಸ್.ಎಫ್.ಐ, ಡಿ.ವೈ.ಎಫ್.ಐ ಬಿಜಿವಿಎಸ್ ಹಾಗೂ ಪತ್ರಕರ್ತರು ಸೇರಿದಂತೆ ವಿವಿಧ ಸಂಘಟನೆಗಳ 25 ಕಾರ್ಯಕರ್ತರು ಭಾಗವಹಿಸಿದ್ದ ಸಭೆ ಯಲ್ಲಿ ಪತ್ರಕರ್ತ ದೇಶಹಳ್ಳಿ ಮೋಹನ್ ಕುಮಾರ್ ಸಂಚಾಲಕರಾಗಿ ಆಯ್ಕೆ ಗೊಂಡರು.

ಸಹ ಸಂಚಾಲಕರಾಗಿ ಪ್ರಕಾಶ್. ಧನಂಜಯ, ಲಿಂಗರಾಜ್, ರೇವಣ್ಣ, ನಾಗೇಶ್ ಚಂದ್ರಗುರು, ಶಂಕರಯ್ಯ ಮತ್ತು ರಾಮು ಆಯ್ಕೆಗೊಂಡರು.

ಚಿಂತಾಮಣಿ: ಆಗಸ್ಟ್ 20 ರಂದು ನಡೆದ ವಿವಿಧ ಸಂಘಟನೆಗಳ 50 ಕಾರ್ಯಕರ್ತರ ಸಭೆಯಲ್ಲಿ ಸಾ.ಸಂ.ರಾ.ವೇ ಸಮಿತಿಯನ್ನು ರಚಿಸಲಾಯಿತು. ಬಿ. ರಾಜಾಮಣಿ. ಆರ್. ಪ್ರಕಾಶ್, ಎನ್. ಗಿರೀಶ್ ಎಸ್. ನಾಗರಾಜ್,ಜಿ.ನಾರಾಯಣಪ್ಪ, ರವೀಂದ್ರ ಬಾಬು,ಬಿ.ಪಿ. ನರಸಿಂಹ, ಲಮಾಣಿ, ಎಚ್.ಎಸ್. ರಾಜ ಕುಮಾರ್ ವೆಂಕಟ ರೆಡ್ಡಿ ಹಾಗೂ ಜಿ.ಸಿ. ಬಯ್ಯಾರೆಡ್ಡಿ ಇವರನ್ನೊಳಗೊಂಡ ವೇದಿಕೆಯ ಉಸ್ತುವಾರಿ ಸಮಿತಿ ಅಸ್ತಿತ್ವಕ್ಕೆ ಬಂದಿತು.

ಶುಲ್ಕ ಏರಿಕೆ ವಿರುದ್ಧ ಗುಲ್ಬರ್ಗ ವಿವಿ ವಿದ್ಯಾರ್ಥಿಗಳ ಧರಣಿ

ಆಗಸ್ಟ್ 18 ರಂದು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್ಎಫ್ಐ) ನೇತೃತ್ವದಲ್ಲಿ ಗುಲ್ಬರ್ಗ ವಿ.ವಿ. ಮುಂದೆ ಪೇಮೆಂಟ್ ಸೀಟುಗಳ ರದ್ದತಿಗೆ ಒತ್ತಾಯಿಸಿ, ಮರು ಎಣಿಕೆ ಹಾಗೂ ಮರು ಮೌಲ್ಯಮಾಪನ ಶುಲ್ಕವನ್ನು ಹೆಚ್ಚಿಸಿರುವುದನ್ನು ವಿರೋಧಿಸಿ ಗುಲ್ಬರ್ಗ ವಿ.ವಿ.ಮುಂದೆ ಧರಣಿ ಸತ್ಯಾಗ್ರಹ ಮಾಡಿ ಆಡಳಿತ ಕಾರ್ಯಕಲಾಪಗಳನ್ನು ಸ್ಥಗಿತಗೊಳಿಸಲಾಯಿತು.

ಈ ಧರಣಿ ಸತ್ಯಾಗ್ರಹವನ್ನು ಉದ್ದೇಶಿಸಿ ಬೆಂಗಳೂರು ವಿಶ್ವ ವಿದ್ಯಾಲಯದ ಸೆನೆಟ್ ಸದಸ್ಯರಾದ ಹಾಗೂ ಎಸ್ಎಫ್ಐ ರಾಜ್ಯ ಉಪಾಧ್ಯಕ್ಷರಾದ ಕೆ.ಎಸ್.ಲಕ್ಷ್ಮಿ ಮಾತನಾಡುತ್ತಾ ಕೇಂದ್ರ ಸರ್ಕಾರದ ನೀತಿಯ ಭಾಗವಾಗಿ ಗುಲ್ಬರ್ಗ ವಿಶ್ವ ವಿದ್ಯಾಲಯವು ಸ್ನಾತಕೋತ್ತರ ಕೋರ್ಸುಗಳನ್ನು ಸ್ವಯಂ ಹಣಕಾಸುಗೊಳಿಸಿರುವುದರಿಂದ ಶ್ರೀಮಂತರಿಗೆ ಮಾತ್ರ ಶಿಕ್ಷಣ ಎಂದಾಗಿದೆ. ಆರ್ಥಿಕವಾಗಿ ಸಾಮಾಜಿಕ ವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಕನಸಾಗಿದೆ ಎಂದರು.

ಗುಲ್ಬರ್ಗ ವಿ.ವಿ.ಈ ವರ್ಷದಿಂದ ಸ್ನಾತಕೋತ್ತರ ಕಲಾ ವಿಭಾಗದ ವಿದ್ಯಾರ್ಥಿಗಳಿಗೆ 10,000 ರೂ., ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ 15,000 ರೂ, ಎಂ.ಸಿ.ಎ ವಿದ್ಯಾರ್ಥಿಗಳಿಗೆ 25,000 ರೂ. ವೆಚ್ಚದ ಪಾವತಿ ಸೀಟುಗಳನ್ನು ಪ್ರಾರಂಭಿಸಿದ್ದು ಈ ದುಬಾರಿ ಶುಲ್ಕ ಭರಿಸಲಾಗದ ಇತರ ವಿ.ವಿ.ಗಳಿಗೆ ವಲಸೆ ಹೋಗುತ್ತಿದ್ದಾರೆ. ಪ್ರತಿಭಾವಂತರಾಗಿದ್ದಾಗಲೂ ಸಹ ಈ ನೀತಿಯಿಂದಾಗಿ ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಕೂಡಲೇ ಪೇಮೆಂಟ್ ಸೀಟುಗಳನ್ನು ರದ್ದುಗೊಳಿಸಬೇಕೆಂದು ಇಲ್ಲವಾದರೆ ನಾಲ್ಕು ಜಿಲ್ಲೆಗಳನ್ನೊಳಗೊಂಡು ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿ ಚಳುವಳಿಯನ್ನು ಆರಂಭಿಸ ಬೇಕಾಗುತ್ತದೆ ಎಂದು ಕುಲಸಚಿವರನ್ನು ಎಚ್ಚರಿಸಲಾಯಿತು.

ಎಸ್ಎಫ್ಐನ ಜಿಲ್ಲಾ ಅಧ್ಯಕ್ಷರಾದ ಜೈಲಾಲ ತೋಟದಮನಿ ಅವರು ಸಚಿವರಿಗೆ ಮನವಿ ಪತ್ರವನ್ನು ಸಲ್ಲಿಸಿದರು. ಮನವಿ ಪತ್ರವನ್ನು ಸ್ವೀಕರಿಸಿದ ಕುಲಸಚಿವರು ಮುಂಬರುವ ಸಿಂಡಿಕೇಟ್ ಸಭೆಯಲ್ಲಿ ಈ ಸಮಸ್ಯೆಗಳನ್ನು ಕುರಿತು ಪ್ರಸ್ತಾಪಿಸಲಾಗುತ್ತದೆ ಎಂದರು.

ಈ ಚಳುವಳಿಯು ನೇತೃತ್ವವನ್ನು ಸೋಮನಾಥ ಹತ್ತಿಕಂಕಣ, ಶಿವಲೀಲಾ ಬೀರಾದಾರ, ವನಿತಾ ಬೀರಾದಾರ, ಜಗನ್ನಾಥ, ಮಲ್ಲಿಕಾರ್ಜುನ ಸುಶೀಲ ಮಾನಪಡೆ ವಹಿಸಿದ್ದರು.

ಸಿಪಿಐ(ಎಂ) ಸದಸ್ಯರ ಅಪಹರಣಕ್ಕೆ ಖಂಡನೆ

ಇತ್ತೀಚೆಗೆ ಬಳ್ಳಾರಿ ತಾಲೂಕು ಕುರುಗೋಡು ಪ್ರದೇಶದ ಬಾದನಹಟ್ಟಿ ಗ್ರಾಮದ ಪಕ್ಷದ ಸ್ಥಳೀಯ ಸಮಿತಿ ಸದಸ್ಯರಾದ ಮಲ್ಲಯ್ಯ ಹಾಗೂ ಸದಸ್ಯರಾದ ಪೆನ್ನೋಬಳಪ್ಪ ಅವರನ್ನು ಆ ಗ್ರಾಮದ ಭೂಮಾಲಿಕರ ಒಳಸಂಚಿನಿಂದ ಸರಿ ರಾತ್ರಿಯಲ್ಲಿ ಅಪರಿಚಿತ ವ್ಯಕ್ತಿಗಳಿಬ್ಬರು ಕಬ್ಬಿಣದ ಸಮಾನು ತುಂಬಿದ ಲಾರಿಯನ್ನು ಅನ್ ಲೋಡ್ (ಖಾಲಿ ಮಾಡಲು) ಮಾಡಬೇಕೆಂದು ಹಾಗೂ ಇದಕ್ಕಾಗಿ ಉಳಿದ ಹಮಾಲೀ ಸಂಗಾತಿಗಳೆಲ್ಲಾ ನಿಮಗಾಗಿ ಊರ ಹೊರಗೆ ಕಾದಿರುವುದಾಗಿ ಸುಳ್ಳು ಹೇಳಿ ಕರೆದು ಕೊಂಡು ಹೋಗಿ ಆದಾಗಲೇ ಕಾದಿದ್ದ ಮತ್ತಿಬ್ಬರು ಗೂಂಡಾಗಳ ಸಹಾಯದಿಂದ ಬಲವಂತವಾಗಿ ಜೀಪ್‌ಗೆ ಹತ್ತಿಸಿಕೊಂಡು ಊರಿನಿಂದ 3-4 ಕಿ.ಮೀ ದೂರದ ಹಗಲಿನಲ್ಲೂ ಜನ ಸುಳಿಯದ ಪ್ರದೇಶಕ್ಕೆ ಕರೆದೊಯ್ದು ಅಲ್ಲಿ ಕಾಯುತ್ತಿದ್ದ ಮತ್ತಿಬ್ಬರು ಗೂಂಡಾಗಳು ಸೇರಿ ನೀವು ಈ ಪ್ರದೇಶದಲ್ಲಿ ಕಮ್ಯುನಿಷ್ಟ್ ಪಾರ್ಟಿ ಕಟ್ಟುತ್ತಿದ್ದೀರಾ ದೌರ್ಜನ್ಯ ಮಾಡುತ್ತೀರಾ ಬೆಂಡೆತ್ತುತ್ತೇವೆ ಎಂದು ನೂಕಾಡಿದುದೇ ಅಲ್ಲದೇ ತೀವ್ರ ಬೆದರಿಕೆ ಹಾಕಿರುವ ಪ್ರಕರಣವನ್ನು ಸಿಪಿಐ(ಎಂ) ಬಳ್ಳಾರಿ ಗ್ರಾಮಾಂತರ ಸ್ಥಳೀಯ ಸಮಿತಿ ಬಲವಾಗಿ ಖಂಡಿಸಿದೆ.

ನಿರಂತರವಾಗಿ ಕುರು ಗೋಡು ಪ್ರದೇಶದಲ್ಲಿ ಸಿಪಿಐ(ಎಂ) ಮುಂದಾಳ್ತನದಲ್ಲಿ ಭೂಮಾಲಿಕ ಪಟ್ಟ ಭದ್ರಹಿತಗಳ ವಿರುದ್ಧ ಬೆಳೆದು ಬರುತ್ತಿರುವ ಚಟುವಟಿಕೆಗಳ ಸರಮಾಲೆಯೇ ಹತಾಶ ಭೂಮಾಲಿಕರ ಈ ಕೃತ್ಯಕ್ಕೆ ಕಾರಣವಾಗಿದೆ ಯೆಂದು ಸಿಪಿಐ(ಎಂ) ಸ್ಥಳೀಯ ಸಮಿತಿ ಹೇಳಿದೆ. ಇದೇ ಸಂದರ್ಭದಲ್ಲಿ ಇಂತಹ ಬೆದರಿಕೆಯ ಪ್ರಯತ್ನ ಗಳನ್ನು ಹೀಗೆಯೇ ಮುಂದುವರಿಸಿದ್ದೇ ಆದಲ್ಲಿ ಅದಕ್ಕೆ ಸಮನಾದ ಬೆಲೆಯನ್ನು ತೆರಬೇಕಾದೀತೆಂದು ಎಚ್ಚರಿಸಿದೆ.

ಕರ್ನಾಟಕ ಪ್ರಾಂತ ರೈತ ಸಂಘದಿಂದ ಬಾದನ ಹಟ್ಟಿ ಗ್ರಾಮದ ಬಡ ರೈತ ಸೋರ್ವನ ಹೊಲದಲ್ಲಿ ಇತ್ತೀಚೆಗೆ ಅಕ್ರಮ ವಾಗಿ ನೀರಾವರಿ ಇಲಾಖೆಯ ಅಧಿಕಾರಿಗಳ ಕೈಜೋಡಿಕೆಯಿಂದ ಕೆಲ ಭೂಮಾಲಿಕರು ಅನಧಿಕೃತ ಕಾಲುವೆ ಯೊಂದನ್ನು ಪಬ್ಬಾಳಿಕೆಯ ಮೂಲಕ ತೆಗೆದು ಕೊಂಡು ಹೋದುದನ್ನು ಸಮರ್ಥವಾಗಿ ಎದುರಿಸುದುದೇ ಮಾತ್ರವಲ್ಲಾ ಈ ಹೋರಾಟದ ಮುಂಚೂಣಿಯಲ್ಲಿದ್ದುದೇ ಆ ಸಂಗಾತಿಗಳ ಅಪಹರಣಕ್ಕೆ ಕಾರಣವಾಗಿರಬೇಕೆಂದು ಅನುಮಾನಿಸಲಾಗಿದೆ. ಇಂತಹ ಘಟನೆ ಯನ್ನು ಖಂಡಿಸಿ ಗ್ರಾಮದಲ್ಲಿ ಬೃಹತ್ ಬಹಿರಂಗ ಸಭೆಯನು ನಡೆಸಲು ತೀರ್ಮಾನಿಸಲಾಗಿದೆ.

ಏಳುಬೆಂಚಿ ಗ್ರಾಮದಲ್ಲಿ ಸಭೆ

ಕೃಷಿ ಕೂಲಿಕಾರರು ತಮ್ಮ ಗ್ರಾಮದ ಸ್ವಚ್ಛತೆಗೆ ಒತ್ತಾಯಿಸಿ ಸಭೆ ನಡೆಸಿದರು. ಈ ಸಭೆಯಲ್ಲಿ ಗ್ರಾಮ ಪಂಚಾಯತಿಯವರು ಗ್ರಾಮ ಸ್ವಚ್ಛತೆಯ ಬಗ್ಗೆ ತಳೆದಿರುವ ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಲಾಯಿತು. ಸ್ವಚ್ಛತಾ ಕಾರ್ಯವನ್ನು ತೀವ್ರಗತಿಯಲ್ಲಿ ಕೈಗೊಳ್ಳುವಂತೆ ಗ್ರಾಮ ಪಂಚಾಯತಿಯ ಮೇಲೆ ಒತ್ತಡ ತರಲು ಸಹಿಸಂಗ್ರಹ ಕಾರ್ಯವನ್ನು ಕೈಗೊಳ್ಳಲು ತೀರ್ಮಾನಿಸಲಾಯಿತು. ನಂತರ ನೂತನ ಗ್ರಾಮ ಘಟಕವನ್ನು ರಚಿಸಲಾಯಿತು.

ಅಧ್ಯಕ್ಷರಾಗಿ ಕೆ.ಕೃಷ್ಣಪ್ಪ, ಉಪಾಧ್ಯಕ್ಷರಾಗಿ ಚಿಲುವಾದಿ ಗಂಗಮ್ಮ ಹೊನ್ನೂರಮ್ಮ ಸಿ.ಹನುಮಂತಪ್ಪ, ಕಾರ್ಯದರ್ಶಿಯಾಗಿ ಹೆಚ್.ಮಲಕಪ್ಪ, ಸಹಕಾರ್ಯದರ್ಶಿಯಾಗಿ ಬಿ.ಹನುಮಂತ, ಖಜಾಂಚಿಯಾಗಿ ಡಿ ತಿಮ್ಮಪ್ಪ ಆಯ್ಕೆಯಾದರು.

ಇಂದಿರಾನಗರ

ಇಂದಿರಾನಗರದ ಕೃಷಿಕೂಲಿಕಾರರು ತಮ್ಮ ಗ್ರಾಮದಲ್ಲಿ ಕುಡಿಯುವ ನೀರು, ವಿದ್ಯುತ್ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆಗೆ ಬಹಳ ದಿನಗಳಿಂದಲೂ ಹೋರಾಟ ನಡೆಸುತ್ತಾ ಬಂದಿದ್ದರೂ ಗ್ರಾಮ ಪಂಚಾಯ್ತಿ ಇತ್ತ ಗಮನ ಹರಿಸಿಲ್ಲ. ಆಗಸ್ಟ್ 15 ರಂದು ನಡೆದ ಕೃಷಿಕೂಲಿಕಾರರ ಸಭೆ ಈ ವಿಷಯವನ್ನು ಚರ್ಚಿಸಿ, ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಲು ತೀರ್ಮಾನಿಸಿತು. ಈ ಸಂದರ್ಭದಲ್ಲಿ ನೂತನ ಗ್ರಾಮ ಸಮಿತಿ ರಚಿಸಲಾಯಿತು. ಅಧ್ಯಕ್ಷರಾಗಿ ಬಸಪ್ಪ, ಉಪಾಧ್ಯಕ್ಷರಾಗಿ ಸಿದ್ದಿಸಾಬ್, ಹಲುಗಪ್ಪ, ಕಾರ್ಯದರ್ಶಿಯಾಗಿ ಎನ್.ಹನುಮಂತ, ಸಹಕಾರ್ಯದರ್ಶಿಯಾಗಿ ಅಬ್ದುಲ್ ರಜಾಕ್ ಸಾಬ ಆಯ್ಕೆಯಾದರು.

ಕುರುಗೋಡು ಗ್ರಾ.ಪಂ. ಅಧ್ಯಕ್ಷರಿಗೆ ಛೀಮಾರಿ

ಕರ್ನಾಟಕ ರಾಜ್ಯದ ಪಂಚಾಯ್ತಿಗಳ ಸಾಧನೆ ಅತ್ಯಂತ ಕ್ರಾಂತಿಕಾರಕವಾದದ್ದು ಅಲ್ಲದೆ ಭಾರತ ದೇಶಕ್ಕೆ ಮಾದರಿಯಾಗಿದೆ ಎಂದು ರಾಜ್ಯದ ಪಂ. ರಾಜ್ ಸಚಿವ ಎಂ.ಪಿ. ಪ್ರಕಾಶ್‌ರವರು ಹೇಳಿದ್ದಾರೆ. ಈ ಹೇಳಿಕೆ ಎಷ್ಟು ಸತ್ಯ ಎಂಬುದು ಮೊನ್ನೆ ಯಲ್ಲಾಪುರ ಗ್ರಾಮದಲ್ಲಿ ಕುರುಗೋಡು ಪಂಚಾಯ್ತಿಯವರು ನಡೆಸಿದ ಗ್ರಾಮ ಸಭೆಯಲ್ಲಿ ಬಟಾ ಬಯಲಾಯ್ತು.

'ಇಂದಿರಾ ಅವಾಜ್' ಯೋಜನೆಯಡಿಯಲ್ಲಿ ವಸತಿ ಹೀನರಿಗೆ ವಸತಿ ಹಂಚುವ ಕಾರ್ಯಕ್ರಮವಿತ್ತು. ಫಲಾನುಭವಿಗಳನ್ನು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡ ಬೇಕೆಂದಿದ್ದರೂ, ಪಂಚಾಯ್ತಿಯ ಮಹನೀಯರು ಆಫೀಸಿನಲ್ಲೇ ಫಲಾನುಭವಿಗಳ ಪಟ್ಟಿ ತಯಾರಿಸಿದ್ದು ಅದನ್ನು ಗ್ರಾಮ ಸಭೆಯಲ್ಲಿ ಪ್ರಕಟಿಸಿದರು. ಅರ್ಜಿ ಕೊಟ್ಟ ಕೂಲಿಕಾರರಿಗೆ ಎದೆಯಲ್ಲಿ ಬರೆ ಎಳೆದಂತಾಗಿ ಪಂಚಾಯ್ತಿಯ ಅಧ್ಯಕ್ಷರನ್ನು ಕಾರ್ಯದರ್ಶಿಯವರನ್ನು ಕೃಷಿಕೂಲಿಕಾರರು ತರಾಟೆಗೆ ತೆಗೆದು ಕೊಂಡು ಛೀಮಾರಿ ಹಾಕಿದರು. ಇದು ಕಾನೂನಿಗೆ ವಿರುದ್ಧ, ಅನಾಯದ ಕ್ರಮ ಎಂದು ಬಲವಾಗಿ ಖಂಡಿಸಿದರು.

ಕೊನೆಗೆ ಪಟ್ಟಿಯನ್ನು ಬದಲಾಯಿಸಲೇ ಬೇಕಾಯ್ತು ಇದು ಕೃಷಿ ಕೂಲಿಕಾರರ ಪ್ರತಿಭಟನೆಗೆ ಸಿಕ್ಕ ಪ್ರತಿಫಲ.

ಡಿ.ವೈ.ಎಫ್.ಐ ಘಟಕ ರಚನೆ

ಬಿಜಾಪುರ .ಜಿಲ್ಲೆಯ ಬಸವನ ಬಾಗೇವಾಡಿ ಗ್ರಾಮದಲ್ಲಿ ಇತ್ತೀಚೆಗೆ ಕರ್ನಾಟಕ ಪ್ರಾಂತ ರೈತ ಸಂಘದ ಬೀಮಸಿ ಕಲಾದಗಿ ಡಿ.ವೈ.ಎಫ್. ಐ ಮುಖಂಡ ಲಿಂಗರಾಜು. ಬಿದರಕುಂದಿ ಹಾಗೂ ಜೆ.ಎಂ.ಎಸ್.ನ ಸುರೇಖಾ ರಜಪೂತರ ಮಾರ್ಗದರ್ಶನದಲ್ಲಿ ಡಿವೈಎಫ್ಐ ಘಟಕ ರಚನೆ ಗೊಂಡಿತು.

ಪದಾಧಿಕಾರಿಗಳು:

ಅಧ್ಯಕ್ಷ-ಸಂಗಾಯ್ಯ-ಬಿ-ಹಿರೆಮಠ, ಉಪಾಧ್ಯಕ್ಷ-ಚಂದ್ರಶೇಖರ್.ಹ. ಬಿರಾದಾರ. ಕಾರ್ಯದರ್ಶಿ- ಇರಸಂಗಪ್ಪ.ಹ. ಬಿದರ ಕುಂದಿ, ಸಹ ಕಾರ್ಯದರ್ಶಿಗಳು:- ರಾಮಣ್ಣ .ಜಿ ಕಿಳಿಗುಡ್ಡಿ, ಮುತ್ತಪ್ಪ ತಿ.ರೂಡಗಿ ಖಜಾಂಚಿ : ಸಿದ್ದಪ್ಪ ಸುಬಾನಪುರ.

ಫೋರೆಸ್ ಕಾರ್ಮಿಕರ ಚಳುವಳಿ ಮುರಿಯಲು ಪೀಣ್ಯ ಪ್ರದೇಶದಲ್ಲಿ ಸೆಕ್ಷನ್ 144!

ಬೆಂಗಳೂರಿನ ಪೀಣ್ಯ ಪ್ರದೇಶದಲ್ಲಿರುವ ಫೋರೆಸ್ ಗುಂಪಿನ 300ಕ್ಕೂ ಹೆಚ್ಚು ಕಾರ್ಮಿಕರ ಹೋರಾಟ ತೀವ್ರಗೊಂಡಿದೆ. ತಮ್ಮ ಹಿತ ಕಾಪಾಡಿಕೊಳ್ಳಲು ಸಂಘ ಕಟ್ಟಿಕೊಂಡದ್ದೇ ಸ್ವಾತಂತ್ರ್ಯದ ಐವತ್ತು ವರ್ಷಗಳ ನಂತರವೂ ಅವರ ಅಪರಾಧವಾಗಿ ಬಿಟ್ಟಿದೆ. ಸಮಾಜದ ದುರ್ಬಲ ವಿಭಾಗಗಳನ್ನು ಗೂಂಡಾ ಶಕ್ತಿಗಳಿಂದ ಕಾಪಾಡಬೇಕಾದ ಪೋಲೀಸರೂ ಇಲ್ಲಿ ಕಾರ್ಮಿಕರನ್ನು ಕಾನೂನು ಬದ್ಧ ಹಕ್ಕಿನಿಂದ ವಂಚಿತರಾಗಿಸುವ ಪ್ರಯತ್ನದಲ್ಲಿ ಶಾಮೀಲಾಗುತ್ತಿದ್ದಾರೆ ಎಂದು ಫೋರೆಸ್ ಇಂಜೀನಿಯರಿಂಗ್ ಕಾರ್ಮಿಕರ ಸಂಘ ಆರೋಪಿಸಿದೆ.

ಕಾರ್ಮಿಕರಿಗೆ ಆಗುತ್ತಿರುವ ಕಿರುಕುಳಗಳ ವಿರುದ್ಧ ಹಾಗೂ ತಮ್ಮ ಹಕ್ಕುಗಳನ್ನು ರಕ್ಷಿಸಲು ಕಾರ್ಖಾನೆ ಗೇಟಿನೆದರು ಉಪವಾಸ ಸತ್ಯಾಗ್ರಹ ಮಾಡುವ ಹಕ್ಕನ್ನು ಕೂಡಾ ಪೋಲೀಸರು ಬಿಡದಿದ್ದಾಗ ಗೃಹಮಂತ್ರಿಗಳ ಮೊರೆ ಹೋಗಬೇಕಾಯಿತು. ಕೊನೆಗೂ ಆ ಹಕ್ಕು ದೊರೆತರೂ ಪೋಲೀಸ್ ಅಧಿಕಾರಿಗಳ ಮಾಲಕ-ಪರ ನಿಲುವು ಬಹಳಷ್ಟೇನೂ ಬದಲಾಗಲಿಲ್ಲ.

ಆಗಸ್ಟ್ 28ರಂದು 78 ಕಾರ್ಮಿಕರನ್ನು ಉತ್ತರ ವಲಯದ ಡಿ.ಸಿ.ಪಿ.ಯವರ ಆದೇಶದಿಂದ ಬಂಧಿಸಿ ಮೂರು ದಿನಗಳ ಕಾಲ ವಿನಾಕಾರಣ ಸೆಂಟ್ರಲ್ ಜೈಲಿನಲ್ಲಿಡಲಾಯಿತು. ಇದರಿಂದಾಗಿ ಹೋರಾಟ ಪೋಲೀಸ್ ಅಧಿಕಾರಿಗಳ ಮಾಲಿಕ-ಪರ ಹಸ್ತಕ್ಷೇಪದ ವಿರುದ್ಧ ತಿರುಗಿತು. ಆಗಸ್ಟ್ 29ರಂದು ದಸ್ತಗಿರಿಯನ್ನು ಪ್ರತಿಭಟಿಸಿ, ಡಿ.ಸಿ.ಪಿ.ಯವರು ತಾವು ಸಂಧಾನ ಸಭೆ ನಡೆಸುವುದನ್ನು ಬಿಟ್ಟು ಕಾರ್ಮಿಕ ಆಯುಕ್ತರ ಕಛೇರಿಗೆ ಮಾಲಕರು ಸಂಧಾನ ಸಭೆಗೆ ಬರುವಂತೆ ಮಾಡಬೇಕು, ಮಾಲಕರ ಗೂಂಡಾ ಹಾವಳಿಯಿಂದ ಕಾರ್ಮಿಕರಿಗೆ ರಕ್ಷಣೆ ನೀಡಬೇಕು ಎಂದು ಆಗ್ರಹಪಡಿಸಿ 300ಕ್ಕೂ ಹೆಚ್ಚು ಕಾರ್ಮಿಕರು ಪೀಣ್ಯ ಪೋಲೀಸ್ ಠಾಣೆಯೆದುರು ಮತ ಪ್ರದರ್ಶನ ನಡೆಸಿದರು.

ಆಗಸ್ಟ್ 31ರಂದು ಕಾರ್ಖಾನೆಯೆದುರು ಕಾರ್ಮಿಕರು ಮತ್ತು ಅವರ ಕುಟುಂಬದವರ ಪ್ರತಿಭಟನಾ ಧರಣಿ ಕಾರ್ಯಕ್ರಮ ಹಾಕಿಕೊಳ್ಳಲಾಯಿತು. ಇದನ್ನು ತಡೆಯಲು ಇಡೀ ಪ್ರದೇಶದಲ್ಲಿ ಪೋಲೀಸರು ಒಂದು ವಾರ 144ನೇ ಸೆಕ್ಷನ್ ಜಾರಿಗೊಳಿಸಿದರು. ಕಾರ್ಮಿಕರ ಎರಡು ತಿಂಗಳ ಹೋರಾಟದಲ್ಲಿ ಒಂದೇ ಒಂದು ಹಿಂಸಾತ್ಮಕ ಘಟನೆ ನಡೆದಿರದಿದ್ದರೂ ಕೇವಲ ಒಬ್ಬ ಮಾಲಕನ ಹಿತರಕ್ಷಣೆಗಾಗಿ ಈ ಕ್ರಮವನ್ನು ಪೋಲೀಸರು ಕೈಗೊಂಡಿದ್ದಾರೆ ಎಂದು ಕಾರ್ಮಿಕರ ಸಂಘ ಖಂಡಿಸಿದೆ.

ಸ್ವಾತಂತ್ರ್ಯದ ಐವತ್ತು ವರ್ಷಗಳ ನಂತರವೂ ಮಾಲಕರ ದೌರ್ಜನ್ಯದೊಂದಿಗೆ ಪೋಲೀಸ ಈ ರೀತಿಯ ಶಾಮೀಲನ್ನು ಸರಕಾರದ ಗಮನಕ್ಕೆ ತರಲು ಈಗ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸುತ್ತಿರುವ ಸಿದ್ದರಾಮಯ್ಯನವರ ನಿವಾಸದ ಮುಂದೆ ಸೆಪ್ಟಂಬರ್ 5ರಂದು ಕಾರ್ಮಿಕರ ಮತ್ತು ಅವರ ಕುಟುಂಬದ ಸದಸ್ಯರ ಧರಣಿ ಕಾರ್ಯಕ್ರಮವನ್ನು ನಡೆಸಲು ಕಾರ್ಮಿಕ ಸಂಘ ನಿರ್ಧರಿಸಿದೆ.

ಕರ್ನಾಟಕದಲ್ಲಿ ಕಳೆದವಾರ

ಆಗಸ್ಟ್-28

- ಮೈಸೂರು ಅರಮನೆ ಸ್ವಾಧೀನ ಮಸೂದೆಗೆ ರಾಷ್ಟ್ರಪತಿ ಅಂಕಿತ.
- ಎಂಜನಿಯರುಗಳ 11 ದಿನಗಳ ಲೇಖನಿ ಸ್ಥಗಿತ ಮುಷ್ಕರ ಅಂತ್ಯ
- ಮೈಸೂರು ಲ್ಯಾಂಪ್ ಖಾಸಗಿಯವರಿಗೆ ಸಚಿವ ಸಂಪುಟ ನಿರ್ಧಾರ.

ಆಗಸ್ಟ್ 29

- ನಿಗಮ-ಮಂಡಳಿ ನಗರಾಭಿವೃದ್ಧಿ ಪ್ರಾಧಿಕಾರ ಪುನರ್ರಚನೆ
- ಸಿದ್ದರಾಮಯ್ಯ ರಾಜ್ಯ ದಳ ಸಂಸದೀಯ ಮಂಡಳಿ ಅಧ್ಯಕ್ಷ.
- ಪರಿಹಾರ ಪಡೆಯಲು ಒಪ್ಪದ ಸೀಬರ್ಡ್ ನೌಕಾನೆಲೆಯ ನಿರಾಶ್ರಿರು.

ಆಗಸ್ಟ್ 30

- ವಿದೇಶಿ ಬಂಡವಾಳ ಆಕರ್ಷಿಸಲು ಮುಖ್ಯಮಂತ್ರಿ ನೇತೃತ್ವದ ತಂಡ ಫ್ರಾನ್ಸ್‌ಗೆ.
- ರಾಜ್ಯದಲ್ಲಿ ಕಲಬೆರಕೆ ಸಾಸುವೆ ಎಣ್ಣೆ ಬಳಕೆ ನಿಷೇಧ.
- ಸಿಬಿಐ ಬಲೆಯಲ್ಲಿ ರಾಜ್ಯ ಪೋಲೀಸ್ ಅಧಿಕಾರಿ ಮತ್ತು ನಟಿ ಮಂದಾಕಿನಿ.

ಆಗಸ್ಟ್ 31

- ಪೆಟ್ರೋಲ್ ರಸಗೊಬ್ಬರ ವಹಿವಾಟು ತೆರಿಗೆ ತಾತ್ಕಾಲಿಕ ರದ್ದು.
- ರಾಜ್ಯ ಪ್ರಶಸ್ತಿಗಾಗಿ 30 ಶಿಕ್ಷಕರ ಆಯ್ಕೆ.
- ಹಲ್ಲೆ ಆರೋಪ-ಸಚಿವ ಜಯಕುಮಾರ್‌ಗೆ ಸಮನ್ಸ್.

ಸೆಪ್ಟಂಬರ್-1

- ಪ್ರದೇಶ ಕಾಂಗ್ರೆಸ್ ಸಮಿತಿ ಪುನರಚನೆ. 149 ಮಂದಿಗೆ ಸ್ಥಾನ.
- ಅರಮನೆ ಸ್ವಾಧೀನತೆಗೆ ಒಡೆಯರ್ ರಿಟ್ ಅರ್ಜಿ.
- ರಾಜ್ಯದಲ್ಲಿ 8 ತಿಂಗಳಲ್ಲಿ 117 ವರದಕ್ಷಿಣೆ ಸಾವು.
- ಅಧ್ಯಾಪಕರಿಂದ ಪ್ರತಿಭಟನಾ ರ್‍ಯಾಲಿ.

ಸೆಪ್ಟಂಬರ್-2

- ಹಾವೇರಿ ಜಿಲ್ಲೆಗೆ ಶಿಗ್ಗಾಂವಿ ತಾಲೂಕು ವರ್ಗಾವಣೆ ಆದೇಶ.
- ಒಡೆಯರ ರಿಟ್ ಅರ್ಜಿ ವಜಾ

ಸೆಪ್ಟಂಬರ್-3

- ಜಾತಿ ಗಲಾಟೆ ಚಿತ್ರದುರ್ಗದ ಬಳಿ ಹಿಂಸಾಚಾರ, ಗೋಲಿ ಬಾರ್ ಒಬ್ಬರ ಸಾವು.
- ರಾಜ್ಯದಲ್ಲಿ ಮತ್ತೆ 20 ಹೊಸ ವೈದ್ಯ ಕಾಲೇಜುಗಳಿಗೆ ರಾಜ್ಯ ಸರ್ಕಾರದ ಅಸ್ತು.
- ವಿ.ವಿ. ನಾಲೆ ಆಧುನಿಕರಣ ಯೋಜನೆ ಹಾಗೂ ಭ್ರಷ್ಟಾಚಾರ - ಮೂವರು ಹಿರಿಯ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಶಿಫಾರಸ್ಸು.



ಗಾಬರಿ ಕಕ್ಕಿಕೊಂಡ ಬಿಜೆಪಿ ಸಭೆ

ಹೆಚ್ಚೆಚ್ಚು ಜನ ಬಿಜೆಪಿ ಕೂಟದ ಆಡಳಿತಕ್ಕೊಳಗಾಗಲು ನಿರಾಕರಿಸುತ್ತಿದ್ದಾರೆ ಎಂಬ ವಾಸ್ತವತೆಯಿಂದ ಗಾಬರಿಗೊಂಡಿರುವುದನ್ನು ಬಿಜೆಪಿ ಜೈಪುರ ಸಭೆ ಎತ್ತಿತೋರಿದೆ ಎನ್ನುತ್ತಾರೆ ಸೀತಾರಾಂ ಯೆಚೂರಿ

ಬಿಜೆಪಿಯ ಐದು ತಿಂಗಳ ಆಡಳಿತ ಒಂದು ಅಸಂಗತ ನಾಟಕವಷ್ಟೇ ಅಲ್ಲ, ಅದು ಅಪಹಾಸ್ಯದ ಒಂದು ಕಂತೆಯೇ ಆಗಿದೆ ಎನ್ನುವುದು ಆ ಪಕ್ಷದ ರಾಷ್ಟ್ರೀಯ ಕಾರ್ಯ ಕಾರಿ ಸಮಿತಿಯಲ್ಲಿನ ಭಾಷಣಗಳು ಹಾಗೂ ಕಲಾಪಗಳನ್ನು ಗಮನಿಸಿದರೆ ಗೊತ್ತಾಗುತ್ತದೆ.

ಯಾವುದೇ ರಂಗದ ಮೇಲೆ ಹಿಡಿತವಿಲ್ಲದೆ ಬಿಜೆಪಿ ಪೂರ್ಣವಾಗಿ ಗಾಬರಿಗೊಂಡಿದೆ ಎನ್ನುವುದು ಗುಟ್ಟೇನೂ ಅಲ್ಲ. ಜೈಪುರದಲ್ಲಿ ನಡೆದ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಷಣಕಾರರು ಬಿಜೆಪಿಯನ್ನು ವಿರೋಧಿಸುವ ಎಲ್ಲಾ ಪಕ್ಷಗಳ ವಿರುದ್ಧ ಬೈಗುಳದ ಸುರಿಮಳೆಗೈದರು. ಸಹಜವಾಗಿಯೇ ಸಿಪಿಐ (ಎಂ) ವಿಶೇಷ ದಾಳಿಗೆ ಒಳಗಾಯಿತು.

ಸಿಪಿಐ(ಎಂ) ಮತ್ತು ಎಡಪಕ್ಷಗಳು ಆಧುನಿಕ ಭಾರತದ ಜಾತ್ಯತೀತ ಪ್ರಜಾಸತ್ತಾತ್ಮಕ ನೆಲೆಗಟ್ಟನ್ನು ಸತತವಾಗಿ ಎತ್ತಿ ಹಿಡಿದಿರುವುದರಿಂದ ಬಿಜೆಪಿ ಕೆರಳಿದೆ. ಬಿಜೆಪಿ ಮತ್ತು ಕೋಮುವಾದಿ ಶಕ್ತಿಗಳ ಕ್ಷುದ್ರ ಹುನ್ನಾರಗಳನ್ನು ಜನತೆಯ ಮುಂದೆ ಎಡಪಕ್ಷಗಳು ಬಹಿರಂಗಪಡಿಸಿರುವುದರಿಂದ ಅದು ಮಂಜುಗರಕ್ಕೆ ಒಳಗಾಗಿದೆ.

1998 ರ ಜನಾದೇಶವನ್ನು ಬುಡಮೇಲು ಮಾಡಲು ಒಂದಾಗುತ್ತಿವೆ ಎನ್ನುವುದು ಎಡ ಪಕ್ಷಗಳ ವಿರುದ್ಧದ ಬಿಜೆಪಿಯ ಮುಖ್ಯ ಆರೋಪವಾಗಿದೆ. 1996 ರಲ್ಲಿ ಆದಂತೆ 1998 ರ ಜನಾದೇಶ ಬುಡಮೇಲು ಮಾಡಲು ಬಿಡುವುದಿಲ್ಲ ಎಂದು ರಾಜಕೀಯ ಪರಿಸ್ಥಿತಿ ಹಾಗೂ ಮುಂದಿರುವ ಸವಾಲುಗಳ ಕುರಿತ ಗೊತ್ತುವಳಿಯಲ್ಲಿ ಬಿಜೆಪಿ ಹೇಳಿದೆ.

ಜನಾದೇಶವಿತ್ತು!

ಸುಳ್ಳನ್ನೇ ಪದೇ ಪದೇ ಹೇಳಿ ಅದೇ ಸತ್ಯ ಎಂದು ಕಾಣಿಸುವಂತೆ ಮಾಡುವ ಹಿಟ್ಲರನ ಪ್ರಚಾರ ಸಚಿವ ಗೊಬೆಲ್ಸನ ತಂತ್ರವನ್ನು ಬಿಜೆಪಿ ಸುಧಾರಿಸಿಕೊಂಡಂತೆ ಕಾಣುತ್ತದೆ. ವಾಸ್ತವವಾಗಿ 1996ರ ಜನಾದೇಶವಾದರೂ ಏನಿತ್ತು!

161 ಸ್ಥಾನಗಳನ್ನು ಗೆದ್ದು ಬಿಜೆಪಿ ಏಕೈಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಆದರೆ ಬಹುಮತಕ್ಕೆ ಬೇಕಾದ 272 ಸ್ಥಾನಗಳಿಂದ ಅದು ತುಂಬಾ ಹಿಂದೆ ಉಳಿದಿತ್ತು. ಅದೂ ಅಲ್ಲದೆ ಬಿಜೆಪಿ 20.29 ಶೇಕಡಾ ಮತಗಳಿಸಿತ್ತು. ಕಾಂಗ್ರೆಸ್ 28.8 ಶೇ. ಮತಗಳಿಸಿತ್ತು. ಸಂಯುಕ್ತರಂಗದ ಮುಖ್ಯ ಅಂಗ ಪಕ್ಷಗಳು ಒಟ್ಟಾಗಿ 29.45 ಶೇಕಡ ಮತವನ್ನು ಗಳಿಸಿದ್ದವು. ಬಿಜೆಪಿಗಿಂತ ಹೆಚ್ಚು ಅಂದರೆ 187 ಸದಸ್ಯರನ್ನು ಸಂಯುಕ್ತರಂಗ ಹೊಂದಿತ್ತು. ಹಾಗಾಗಿ, ಮತದ ಶೇಕಡಾವಾರು ಹಾಗೂ ಸ್ಥಾನ ಇವುಗಳೆರಡರ ಲೆಕ್ಕಾಚಾರದಲ್ಲೂ 11ನೇ ಲೋಕಸಭೆಯಲ್ಲಿ ಸಂಯುಕ್ತ ರಂಗವೇ ಅತಿದೊಡ್ಡ ವಿಭಾಗವಾಗಿತ್ತು. ಇಷ್ಟಿದ್ದರೂ 1996 ರಲ್ಲಿ ತನಗೆ ಆಡಳಿತ ನಡೆಸುವ ಹಕ್ಕನ್ನು ನಿರಾಕರಿಸಲಾಯಿತು ಎಂದು ಬಿಜೆಪಿ ಇಂದಿಗೂ ಸುಳ್ಳು ಹೇಳುತ್ತಲೇ ಇದೆ. ಆದರೆ, ಆಗ ಬಹುಮತ ಇಲ್ಲದಿದ್ದರೂ ಬಿಜೆಪಿ ಸರಕಾರವನ್ನು ರಚಿಸಿತು. ವಿಶ್ವಾಸಮತವನ್ನೂ ಎದುರಿಸಲಾಗದೆ 13 ನೇ ದಿನ ತಲೆತಗ್ಗಿಸುವ ರೀತಿಯಲ್ಲಿ ಆ ಸರಕಾರ ನಿರ್ಗಮಿಸಿತು. ಸರಕಾರ ರಚನೆಯ ಅವಕಾಶವನ್ನು ಬಿಜೆಪಿಗೆ ನಿರಾಕರಿಸಲಿಲ್ಲ ಬದಲಿಗೆ ಅದು ತನ್ನ ಯತ್ನಗಳಲ್ಲಿ ವಿಫಲವಾಯಿತು ಎನ್ನುವುದೇ ಇಲ್ಲಿನ ಸತ್ಯವಾಗಿದೆ. ವಾಸ್ತವವಾಗಿ ಸರಕಾರದ ನಾಯಕತ್ವವನ್ನು ಕಿತ್ತುಕೊಂಡು 1996 ರ ಜನಾದೇಶವನ್ನು ಬುಡಮೇಲು ಮಾಡಲು ಯತ್ನಿಸಿದ ಬಿಜೆಪಿಯ ಹುನ್ನಾರವನ್ನು ಆಗ ವಿಫಲಗೊಳಿಸಲಾಯಿತು.

ಅದೇ ರೀತಿ 1998 ರಲ್ಲಿ ಕೂಡ ಶೇ. 25 ಮತ ಪಡೆದ ಬಿಜೆಪಿ ಬಹುಮತ ಗಳಿಸಲಿಲ್ಲ. ದುರಂತವೆಂದರೆ ಮತದ ಈ ಶೇಕಡಾವಾರು ಪ್ರಮಾಣ ಕಾಂಗ್ರೆಸ್ ಪಡೆದಷ್ಟೇ ಇತ್ತು. ಚುನಾವಣೆಗೆ ಮುಂಚಿನ ಮಿತ್ರಪಕ್ಷಗಳ ಜತೆ ಬಿಜೆಪಿ ಗಳಿಸಿದ ಮತ ಒಟ್ಟು ಶೇಕಡ 37 ಮಾತ್ರ (ಅಂದರೆ ಇಡೀ ಬಿಜೆಪಿ ಕೂಟದಲ್ಲಿ) ಮತ ಚಲಾಯಿಸಿದವರ ಪೈಕಿ ಶೇಕಡ 67 ರಷ್ಟು ಜನರು ಬಿಜೆಪಿಯ ವಿರುದ್ಧ ಮತ ಹಾಕಿದ್ದರು.

ಇಷ್ಟಾದರೂ ಬಹುಮತ ಗಳಿಸಲು ಆಗಲಿಲ್ಲ. ಸಣ್ಣ ಪುಟ್ಟ ಪಕ್ಷಗಳು ಹಾಗೂ ವ್ಯಕ್ತಿಗಳನ್ನು ಓಲೈಸಲು ಹೇಯ ಹಾಗೂ ತತ್ವರಹಿತ ಕ್ರಮಗಳನ್ನು ಬಿಜೆಪಿ ಅನುಸರಿಸಿದ್ದಿಲ್ಲವಾದರೆ ವಿಶ್ವಾಸಮತದಲ್ಲಿ ಗೆಲುವು ಸಾಧಿಸಲು ಅದಕ್ಕೆ ಸಾಧ್ಯವೇ ಆಗುತ್ತಿರಲಿಲ್ಲ. ತೆಲುಗುದೇಶಂ ಪಕ್ಷದ ಬೆಂಬಲ ಪಡೆಯಲು ಅದು ನಡೆಸಿದ ಕೀಳು ಮಟ್ಟದ ತಂತ್ರ ಹಾಗೂ ತೆಲುಗು ದೇಶಂನ ವಿಶ್ವಾಸ ದ್ರೋಹದಿಂದಾಗಿ ಈ ಸರ್ಕಾರ ಅಸ್ತಿತ್ವಕ್ಕೆ ಬಂತು.

ಹಾಗಾಗಿ ನಿರ್ಲಜ್ಜ ತಂತ್ರಗಳಿಂದ ಸರಕಾರ ಅಸ್ತಿತ್ವಕ್ಕೆ ಬಂದದ್ದನ್ನು ಜನಾದೇಶ ಎಂದು ಕರೆಯುವುದು ಆಘಾತಕಾರಿ ಮಾತ್ರವಲ್ಲದೆ ವಾಸ್ತವಾಂಶಗಳ ವಿರೂಪವೂ ಆಗಿದೆ.

ದಿನಗಳ ಎಣಿಕೆ

ಪ್ರಸಕ್ತ ಸರಕಾರದ ಅಸ್ಥಿರತೆ ಬಿಜೆಪಿಯದೇ ಕರ್ಮ ಎನ್ನುವುದು ಗಮನಿಸ ಬೇಕಾದ ಅಂಶವಾಗಿದೆ. ಈ ಸರಕಾರ ಜೀವಂತವಾಗಿ ಉಳಿಯಲು ಕಷ್ಟಪಡುತ್ತಿದ್ದು ಅದರಲ್ಲಿ ಒಡೆದು ಹಂಚಿಹೋಗಿರುವ ಪ್ರತಿಪಕ್ಷಗಳ ಪಾತ್ರ ಏನೇನೂ ಇಲ್ಲ. ತಾನು ದಿನಗಳನ್ನು ಎಣಿಸುತ್ತಿರುವುದಾಗಿ ಬಿಜೆಪಿಯೇ ವಸ್ತುತಃ ಒಪ್ಪಿಕೊಳ್ಳುತ್ತಿದೆ.

ಬಿಜೆಪಿ ನೇತೃತ್ವದ ಸರಕಾರ ಅಧಿಕಾರ ವಹಿಸಿಕೊಂಡಾಗ ಉತ್ತಮ ಆಡಳಿತ, ಸಮರ್ಥ ನಾಯಕತ್ವದಲ್ಲಿ ಸ್ಥಿರ ಸರಕಾರ ನೀಡುವುದಾಗಿ ಮತ್ತು ಭಯ, ಹಸಿವು, ಭ್ರಷ್ಟಾಚಾರದಿಂದ ಜನರನ್ನು ಮುಕ್ತಗೊಳಿಸುವುದಾಗಿ ಭರವಸೆ ನೀಡಲಾಗಿತ್ತು. ಆದರೆ ಐದು ತಿಂಗಳ ಆಡಳಿತದಲ್ಲಿ ಏನಾಗಿದೆ? ಈ ಭರವಸೆಗಳ ವಿಶ್ವಾಸಾರ್ಹತೆ ಎಷ್ಟರ ಮಟ್ಟಿಗೆ ಉಳಿದಿದೆ? ದೇಶದ ಪರಿಸ್ಥಿತಿ ಏನಾಗಿದೆ?

ಬಿಜೆಪಿಯ ಅಣುಯುದ್ಧೋನ್ಮಾದ, ಚೀನಾ ವಿರುದ್ಧ ರಕ್ಷಣಾ ಸಚಿವರ ಅಪಪ್ರಲಾಪ, ಕಾಶ್ಮೀರ ವಿವಾದವನ್ನು ಅಣು ಶಕ್ತಿ ಸ್ಫೋಟದ ಹಿನ್ನೆಲೆಯಲ್ಲಿ ಬಗೆಹರಿಸಬಹುದು ಎಂಬ ಅಡ್ವಾಣಿ ಅಟ್ಟಹಾಸ, ಪಾಕಿಸ್ತಾನದೊಂದಿಗಿನ ಮುಂದಿನ ಸುತ್ತಿನ ಸಮರಕ್ಕೆ ವೇಳಾ ಪಟ್ಟಿ ಬೇಕೆಂದು ಮದನಲಾಲ್ ಖುರಾನಾ ಬಡಬಡಿಕೆ ಇವೆಲ್ಲವುಗಳಿಂದ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಭಾರತದ ಪ್ರತಿಷ್ಠೆಗೆ ಕುಂದುಬಂದಿದೆ. ರಾಜತಾಂತ್ರಿಕ ಸಂಬಂಧ ಹದಗೆಟ್ಟಿದೆ. ಕೇಂದ್ರ ಸರಕಾರ ಬಿಡಿ, ಒಂದು ಕಾಲೇಜು ವಿದ್ಯಾರ್ಥಿ ಸಂಘವನ್ನೂ ನಡೆಸುವ ಸಾಮರ್ಥ್ಯವೂ ಈ ಜನರಿಗಿಲ್ಲ!

ಸರಕಾರ ಅನುಸರಿಸುತ್ತಿರುವ ಹುಸಿ ರಾಷ್ಟ್ರೀಯವಾದಿ ಪರಮಾಣು ಯುದ್ಧೋನ್ಮಾದದಿಂದ ಭಾರತದ ಜನಸಾಮಾನ್ಯರ ಭಯ ಹೆಚ್ಚಿ ಭದ್ರತೆ ಪರಿಸ್ಥಿತಿ ಹದಗೆಡಲಿದೆ.

ಅಲ್ಪ ಸಂಖ್ಯಾತರ ಮೇಲೆ ಹಲ್ಲೆ:

ಬಿಜೆಪಿ ನೇತೃತ್ವದ ಸರಕಾರ ಮತ್ತು ಆರೆಸ್ಸೆಸ್ ಸಂಯೋಜಿತ ಸಂಘಟನೆಗಳು ನಡೆಸುತ್ತಿರುವ ಚಟುವಟಿಕೆಗಳು ಜನರಲ್ಲಿ, ಅದರಲ್ಲೂ ಮುಖ್ಯವಾಗಿ ಅಲ್ಪಸಂಖ್ಯಾತರಲ್ಲಿ ಅಭದ್ರತೆ ಹಾಗೂ ಭಯದ ವಾತಾವರಣವನ್ನು ಹೆಚ್ಚಿಸುತ್ತಿವೆ ಅಷ್ಟೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕರ ದುಷ್ಕೃತ್ಯಗಳು ಹೆಚ್ಚಿರುವುದು ಅಣುಶಕ್ತಿ ಪರೀಕ್ಷೆಯ ನೇರ ಪರಿಣಾಮವಾಗಿದೆ. ಜಮ್ಮುನಲ್ಲಿ ಮತ್ತು ಆನಂತರ ಚಂಬಾದಲ್ಲಿ ನಡೆದ ಸರಣಿ ಹತ್ಯಾಕಾಂಡ ಪ್ರಕರಣಗಳಲ್ಲಿ ಸರಕಾರದ ವಿಫಲತೆಗಳನ್ನು ಸಾಬೀತುಪಡಿಸಿವೆ. ವಾಸ್ತವವಾಗಿ ಭಯೋತ್ಪಾದಕರ ಆಕ್ರಮಣಗಳನ್ನು ಕೋಮು ಭಾವನೆಗಳನ್ನು ಬಡಿದೆಬ್ಬಿಸಲು ಒಂದು ನೆವವನ್ನಾಗಿ ಬಳಸಲು ಆರೆಸ್ಸೆಸ್ ಹೂಡಿದ್ದ ಹುನ್ನಾರಗಳನ್ನು ವರದಿಗಳು ಪೂರ್ಣವಾಗಿ ಬಯಲುಮಾಡಿವೆ.

ಗುಜರಾತ್ ಮತ್ತು ಈಶಾನ್ಯ ರಾಜ್ಯಗಳಲ್ಲಿ ಕ್ರೈಸ್ತ ಅಲ್ಪ ಸಂಖ್ಯಾತರ ಮೇಲಿನ ಹಲ್ಲೆ, ಮುಂಬಯಿಯಿಂದ ಬಂಗಾಳಿ ಮುಸ್ಲಿಮರನ್ನು ಹೊರಹಾಕುವಿಕೆ, ಇವೇ ಮೊದಲಾದ ಅಲ್ಪ ಸಂಖ್ಯಾತ ವಿರೋಧಿ ಚಟುವಟಿಕೆಗಳ ಜತೆ ಕಲಾವಿದರ, ಅದರಲ್ಲೂ ಮುಖ್ಯವಾಗಿ ಪಾಕಿಸ್ತಾನದ ಜನಪ್ರಿಯ ಗಾಯಕ ಗುಲಾಂ ಅಲಿ ಅವರ ಮೇಲೆ ನವದೆಹಲಿಯಲ್ಲಿ ನಡೆದ ಹಲ್ಲೆ ಜನರಲ್ಲಿ ಭಯ ಹಾಗೂ ಅಭದ್ರತೆಯ ಭಾವವನ್ನು ಹರಡಲು ಸಂಘಪರಿವಾರ ಎಷ್ಟೊಂದು ಯೋಜಿತ ಕೃತ್ಯ ನಡೆಸುತ್ತಿದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ. ಅಯೋಧ್ಯೆಯಲ್ಲಿ ಮಂದಿರ ನಿರ್ಮಾಣಕ್ಕೆ ವಿಎಚ್‌ಪಿ ಪಣ ತೊಟ್ಟಿರುವ ಅಂಶವನ್ನು ಇಲ್ಲಿ ಪರಿಗಣಿಸಬೇಕು.

ಇಂಥ ನಗ್ನ ಕೋಮು ಆಕ್ರಮಣವಲ್ಲದೆ ಈ ಐದು ತಿಂಗಳಲ್ಲಿ ದೇಶಾದ್ಯಂತ ಅಪರಾಧ ಪ್ರಮಾಣವೂ ಹೆಚ್ಚಿದೆ. ರಾಜಧಾನಿ ದೆಹಲಿ ಇದರ ಮುಂಚೂಣಿಯಲ್ಲಿದೆ. ಈ ರೀತಿಯಾಗಿ ಕ್ರಿಮಿನಲ್‌ಗಳು ರಸ್ತೆಗಳನ್ನು ಆಳುವ ಹಾಗೂ ಸಾಧುಗಳು ದೇಶದ ಪರಮಾಣು, ವಿದೇಶಾಂಗ ಹಾಗೂ ಆಂತರಿಕ ನೀತಿಗಳನ್ನು ರೂಪಿಸುವ ಪರಿಸ್ಥಿತಿಯಲ್ಲಿ ನಾವಿದ್ದೇವೆ.

ಶ್ರೀಕೃಷ್ಣ ಆಯೋಗದ ವರದಿಯನ್ನು ಶಿವಸೇನೆ-ಬಿಜೆಪಿ ಸರಕಾರ ಸಾರಾಸಗಟಾಗಿ ತಿರಸ್ಕರಿಸಿದ್ದು ಆಧುನಿಕ ಭಾರತದ ಪ್ರಜಾಸತ್ತಾತ್ಮಕ ಚೌಕಟ್ಟನ್ನು ನಾಶಮಾಡುವ ಅವುಗಳ ಮನೋಧರ್ಮಕ್ಕೆ ಹಿಡಿದ ಕನ್ನಡಿಯಾಗಿದೆ. ತಮ್ಮ ಆಡಳಿತದಲ್ಲಿ ಅಲ್ಪ ಸಂಖ್ಯಾತರು ಪ್ರಾಥಮಿಕ ಹಕ್ಕುಗಳು ಹಾಗೂ ಸಹಜ ನ್ಯಾಯವನ್ನೂ ನಿರೀಕ್ಷಿಸುವಂತಿಲ್ಲ ಎಂಬ ಸಂದೇಶವನ್ನು ಅವು ನೀಡಿದಂತಾಗಿದೆ. ನ್ಯಾಯಾಲಯಗಳು ಆದೇಶಿಸಿದರೂ ಶಿವಸೇನೆ ಮುಖ್ಯಸ್ಥನನ್ನು ತಾವು ಬಂಧಿಸುವುದಿಲ್ಲ ಎಂಬ ಮಟ್ಟಕ್ಕೂ ಮಹಾರಾಷ್ಟ್ರ ಮುಖ್ಯಮಂತ್ರಿ ಹೋಗಿದ್ದಾರೆ. ಇವರಿಗೆ ದೇಶದ ಕಾನೂನಿನ ಬಗ್ಗೆ ಗೌರವವೇ ಇಲ್ಲ.

ಸಂಕಷ್ಟಮಯ ಜೀವನ

ಇನ್ನು ಹಸಿವಿನಿಂದ ಸ್ವಾತಂತ್ರ್ಯದ ವಿಚಾರದ ಬಗ್ಗೆ ಏನನ್ನೂ ಹೇಳದಿರುವುದೇ ಒಳ್ಳೆಯದು. ಬೆಲೆಯೇರಿಕೆಯ ಒಂದೇ ವಿಚಾರವನ್ನು ತೆಗೆದುಕೊಂಡರೂ ಸಾಕು. ಬಿಜೆಪಿಯ ಸಾಮಾಜಿಕ ನೆಲೆಯಾದ ವರ್ತಕರು ಹಾಗೂ ಬನಿಯಾಗಳು ಸರಕಾರದ ನೇರ ಕೃಪೆಯಿಂದ ಜನತೆಯ ತಲೆ ಒಡೆದು ಭಾರೀ ಲಾಭವನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ಇದರ ಒಂದು ಪಾಲು ಬಿಜೆಪಿಯ ನಿಧಿಗೆ ಹೋಗುತ್ತದೆ ಎನ್ನುವುದರಲ್ಲಿ ಅನುಮಾನವೇ ಇಲ್ಲ.

ಭ್ರಷ್ಟಾಚಾರ ಮುಕ್ತ ಆಡಳಿತದ ಆಶ್ವಾಸನೆ ಕೂಡ ಅಷ್ಟೇ ಟೊಳ್ಳು ಎನ್ನುವುದು ಜಯಲಲಿತಾರಿಂದ ಹಿಡಿದು ಇತ್ತೀಚಿನ ಬೆಜ್‌ಬರುವಾ ವರ್ಗಾವಣೆ ಹಾಗೂ ಎಂ.ಎಸ್. ಶೂಸ್ ಕಂಪೆನಿಯ ಹಗರಣಗಳ ವರೆಗಿನ ವಿದ್ಯಮಾನಗಳಿಂದ ಸ್ಪಷ್ಟವಾಗುತ್ತದೆ.

ಇಷ್ಟೊಂದು ಬೃಹತ್ ದೇಶಕ್ಕೆ ವಿದೇಶಾಂಗ ಮಂತ್ರಿಯೇ ಇಲ್ಲದೇ ಯೋಜನಾ ಆಯೋಗದ ಉಪಾಧ್ಯಕ್ಷರು ಪೋಖ್ರಾನ್ ನಂತರದ ಬೆಳವಣಿಗೆಗಳಿಗೆ ಸಂಬಂಧಿಸಿದ ಮಾತುಕತೆಯಲ್ಲಿ ಪಾತ್ರ ವಹಿಸುತ್ತಿದ್ದಾರೆಂದರೆ ಈ ದೇಶದಲ್ಲಿ ಆಡಳಿತವೆಂಬುದೇನಾದರೂ ಇದೆಯೇ ಎಂಬ ಪ್ರಶ್ನೆಗೆ ಸಿಗುವ ಉತ್ತರ ಖಂಡಿತ ವಿಶ್ವಾಸವನ್ನಂತೂ ಮೂಡಿಸುವುದಿಲ್ಲ.

ಆರ್ಥಿಕ ರಂಗಕ್ಕೆ ಬಂದರೆ, ಭಾರತದ ಆರ್ಥಿಕತೆಯ ಪುನರುಜ್ಜೀವನಕ್ಕೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಹಾಗೂ ದೇಶವನ್ನು ಸ್ವಾವಲಂಬನೆ ಮತ್ತು ಆತ್ಮವಿಶ್ವಾಸದ ಹಾದಿಗೆ ತರಲಾಗುತ್ತಿದೆ ಎಂದು ರಾಷ್ಟ್ರೀಯ ಕಾರ್ಯಕಾರಿಣಿಯ ಗೊತ್ತುವಳಿ ಹೇಳಿದೆ. ಇದು ತೀರಾ ಹಾಸ್ಯಾಸ್ಪದ ಎಂದು ಒಬ್ಬ ನಿರಕ್ಷರಸ್ಥನೂ ಹೇಳಬಲ್ಲ. ಡಾಲರ್ ಎದುರು ರೂಪಾಯಿ ಬೆಲೆ ಆಗಸ್ಟ್ 19 ರಂದು 43.65 ರೂಪಾಯಿಗೆ ಕುಸಿದಿದೆ. ಇದರಿಂದಾಗಿ ದೇಶದ ವಿದೇಶಿ ಸಾಲದ ಪ್ರಮಾಣ 33,900 ಕೋಟಿ ರೂಪಾಯಿಗೆ ಏರಿದೆ. ಹೀಗಿದ್ದೂ ಬಿಜೆಪಿ ಸ್ವಾವಲಂಬನೆಯ ಮಾತನಾಡುತ್ತಿದೆ.

ಆರ್ಥಿಕತೆಯ ಅಡವು

ಬಿಜೆಪಿ ನೇತೃತ್ವದ ಸರಕಾರದ ಐದು ತಿಂಗಳ ಅವಧಿಯಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಭಾರತದ ಆರ್ಥಿಕತೆಯನ್ನು ಹಿಂಡಿ ಹಿಪ್ಪೆಮಾಡಲು ಮಾರ್ಗವನ್ನು ಇನ್ನಷ್ಟು ಪ್ರಶಸ್ತಗೊಳಿಸಲಾಗಿದೆ. ತುಂಬಾ ಸರಳವಾಗಿ ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಒಂದೆಡೆ ಭಾರತದ ಆರ್ಥಿಕತೆಯನ್ನು ಅಡವಿಡುವ ಪ್ರಕ್ರಿಯೆಯನ್ನು ಬಿಜೆಪಿ ತೀವ್ರಗೊಳಿಸಿದೆ, ಇನ್ನೊಂದೆಡೆ ಜನತೆಯ ಜೀವನದ ಮೇಲೆ ಆಕ್ರಮಣಗಳನ್ನು ಹರಿಯಬಿಟ್ಟಿದೆ.

ತುಂಬಾ ಸಹಜವಾಗಿಯೇ ಕಳೆದ ಐದು ತಿಂಗಳ ಅವಧಿಯಲ್ಲಿ ಈ ನೀತಿಗಳ ವಿರುದ್ಧ ವಿವಿಧ ಜನ ವಿಭಾಗಗಳು ಹೋರಾಟದ ಬಾವುಟವನ್ನೆತ್ತಿವೆ. ಆರೋಗ್ಯ ಕಾರ್ಯ ಕರ್ತರು (ವಿಶೇಷವಾಗಿ ದಾದಿಯರು) ಅಂಚೆ ನೌಕರರು ಮತ್ತು ಇದೀಗ ಅಧ್ಯಾಪಕರ ಪ್ರಮುಖ ಮುಷ್ಕರಗಳು ಜನತೆಯ ಅತೃಪ್ತಿಯನ್ನು ಪ್ರತಿಫಲಿಸುತ್ತಿವೆ. ಇದು ಈ ಐದು ತಿಂಗಳ ವಾಸ್ತವತೆಯಾಗಿದೆ. ಬಿಜೆಪಿ ನೇತೃತ್ವದ ಕೂಟದ ಆಡಳಿತಕ್ಕೆ ಒಳಪಡಲು ಜನರು ಸ್ಪಷ್ಟವಾಗಿ ನಿರಾಕರಿಸುತ್ತಿದ್ದಾರೆ.

ಆರೆಸ್ಸೆಸ್‌ನ ರಾಜಕೀಯ ಅಂಗವಾಗಿ ಕೆಲಸ ಮಾಡುತ್ತಿರುವ ಬಿಜೆಪಿ, ಕೋಮುವಾದಿ ಅಜೆಂಡಾವನ್ನು ಬಲಪಡಿಸಲು ಹಾಗೂ ಅಸಹಿಷ್ಣು ಹಿಂದೂ ರಾಷ್ಟ್ರ ನೀತಿಯನ್ನು ಪ್ರಚುರಪಡಿಸಲು ರಾಜ್ಯಾಧಿಕಾರದ ಮೇಲಿನ ತನ್ನ ಹಿಡಿತವನ್ನು ಬಳಸಿ ಕೊಳ್ಳುತ್ತಿದೆ. ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ನೆಲೆಗಟ್ಟನ್ನು ಬಲಪಡಿಸಲು ಬದ್ಧರಾಗಿರುವ ದೇಶಪ್ರೇಮಿಗಳು ಹಾಗೂ ರಾಷ್ಟ್ರೀಯವಾದಿಗಳು ಭಾರತ ದೇಶದ ಜಾತ್ಯಾತೀತ ಪ್ರಜಾತಾಂತ್ರಿಕ ಸಾರವನ್ನು ಬುಡಮೇಲು ಮಾಡಲು ಬಿಡುವುದಿಲ್ಲ.


"ಸಮಸ್ಯೆ ಗೆಳೆಯರಿಂದಲೇ"

ಎಂದು ಬಿ.ಜೆ.ಪಿ. ಬಗ್ಗೆ ವಿರೋಧವಂತೂ ಏನೂ ಇಲ್ಲದ 'ಇಂಡಿಯನ್ ಎಕ್ಸ್‌ಪ್ರೆಸ್' ಸಂಪಾದಕೀಯ ಕೂಡಾ ಬಿ.ಜೆ.ಪಿ.ಯ ಜೈಪುರ್ ಸಭೆಯ ಬಗ್ಗೆ ಟಿಪ್ಪಣಿ ಮಾಡುತ್ತಾ ಹೇಳಿದೆ. ತನ್ನ ವಿಫಲತೆಗಳಿಗೆ ಅದು ವಿರೋಧ ಪಕ್ಷಗಳನ್ನು ದೂರುವಂತಿಲ್ಲ ಎಂದು ಅದು ಸಂಪಾದಕೀಯ ಶಿರೋನಾಮೆಯಲ್ಲೇ ಹೇಳಿದೆ. ಆ ಸಂಪಾದಕೀಯದ ಈ ಕೆಳಗಿನ ಕೆಲ ಅಂಶಗಳು ಬಿ.ಜೆ.ಪಿ.ಯ ಬಗ್ಗೆ ಸಹಾನುಭೂತಿಯಿರುವವರೂ ಏನು ಭಾವಿಸುತ್ತಿದ್ದಾರೆ ಎಂಬುದನ್ನು ತೋರಿಸುತ್ತದೆ.

"ಬಿ.ಜೆ.ಪಿ. ತಾನು ರಾಜಕೀಯ ಭಿನ್ನಾಭಿಪ್ರಾಯಗಳನ್ನು ಸರಿದೂಗಿಸಲು ಒಂದು ಪರಿಣಾಮಕಾರಿ ವ್ಯವಸ್ಥೆಯನ್ನು ರೂಪಿಸುವಲ್ಲಿ ಸ್ಪಷ್ಟವಾಗಿ ಸೋತಿದ್ದೇನೆ ಎಂಬುದನ್ನು ಕಡೆಗಣಿಸುತ್ತಿದೆ. ಸಂಯೋಜನಾ ಸಮಿತಿ ಕೂಡಾ ಅದಕ್ಕೆ ನಂತರ ಹೊಳೆದ ವಿಚಾರ.......... ಇದಕ್ಕೆ ಹೋಲಿಸಿದರೆ ಸಂಯುಕ್ತರಂಗ ಚಾಲನಾ ಸಮಿತಿ ಹೆಚ್ಚು ಪರಿಣಾಮಕಾರಿಯಾಗಿತ್ತು. ಬಿ.ಜೆ.ಪಿ. ಒಪ್ಪಿಲಿಕ್ಕಿಲ್ಲ, ಆದರೂ ಒಂದು ಸಮ್ಮಿಶ್ರ ಸರಕಾರವನ್ನು ನಡೆಸುವಲ್ಲಿನ ಅದರ ಅನನುಭವವೇ ಸಮಸ್ಯೆಯ ಮೂಲ ಎಂಬುದು ವಾಸ್ತವ..... ಈ ಸಮ್ಮಿಶ್ರ ಕೂಟದ ಮುಖ್ಯ ಸಮಸ್ಯೆ ಆಂತರಿಕ. ಆದ್ದರಿಂದ ವಿರೋಧ ಪಕ್ಷಗಳ ವಿರುದ್ಧ ಅದರ ವಾಗ್ಬಾಣಗಳು ನಂಬಲರ್ಹವಲ್ಲ. ಇಂದಿನವರೆಗೆ ವಿರೋಧ ಪಕ್ಷಗಳು ಸರಕಾರವನ್ನು ಅಸ್ಥಿರಗೊಳಿಸುವ ಒಂದೂ ಕ್ರಮವನ್ನು ತಗೊಂಡಿಲ್ಲ. ನಿಜ ಸಂಗತಿಯೆಂದರೆ ಬಿ.ಜೆ.ಪಿ. ಸರಕಾರದ ಸ್ಥಿರತೆ ವಿರೋಧ ಪಕ್ಷಗಳಿಂದಲೇ ಹೊರತು ಅದರ ಮಿತ್ರರಿಂದಲ್ಲ...................................

.... ಈ ಪಕ್ಷ ತಾನು ಅಧಿಕಾರದಲ್ಲಿದ್ದಾಗ ಗಲಭೆಗಳನ್ನು ತಡೆಯಲು, ಸಮರ್ಥನಾಗಿದ್ದೆ ಎಂಬುದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿತ್ತು. ಆದರೆ ಗುಜರಾತ್, ರಾಜಾಸ್ತಾನ್, ಉತ್ತರ ಪ್ರದೇಶಗಳಲ್ಲಿನ ಇತ್ತೀಚಿನ ಘಟನೆಗಳು, ಜೊತೆಗೆ ಶ್ರೀಕೃಷ್ಣ ಆಯೋಗದ ವರದಿಯನ್ನು ಕಸದ ಬುಟ್ಟಿಗೆ ಹಾಕಿರುವುದು ಅದರ ಈ ಹೆಗ್ಗಳಿಕೆಯ ಮೇಲೆ ಕರಿನೆರಳು ಹಾಸಲಾರಂಭಿಸಿದೆ. ಸಂಘ ಪರಿವಾರದ ಅಂಗಗಳು ವಿವಾದಾತ್ಮಕ ವಿಷಯಗಳ ಬಗ್ಗೆ ಸಂಯಮದಿಂದ ವರ್ತಿಸುವಂತೆ ಅದಕ್ಕೆ ಮಾಡಲಾಗದಿರುವುದು ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿದೆ..

.... ಇವೆಲ್ಲಾ ತೋರಿಸುವುದೇನೆಂದರೆ ವಿರೋಧ ಪಕ್ಷಗಳಿಗಿಂತ ಹೆಚ್ಚಾಗಿ ಅದರ ಮಿತ್ರ ಪಕ್ಷಗಳ, ಸ್ನೇಹಿತರ ವರ್ತನೆಯೇ ಸರಕಾರದ ಸ್ಥಿರತೆಗೆ ಸಂಚಕಾರ ತಂದಿದೆ. ಆದರೆ ಜೈಪುರ್‌ನಲ್ಲಿ ವಿರೋಧಪಕ್ಷಗಳನ್ನು ದೂಷಿಸಲೆಂದೇ ಸಾಕಷ್ಟು ಶಕ್ತಿ ವ್ಯಯಿಸಿದರೂ ಈ ಸವಾಲನ್ನು ಎದುರಿಸುವುದು ಹೇಗೆ ಎಂಬ ಬಗ್ಗೆ ಸೂಚನೆಯಂತೂ ಸಿಕ್ಕಿಲ್ಲ"





ಸೂಡಾನಿನ ಔಷಧಿ ತಯಾರಿಕಾ ಘಟಕ-ಅಮೇರಿಕನ್ ಕ್ಷಿಪಣಿ ಧಾಳಿಯ ಮೊದಲು ಮತ್ತು ನಂತರ

ಕ್ಲಿಂಟನ್ ಸಾಹೇಬಾ, ಮಾಡಿದ್ದುಣ್ಣೋ ಮಹರಾಯ!

ಇತ್ತೀಚೆಗೆ ಅಫಘಾನಿಸ್ತಾನ ಮತ್ತು ಸೂಡಾನಿನ ಮೇಲೆ ಅಮೆರಿಕನ್ ಕ್ಷಿಪಣಿ ಧಾಳಿ ಹಲವು ಪ್ರಶ್ನೆಗಳನ್ನೆಬ್ಬಿಸಿದೆ. ಮೊದಲನೆಯದು, ದೇಶಗಳ ಸಾರ್ವಭೌಮತೆಯನ್ನು ಉಲ್ಲಂಘಿಸುವ ಹಕ್ಕನ್ನು ಅಮೆರಿಕಾದ ಆಳರಸರಿಗೆ ನೀಡಿದವರಾರು? ಇಷ್ಟೇ ಪ್ರಮುಖವಾದ ಇನ್ನೊಂದು ಪ್ರಶ್ನೆ- ಇಸ್ಲಾಮಿ ಮೂಲಭೂತವಾದದ್ದು. ಇಸ್ಲಾಮಿ ಮೂಲ ಭೂತವಾದಿಗಳ ಭಯೋತ್ಪಾದಕತೆಯ ವಿರುದ್ಧ ಹೀಗೆ ಮಾಡಬೇಕಾಗಿದೆ ಎಂದು ಅಮೆರಿಕನ್ ಆಳರಸರು ತಮ್ಮ ಕೃತ್ಯವನ್ನು ಸಮರ್ಥಿಸಿಕೊಂಡಿದ್ದಾರೆ. ಅದೇ ಕಾರಣಕ್ಕಾಗಿ ಭಾರತದ ಬಲಪಂಥೀಯ ಸರಕಾರವೂ ಭಾರತದ ಹಿಂದಿನ ಸ್ಪಷ್ಟ ವಿದೇಶಾಂಗ ನೀತಿಯನ್ನು ಕೈಬಿಟ್ಟು ಪರೋಕ್ಷವಾಗಿ ಈ ಕೃತ್ಯವನ್ನು ಒಪ್ಪಿದೆ. ಆದರೆ ಈ ರೀತಿ ವಿಶ್ವಾದ್ಯಂತ ಅದೂ ಮೂರನೇ ಜಗತ್ತಿನ ದೇಶಗಳಲ್ಲಿ ಇಸ್ಲಾಮೀ ಮೂಲಭೂತವಾದಿಗಳ ಪ್ರಭಾವ ಹೆಚ್ಚಲು ಕಾರಣವೇನು? ಇದು ಸ್ವಾಭಾವಿಕವಾಗಿಯೇ ಏಳುವ ಪ್ರಶ್ನೆ.

ಎರಡನೇ ಮಹಾಯುದ್ಧದ ನಂತರ ಭಾರತವೂ ಸೇರಿದಂತೆ ಮೂರನೇ ಜಗತ್ತು ಎನಿಸಿಕೊಳ್ಳುವ ಎಲ್ಲಾ ದೇಶಗಳಲ್ಲಿ ಮೂಲಭೂತವಾದದ ವಿರುದ್ಧ ಹೋರಾಟಕ್ಕೆ ಬದ್ಧವಾದ ರಾಷ್ಟ್ರೀಯವಾದಿ, ಧರ್ಮನಿರಪೇಕ್ಷ ಸರಕಾರಗಳು ಮೂಡಿಬಂದವು. ಈಗ ಅವು ಪತನಗೊಂಡು ಮೂಲಭೂತವಾದಿ ಶಕ್ತಿಗಳು ಎದ್ದು ಬರಲು ಕಾರಣವೇನು? - ಇದು ಎಲ್ಲಾ ಪ್ರಜಾಪ್ರಭುತ್ವವಾದಿಗಳ ಮುಂದಿರುವ ಗಹನವಾದ ಪ್ರಶ್ನೆ.

ಅದಕ್ಕೆ ಒಬ್ಬ ಆರ್ಥಿಕ ತಜ್ಞರು ಹೀಗೆ ಉತ್ತರ ನೀಡುತ್ತಾರೆ - ಈ ಹೆಚ್ಚಿನ ದೇಶಗಳಲ್ಲಿ ಆಗಷ್ಟೇ ಮೂಡಿ ಬರುತ್ತಿದ್ದ ಬಂಡವಾಳಶಾಹಿ ವರ್ಗ ರಾಷ್ಟ್ರೀಯ ವಿಮೋಚನೆಯನ್ನು ತನ್ನನ್ನು ಶ್ರೀಮಂತಗೊಳಿಸಲಿಕ್ಕಷ್ಟೇ ಬಳಸಿಕೊಂಡಿತು. ಹಲವೆಡೆ ಇದಕ್ಕಾಗಿ ಅದು ಭೂಮಾಲಕ ಶಕ್ತಿಗಳೊಡನೆ ಮೈತ್ರಿಯನ್ನೂ ಮಾಡಿಕೊಳ್ಳಬೇಕಾಯಿತು. ಬಂಡವಾಳಶಾಹಿ ಬೆಳವಣಿಗೆಗೆ ಬೇಕಾದ ಆರಂಭಿಕ ಬಂಡವಾಳ ಸಂಗ್ರಹಕ್ಕೆ ಅವು ಹಿಡಿದ ದಾರಿಯಿದು - ಜನಸಮೂಹಗಳನ್ನೇ ಹಿಂಡಿ. ಇದೇ 'ಭ್ರಷ್ಟಾಚಾರ'ದ ರೂಪ ಪಡೆಯಿತು. ಇದರಿಂದಾಗಿ ಈ ಶಕ್ತಿಗಳಿಗೆ ಜನಬೆಂಬಲ ಇಳಿಮುಖವಾಗಲಾರಂಭಿಸಿತು. ಅಂದ ಮಾತ್ರಕ್ಕೆ ಮೂಲಭೂತವಾದಿ ಶಕ್ತಿಗಳು ಮೇಲೆದ್ದು ಬರಬೇಕೆಂದೇನೂ ಇರಲಿಲ್ಲ. ಇಲ್ಲೇ ಸಾಮ್ರಾಜ್ಯಶಾಹಿಗಳ 'ಕಾಣಿಕೆ' ಇರುವುದು ಎನ್ನುತ್ತಾರೆ ಈ ಆರ್ಥಿಕ ತಜ್ಞರು.

ಬಂಡವಾಳಶಾಹಿ-ಭೂಮಾಲಕ ಶಕ್ತಿಗಳ ಜನಬೆಂಬಲ ಕ್ಷೀಣಗೊಳ್ಳುತ್ತಾ ಹೋದಂತೆ ಪ್ರಗತಿಪರ ಪರ್ಯಾಯ ಮೇಲೆದ್ದು ಬರುವ ಲಕ್ಷಣಗಳು ಹಲವೆಡೆ ಕಂಡವು. ಆದರೆ ಸಾಮ್ರಾಜ್ಯಶಾಹಿ ಹೀಗಾಗದಂತೆ ತಡೆಯಿತು. ಇದು ಮೂರು ರೀತಿಯಲ್ಲಿ ನಡೆಯಿತು. ತನ್ನ ಕೈಗೊಂಬೆ ಆಳರಸರನ್ನು ತಂದು ಸಂಬಂಧಪಟ್ಟ ದೇಶಗಳಲ್ಲಿನ ಎಡ ಮತ್ತು ಇತರ ಪ್ರಗತಿಪರ ಶಕ್ತಿಗಳನ್ನು ದಮನ ಮಾಡಿಸಿತು; ಎರಡನೆಯದಾಗಿ ಬಂಡವಾಳಶಾಹಿಗಳ ಕೆಲವು ವಿಭಾಗಗಳನ್ನು ಐ.ಎಂ.ಎಫ್. ಶರತ್ತುಗಳ ಮೂಲಕ ತನ್ನ ಕಡೆ ಮಾಡಿಕೊಂಡು, ಪ್ರಗತಿಪರ ಶಕ್ತಿಗಳನ್ನು ದಮನ ಮಾಡಿಸಿತು; ಮೂರನೆಯದಾಗಿ, ನೇರವಾಗಿ ಮೂಲಭೂತವಾದಿ ಶಕ್ತಿಗಳನ್ನೇ ರಾಷ್ಟ್ರೀಯವಾದಿ ಪ್ರಗತಿಪರ ಶಕ್ತಿಗಳ ವಿರುದ್ಧ ಬಳಸಿತು. ಈ ಪ್ರಕ್ರಿಯೆಯ ದುಷ್ಪರಿಣಾಮವೇ ಮೂಲಭೂತವಾದಿ ಶಕ್ತಿಗಳ ಪ್ರಭಾವ. ಇದಕ್ಕೆ ಇತಿಹಾಸವೇ ಸಾಕ್ಷಿ. ಕೆಲವು ಉದಾಹರಣೆಗಳನ್ನು ನೆನಪಿಸಿಕೊಳ್ಳೋಣ.

★★★

1950 ರ ದಶಕದಲ್ಲಿ ಇರಾನಿನಲ್ಲಿ ಪ್ರಧಾನಿಯಾಗಿದ್ದ ಮಾಸಾದೆಗ್ ನೇತೃತ್ವದ ಸರಕಾರ ಇರಾನಿನ ತೈಲ ಉದ್ದಿಮೆಯನ್ನು ರಾಷ್ಟ್ರೀಕರಿಸುವ ಧೈರ್ಯ ತೋರಿತು. ಆಗ ಸಿಐಎ ಪಿತೂರಿ ಮೂಲಕ ಆ ಸರಕಾರವನ್ನು ಉರುಳಿಸಿ ಅಮೆರಿಕನ್ ಆಳರಸರು ಶಾಹನನ್ನು ಅಧಿಕಾರದಲ್ಲಿ ಕುಳ್ಳಿರಿಸಿದರು, ಕಮ್ಯುನಿಸ್ಟರು ಮತ್ತು ಇತರ ಪ್ರಗತಿಪರ ರಾಷ್ಟ್ರೀಯವಾದಿಗಳನ್ನು ಕ್ರೂರವಾಗಿ ದಮನ ಮಾಡಿಸಿದರು. ಶಾಹನ ಆಳ್ವಿಕೆಯಿಂದ ಉಂಟಾದ ವ್ಯಾಪಕ ಅಸಂತೃಪ್ತಿಗೆ ಸರಿಯಾದ ರೂಪ ಕೊಡಬಲ್ಲ ಎಡ-ಪ್ರಗತಿಪರ ಶಕ್ತಿಗಳನ್ನು ಬಹಳ ದುರ್ಬಲಗೊಳಿಸಿದ್ದರಿಂದ ಅನಿವಾರ್ಯವಾಗಿಯೇ ಖೊಮೇನಿಗಳ ಮೂಲಭೂತವಾದ ಬೆಳೆಯಿತು. ಅವರೇ ಅಧಿಕಾರಕ್ಕೆ ಬರುವಂತಾಯಿತು.

★★★

ಸೂಡಾನಿನದ್ದು ಇನ್ನೊಂದು ಉದಾಹರಣೆ. ಅಲ್ಲಿ ಆಫ್ರಿಕಾ ಖಂಡದಲ್ಲೆ ಅತಿ ಬಲಿಷ್ಠವಾದ ಕಮ್ಯುನಿಸ್ಟ್ ಪಕ್ಷವಿತ್ತು. ಇಲ್ಲಿಯೂ ಸಾಮ್ರಾಜ್ಯಶಾಹಿ ಬೆಂಬಲದಿಂದ ಮಿಲಿಟರಿ ಕ್ಷಿಪ್ರಕ್ರಾಂತಿ ನಡೆಯಿತು. ಕಮ್ಯುನಿಸ್ಟರ ಕ್ಷಿಪ್ರಕ್ರಾಂತಿ ತಡೆಯಲು ಹೀಗೆ ಮಾಡಲಾಯಿತು ಎಂದು ಹೇಳಿಕೊಳ್ಳಲಾಯಿತು. ನಂತರ ಅಲ್ಲಿ ಕಮ್ಯುನಿಸ್ಟರ ವ್ಯಾಪಕ ದಮನ ನಡೆಯಿತು. ಕಮ್ಯುನಿಸ್ಟರ ಹಿರಿಯ ಮುಖಂಡ ಮಹಜಾಬ್‌ರನ್ನು ಗಲ್ಲಿಗೇರಿಸಲಾಯಿತು. ಹೀಗೆ ಇಲ್ಲಿಯೂ ಪ್ರಗತಿಪರ ಶಕ್ತಿಗಳನ್ನು ದುರ್ಬಲಗೊಳಿಸಿ ಮೂಲಭೂತವಾದಿ ಶಕ್ತಿಗಳ ಬೆಳವಣಿಗೆಗೆ ಹಾದಿ ಪ್ರಶಸ್ತಗೊಳಿಸಲಾಯಿತು. 1989 ರ ಮಿಲಿಟರಿ ಕ್ಷಿಪ್ರಕ್ರಾಂತಿಯ ನಂತರ ಈ ಶಕ್ತಿಗಳ ಪ್ರಾಬಲ್ಯ ವಿಪರೀತ ಹೆಚ್ಚಿತು.

★★★

ಅಲ್ಜೀರಿಯನ್ನರು ಫ್ರೆಂಚ್ ಸಾಮ್ರಾಜ್ಯಶಾಹಿಯ ವಿರುದ್ಧ ನಡೆಸಿದ ವಿಮೋಚನಾ ಹೋರಾಟಕ್ಕೆ ಇತಿಹಾಸದಲ್ಲಿ ಒಂದು ವಿಶಿಷ್ಟ ಸ್ಥಾನವಿದೆ. ಈ ಹೋರಾಟದ ನಂತರ ಎಫ್.ಎಲ್.ಎನ್. ಪಕ್ಷ ಅಧಿಕಾರಕ್ಕೆ ಬಂತು. ನಂತರ ಪಕ್ಷದೊಳಗೇ ಭಿನ್ನಾಭಿಪ್ರಾಯ ಬೆಳೆದುದರ ಪರಿಣಾಮ ವಾಗಿ ಕರ್ನಲ್ ಬೂಮೆದೀನ್ ನೇತೃತ್ವದಲ್ಲಿ ಕ್ಷಿಪ್ರಕ್ರಾಂತಿ ನಡೆಯಿತು. ಇದರ ನಂತರ ರಾಷ್ಟ್ರೀಯ ವಿಮೋಚನಾ ಹೋರಾಟದ ಪ್ರಗತಿಪರ ವಿಭಾಗಗಳನ್ನು ಮೂಲೆ ಗುಂಪು ಮಾಡಲಾಯಿತು. ಅಲ್ಜೀರಿಯದ ಹೊಸ ಸರಕಾರಕ್ಕೆ ಸಾಮ್ರಾಜ್ಯಶಾಹಿಯು ಆಸೆ-ಆಮಿಷಗಳನ್ನು ಒಡ್ಡಿ ತನ್ನ ಬುಟ್ಟಿಗೆ ಹಾಕಿಕೊಂಡಿತು. ಈ ಸರಕಾರದ ದುರಾಡಳಿತದ ವಿರುದ್ಧ ಜನಗಳ ಅಂಸತೃಪ್ತಿ ಹೆಚ್ಚುತ್ತಾ ಹೋಗಲಾರಂಭಿಸಿದಾಗ ಅದಕ್ಕೆ ಪ್ರಜಾಸತ್ತಾತ್ಮಕ ದಿಕ್ಕು ನೀಡಲು ಕ್ಷೀಣಗೊಂಡ ಪ್ರಗತಿಪರ ಶಕ್ತಿಗಳಿಗೆ ಸಾಧ್ಯವಾಗಲಿಲ್ಲ. ಅದರ ಫಲವೇ ಮಹಾನ್ ಜಾತ್ಯಾತೀತ ಪರಂಪರೆ ಹೊಂದಿದ್ದ ಅಲ್ಜೀರಿಯಾದಲ್ಲೂ ಇಸ್ಲಾಮೀ ಮೂಲಭೂತವಾದಿಗಳು ಪ್ರಮುಖ ಶಕ್ತಿಯಾಗಿ ಬೆಳೆದುದ್ದು. ಸದ್ಯಕ್ಕೆ ಮಿಲಿಟರಿಯಿಂದಾಗಿ ಅದು ಅಧಿಕಾರಕ್ಕೆ ಬರದಂತೆ ತಡೆಯಾಗಿದ್ದರೂ ಆ ದೇಶ ಈಗ ಅಂತರ್ಯುದ್ಧದ ನೋವನ್ನು

ಪುಟ 7 ಕ್ಕೆ

ಅಧ್ಯಾಪಕರ ಮುಷ್ಕರಕ್ಕೆ ಸಾರ್ವತ್ರಿಕ ಬೆಂಬಲ ಅಗತ್ಯ



ಸೆಪ್ಟಂಬರ್ 1 ರಂದು ದೇಶಾದ್ಯಂತ ಅಧ್ಯಾಪಕರು ಸರ್ಕಾರದ ಧೋರಣೆಯ ವಿರುದ್ಧ ಮತಪ್ರದರ್ಶನ ನಡೆಸಿದರು. ಬೆಂಗಳೂರಿನಲ್ಲಿ ನಡೆದ ಮತಪ್ರದರ್ಶನದ ಒಂದು ಚಿತ್ರ.

ಬಿಜೆಪಿ. ನೇತೃತ್ವದ ಕೇಂದ್ರ ಸರ್ಕಾರದ ಮುಖವಾಡಗಳು ಒಂದರ ನಂತರ ಒಂದರಂತೆ ಕಳಚಿಕೊಳ್ಳುತ್ತಿವೆ. ಮಧ್ಯಮ ವರ್ಗದ ನೌಕರರು ಬಿಜೆಪಿ ಬಗ್ಗೆ ಅನೇಕ ರೀತಿಯ ಭ್ರಮೆಗಳನ್ನು ಬೆಳೆಸಿಕೊಂಡು ಬಂದಿದ್ದರು. ಶಾಲಾ ಕಾಲೇಜುಗಳ ಶಿಕ್ಷಕರು, ಅಧ್ಯಾಪಕರು ಸಹ ಇದಕ್ಕೆ ಹೊರತಾಗಿರಲಿಲ್ಲ. ಆದರೆ ಕಳೆದ ಒಂದು ತಿಂಗಳಿನಿಂದ ಅನಿರ್ದಿಷ್ಟ ಮುಷ್ಕರಕ್ಕಿಳಿದಿರುವ ವಿಶ್ವ ವಿದ್ಯಾಲಯ ಮತ್ತು ಕಾಲೇಜು ಅಧ್ಯಾಪಕರು ಬಿಜೆಪಿ ಸರ್ಕಾರದ ನಿಜ ಸ್ವರೂಪವನ್ನು ಸ್ಪಷ್ಟವಾಗಿ ಮನಗಾಣುವಂತಾಗಿದೆ.

ಕೇಂದ್ರ ಮಾನವ ಸಂಪನ್ಮೂಲ ಮಂತ್ರಿ ಮುರಳಿ ಮನೋಹರ ಜೋಷಿ ಅಧ್ಯಾಪಕರ ಮುಷ್ಕರವನ್ನು ರಾಜಕೀಯ ಪ್ರೇರಿತ ಎಂದು ಬಣ್ಣಿಸಿದ್ದಾರೆ. ದೆಹಲಿಯ ನರ್ಸುಗಳು ಹೋರಾಟ ಆರಂಭಿಸಿ ದಾಗಲೂ, ಇತ್ತೀಚೆಗೆ ಅಂಚೆಯ ನೌಕರರು ಐಕ್ಯ ಚಳುವಳಿ ನಡೆಸಿದಾಗಲೂ ಬಿಜೆಪಿ ಸರ್ಕಾರ ಇದೇ ಆರೋಪವನ್ನು ಮಾಡಿತ್ತು. ಯಾವುದೇ ಪ್ರಜಾಸತ್ತಾತ್ಮಕ ಚಳುವಳಿಯನ್ನು ಸಹಿಸದಿರುವುದು ಫ್ಯಾಸಿಸ್ಟ್ ಹೃದಯದ ಬಿಜೆಪಿ.ಯ ಸಹಜ ಲಕ್ಷಣವಾಗಿದೆ.

ಬಿಜೆಪಿಯನ್ನು ಅಧಿಕಾರದಿಂದ ಕೆಳಗಿಳಿಸಲು ಅಧ್ಯಾಪಕರು ಹೋರಾಟಕ್ಕಿಳಿದಿಲ್ಲ. ಅದರ ಗುಟ್ಟಿನ ಅಜೆಂಡವನ್ನು ವಿರೋಧಿಸುವ ಸಾಹಸಕ್ಕೂ ಅವರು ಇಳಿದಿಲ್ಲ. ವಿಶ್ವವಿದ್ಯಾಲಯ ಅನುದಾನ ಆಯೋಗ (ಯು.ಜಿ.ಸಿ.) ಮಾಡಿದ ಶಿಫಾರಸುಗಳನ್ನು ಬದಿಗೊತ್ತಿ ಕಳೆದ ಜುಲೈ ತಿಂಗಳಲ್ಲಿ ಬಿಜೆಪಿ ಸರ್ಕಾರ ಆದೇಶ ಹೊರಡಿಸದೆ ಹೋಗಿದ್ದರೆ ಅಧ್ಯಾಪಕರು ಚಳುವಳಿಗೆ ಇಳಿಯುವ ಪರಿಸ್ಥಿತಿ ಬರುತ್ತಿದ್ದಿಲ್ಲ. ಕೇಂದ್ರ ಮಾನವ ಸಂಪನ್ಮೂಲ ಖಾತೆಯ ಅಧ್ಯಾಪಕ ವಿರೋಧಿ ಧೋರಣೆಯಿಂದಾಗಿಯೇ ಅಧ್ಯಾಪಕರ ಈ ಚಳುವಳಿ ಆರಂಭವಾಗಿದೆ ಎಂಬುದನ್ನು ಜನತೆ ಅರಿಯಬೇಕಾಗಿದೆ. ಕೇಂದ್ರದಲ್ಲಿ ಬಿಜೆಪಿಯ ಬದಲು ಬೇರೆ ಯಾವ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದು ಇದೇ ರೀತಿಯಲ್ಲಿ ಯು.ಜಿ.ಸಿ.ಯ ಶಿಫಾರಸುಗಳ ವಿರುದ್ಧ ಕ್ರಮವಹಿಸಿದ್ದರೂ ಈ ಚಳುವಳಿ ನಡೆಯುತ್ತಿತ್ತು. ಕಾಲೇಜು ಅಧ್ಯಾಪಕರು ನಮ್ಮ ದೇಶದ ಪ್ರಜೆಗಳ ಒಂದು ಅತ್ಯಂತ ಪ್ರಜ್ಞಾವಂತ ವಿಭಾಗ. ಅವರನ್ನು ರಾಜಕೀಯವಾಗಿ ಪ್ರೇರೇಪಿಸುವುದಾಗಲಿ, ಮೋಸದಿಂದ ಒಂದು ಚಳುವಳಿಗೆ ದುಮುಕಿಸುವುದಾಗಲಿ ಅಷ್ಟು ಸುಲಭದ ಕೆಲಸವಲ್ಲ ಎಂಬುದು ಸ್ವತಃ ಅಧ್ಯಾಪಕರಾಗಿರುವ ಮಂತ್ರಿ ಎಂ.ಎಂ. ಜೋಷಿ ಯವರಿಗೆ ಗೊತ್ತಿರದ ವಿಷಯವಲ್ಲ. ಜೋಷಿಯವರು ವಿರೋಧಪಕ್ಷದಲ್ಲಿದ್ದಾಗ ಅಧ್ಯಾಪಕರ ಇದೇ ಬೇಡಿಕೆಗಳಿಗಾಗಿ ಸಂಸತ್ತಿನಲ್ಲಿ ವಾದಿಸುತ್ತಿದ್ದುದನ್ನು ಇಂದು ಆಳುವ ಪಕ್ಷದವರಾಗಿ ಅವರು ಮರೆತಿದ್ದಾರೆಯೇ ಅಥವ ಅಂದು ಅವರು ಶಿಕ್ಷಕರ ಬಗ್ಗೆ ಸುರಿಸಿದ್ದು ಕೇವಲ ಮೊಸಳೆ ಕಣ್ಣೀರೆ ಎಂದು ಕೇಳಬೇಕಾಗುತ್ತದೆ. ಅಧ್ಯಾಪಕರ ಚಳುವಳಿ ರಾಜಕೀಯ ಪ್ರೇರಿತ ಎನ್ನುವುದನ್ನು ಬಿಟ್ಟು ಐ.ಎಂ.ಎಫ್ ಜಾಗತಿಕ ಬ್ಯಾಂಕಿನ ಷರತ್ತುಗಳಿಂದಾಗಿ ಅಧ್ಯಾಪಕರ ಬೇಡಿಕೆಗಳನ್ನು ಒಪ್ಪಲಾಗು ವುದಿಲ್ಲ ಎಂದು ಒಪ್ಪಿಕೊಳ್ಳುವ ಧೈರ್ಯ ಇದೆಯಾ ಜೋಷಿಯವರಿಗೆ?

ಅಧ್ಯಾಪಕರ ಮುಷ್ಕರದಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಎಂಬುದು ನಿಜ. ಆದರೆ ಬಿಜೆಪಿ ಸರ್ಕಾರಕ್ಕೆ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ನಿಜವಾದ ಕಾಳಜಿ ಇದೆಯಾ? ಇದ್ದರೆ ಯಾಕೆ ಇಷ್ಟು ಹಠ ಮಾರಿತನ? ಮುಷ್ಕರವನ್ನು ಹಿಂತೆಗೆದು ಕೊಂಡರೆ ಮಾತ್ರ ಮಾತುಕತೆ ಎಂಬ ಪ್ರತಿಷ್ಠೆ ಯಾಕೆ? ಮುಷ್ಕರ ನಡೆಯುತ್ತಿರು ವಾಗಲೆ ಕಿವಿಗೊಡದವರು ಮುಷ್ಕರ ನಿಲ್ಲಿಸಿದಾಗ ಕಿವಿಗೊಡುವ ಸಾಧ್ಯತೆ ಇದೆಯಾ? ಸಂಬಂಧಪಟ್ಟ ನೌಕರ ಸಂಘಟನೆಗಳು ಸರ್ಕಾರವನ್ನು ಸಂಪರ್ಕಿಸಿದ ತಕ್ಷಣವೇ ಆದ್ಯತೆ ನೀಡಿ ಅವರ ಸಮಸ್ಯೆಗಳನ್ನು ಕುರಿತು ಸೌಹಾರ್ದಯುತವಾಗಿ ಚರ್ಚೆ ಏಕೆ ನಡೆಸಬಾರದಿತ್ತು? ಬೇಡಿಕೆ ಗಳಲ್ಲಿ ಸಣ್ಣ ಪುಟ್ಟ ಬೇಡಿಕೆಗಳಿಗೆ ಒಪ್ಪಿಗೆಗೆ ಪ್ರಚಾರಕೊಟ್ಟು ಮುಖ್ಯ ಬೆಡಿಕೆಗಳನ್ನು ಮರೆಮಾಚುವ ಪ್ರವೃತ್ತಿ ಏಕೆ? ಅಧ್ಯಾಪಕರ ಲ್ಲಿರುವ ಆರ್.ಎಸ್.ಎಸ್. ಸದಸ್ಯರನ್ನು ಮಾತ್ರ ಕರೆದು ಅವರ ಮೂಲಕ ಮುಷ್ಕರ ಮುರಿಯುವ ಸರ್ಕಾರದ ಪ್ರಯತ್ನ ರಾಜಕೀಯ ಪ್ರೇರಿತವಲ್ಲವೆ?

ಆರ್. ಎಸ್. ಎಸ್. ಹಿಡಿತದಲ್ಲಿರುವ ಎ.ಬಿ.ವಿ.ಪಿ. ಎಂಬ ವಿದ್ಯಾರ್ಥಿ ಸಂಘಟನೆ ಅಧ್ಯಾಪಕರ ಈ ಮುಷ್ಕರವನ್ನು ವಿರೋಧಿಸುತ್ತದೆ. ಎ.ಬಿ.ವಿ.ಪಿ.ಯ ಪದಾಧಿಕಾರಿಗಳು ಸಹ ಕೆಲವು ಅಧ್ಯಾಪಕರೇ ಆಗಿರುತ್ತಾರೆ. ಬಿ.ಜೆ.ಪಿ. ಸರ್ಕಾರ ಬಂದಿದೆ ಎಂದು ಇವರೇನು ತಮ್ಮ ಸಂಬಳ ತ್ಯಾಗಮಾಡುವು ದಿಲ್ಲ ಮಾತ್ರ ವಲ್ಲ ಈ ಮುಷ್ಕರದಿಂದ ಪಡೆಯುವ ಹೆಚ್ಚುವರಿ ಸಂಬಳ ಸವಲತ್ತು ಗಳನ್ನು ತಿರಸ್ಕರಿಸುವುದಿಲ್ಲ. ಮುಗ್ಧ ವಿದ್ಯಾರ್ಥಿಗಳನ್ನು ಮಾತ್ರ ಸುಲಭವಾಗಿ ದಾರಿತಪ್ಪಿಸುತ್ತಾರೆ. ಅಧ್ಯಾಪಕರು ಮಾಡುವಂತೆ ಕೆಲವೊಮ್ಮೆ ವಿದ್ಯಾರ್ಥಿಗಳು ದಿನಗಟ್ಟಲೆ ಮುಷ್ಕರ ಮಾಡಬೇಕಾಗುತ್ತದೆ. ವಿದ್ಯಾರ್ಥಿಗಳು ಮುಷ್ಕರ ಮಾಡಿದಾಗಲೂ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಧಕ್ಕೆಯಾಗುತ್ತದೆ. ವಿದ್ಯಾರ್ಥಿ ಗಳಾಗಲಿ , ಶಿಕ್ಷಕರಾಗಲಿ ಶಿಕ್ಷಣ ರಂಗದ ಅವಿಭಾಜ್ಯ ಅಂಗಗಳು, ವಿದ್ಯಾರ್ಥಿ ಗಳಾಗಲೀ ಶಿಕ್ಷಕರಾಗಲಿ ಮುಷ್ಕರ ಮಾಡುವ ಪರಿಸ್ಥಿತಿ ಬರಬಾರದು. ಆಳುವ ಸರ್ಕಾರಗಳು ಶಿಕ್ಷಣಕ್ಕೆ ನೀಡಬೇಕಾದ ಆದ್ಯತೆ ನೀಡಿದರೆ ಶಿಕ್ಷಕರಾಗಲಿ ವಿದ್ಯಾರ್ಥಿಗಳಾಗಲಿ ಶಿಕ್ಷಣಕ್ಕೆ ಧಕ್ಕೆಯಾಗುವ ಮುಷ್ಕರಗಳನ್ನು ಮಾಡುವ ಪ್ರಸಂಗ ಬರುವುದಿಲ್ಲ. ಅಧಿಕಾರದಲ್ಲಿದ್ದವರು ಕರ್ತವ್ಯವನ್ನು ನಿರ್ವಹಿಸುವಲ್ಲಿ ವಿಫಲರಾದಾಗ ಮುಷ್ಕರವೆಂಬ ಪ್ರಜಾಸತ್ತಾತ್ಮಕ ಹಕ್ಕನ್ನು ಚಲಾಯಿಸುವುದು ಯಾರಿಗಾದರೂ ಅನಿವಾರ್ಯವಾಗುತ್ತದೆ.

ವಿದ್ಯಾರ್ಥಿಗಳಾದರೂ ಆಲೋಚನೆ ಮಾಡಬೇಕು. ಶಿಕ್ಷಕರು ಅಂದರೆ ಶತ್ರುಗಳಲ್ಲ. ಇಂದಿನ ವಿದ್ಯಾರ್ಥಿಗಳು ನಾಳೆ ಶಿಕ್ಷಕರಾಗಬಹುದು. ಕಾಲ ಕಾಲಕ್ಕೆ ಸರಿಯಾದ ಸಂಬಳ ಸವಲತ್ತುಗಳನ್ನು ನೀಡದಿದ್ದರೆ ಅವರು ಹೇಗೆ ವಿದ್ಯಾರ್ಥಿಗಳಿಗೆ ಸರಿಯಾಗಿ ಪಾಠಗಳನ್ನು ಹೇಳಿಕೊಡಲು ಸಾಧ್ಯ? ವಿದ್ಯಾರ್ಥಿಗಳು ಸಹ ಶಿಕ್ಷಕರು ತಮ್ಮ ಪ್ರಜಾಸತ್ತಾತ್ಮಕ ಬೇಡಿಕೆಗಳಿಗಾಗಿ ನಡೆಸುವ ಚಳುವಳಿಗೆ ಬೆಂಬಲ ನೀಡಬೇಕು. ವಿದ್ಯಾರ್ಥಿಗಳ ಪಾಲಕರನ್ನು ಇಂತಹ ಸಂಧರ್ಭಗಳಲ್ಲಿ ದಾರಿತಪ್ಪಿಸಲಾಗುತ್ತಿ ರುತ್ತದೆ. ಅಧ್ಯಾಪಕರನ್ನು ದೂರುವ ಬದಲು ಸರ್ಕಾರದ ಮೇಲೆ ಎಲ್ಲರು ಸೇರಿ ಒತ್ತಡತರುವಂತಾಗಬೇಕು. ನಮ್ಮ ನಮ್ಮ ಪ್ರದೇಶದಿಂದ ಆಯ್ಕೆಯಾಗಿರುವ ಸಂಸತ್ ಸದಸ್ಯರನ್ನು ಹಿಡಿದು ಕೇಳಬೇಕು.

ಸರ್ಕಾರ ಬೆದರಿಕೆಹಾಕುತ್ತಿದೆ. ಆದರೆ ಅಧ್ಯಾಪಕರು ತಮ್ಮ ಹೋರಾಟವನ್ನು ಮುನ್ನಡೆಸಲು ಮತ್ತು ತೀವ್ರ ಗೊಳಿಸಲು ನಿರ್ಧರಿಸಿದ್ದಾರೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯು ಅಧ್ಯಾಪಕರ ಈ ಸಮರಶೀಲ ಹೋರಾಟಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತದೆ ಅಲ್ಲದೆ ವಿದ್ಯಾರ್ಥಿಗಳೂ ಸೇರಿದಂತೆ ಎಲ್ಲಾ ಜನವಿಭಾಗಗಳು ಅಧ್ಯಾಪಕರ ಈ ಹೋರಾಟಕ್ಕೆ ಎಲ್ಲ ವಿಧದ ಬೆಂಬಲ ನೀಡಬೇಕೆಂದು ಮನವಿ ಮಾಡಿದೆ.

ವಿಶ್ವ

ರಾಜಸ್ಥಾನ: ಬಿಜೆಪಿ ಉತ್ಸಾಹಕ್ಕೆ ತಣ್ಣೀರು

ರಾಜಸ್ಥಾನದ 14 ಶಾಸಕರು ಆಳುವ ಬಿಜೆಪಿ ಕೂಟಕ್ಕೆ ಕೈ ಕೊಟ್ಟು ಕಾಂಗ್ರೆಸ್ ಪಕ್ಷದ ಕೈ ಹಿಡಿದಿದ್ದಾರೆ. ಆಗಸ್ಟ್ 31 ರ ಸೋಮವಾರ ಈ ಹಠಾತ್ ವಿದ್ಯಮಾನ ಕಂಡು ಬಂತು. ಇದರಿಂದಾಗಿ ರಾಮ ಭೂಮಿ ನಾಡಿನಲ್ಲಿ ಬಿಜೆಪಿ ಉತ್ಸಾಹಕ್ಕೆ ತಣ್ಣೀರು ಎರಚಿದಂತಾಗಿದೆ.

ಇದೀಗ 194 ಸದಸ್ಯ ಬಲದ ರಾಜಸ್ಥಾನ ವಿಧಾನ ಸಭೆಯಲ್ಲಿ, 14 ಸದಸ್ಯರ ಸೇರ್ಪಡೆಯಿಂದಾಗಿ ಕಾಂಗ್ರೆಸ್ಸಿನ ಬಲ 83 ಕ್ಕೆ ಏರಿದೆ. ಬಿಜೆಪಿಯು 98 ಹಾಗೂ 10 ಪಕ್ಷೇತರ ಶಾಸಕರ ಬೆಂಬಲ ಭೈರವಸಿಂಗ್ ಶೆಖಾವತ್ ನೇತೃತ್ವದ ಸರಕಾರಕ್ಕಿದೆ. ಇದನ್ನು ಗಮನಿಸಿದಾಗ ಶೆಖಾವತ್ ಸರಕಾರಕ್ಕೆ ಅಪಾಯ ವೇನೂ ಇಲ್ಲ ಅನ್ನುವುದು ಗೊತ್ತಾಗುತ್ತಿದೆ. ಆದರೆ, ಇನ್ನೇನು ಕೇವಲ ಮೂರು ತಿಂಗಳಲ್ಲಿ ಅಂದರೆ ನವೆಂಬರ್‌ನಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯ ಬೇಕಿದೆ. ಈ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ, 14 ಶಾಸಕರು ಮತ್ತು ರಾಜಸ್ಥಾನ್‌ನ ಒಬ್ಬ ಸಂಸತ್ ಸದಸ್ಯ ಕಾಂಗ್ರೆಸ್ ಸೇರಿರುವುದರಿಂದ ಖಂಡಿತ ವಾಗಿಯೂ ಬಿಜೆಪಿಯ ಸ್ಥೈರ್ಯವನ್ನು ಉಡುಗಿಸಿದೆ ಎನ್ನುವುದು ಸ್ಪಷ್ಟವಾಗುತ್ತದೆ.

ಆಗಸ್ಟ್ 31ರ ರಾಜಸ್ಥಾನ ವಿದ್ಯಮಾನ ಬಿಜೆಪಿಯ ಬೆಂಬಲದ ನೆಲೆ ಕುಸಿಯುತ್ತಿರುವುದರ ಸ್ಪಷ್ಟ ಸೂಚನೆಯಾಗಿದೆ.

ಉತ್ತರ ಭಾರತದ ನಾಲ್ಕೈದು ರಾಜ್ಯಗಳ ಅಸೆಂಬ್ಲಿಗಳಿಗೆ ರಾಜಸ್ಥಾನದಲ್ಲಿ ಚುನಾವಣೆ ನಡೆಯಲಿದ್ದು ಅದರ ಮೇಲೆ ಈ ವಿದ್ಯಮಾನ ಪರಿಣಾಮ ಬೀರುವ ಸಾಧ್ಯತೆಯಿದೆ.

14 ಶಾಸಕರು ಮಾತ್ರವಲ್ಲದೆ ಕೇಂದ್ರದ ಇಬ್ಬರು ಮಾಜಿ ಮಂತ್ರಿಗಳಾದ ಶೀಶರಾಂ ಓಲಾ(ಈಗ ಎಂಪಿ) ಹಾಗೂ ಸತ್ನಾಲ್ ಮಹಾರಾಜ್ ಕೂಡ ಕಾಂಗ್ರೆಸ್ ಸೇರಿದ್ದಾರೆ. ಇದರಿಂದ ಬಲ ಪಡೆದಿರುವ ಕಾಂಗ್ರೆಸ್ ಜಾತ್ಯಾತೀತ ಶಕ್ತಿಗಳ ನೇತೃ ಶಕ್ತಿಯಾಗಿ ಈ ರಾಜ್ಯಗಳಲ್ಲಿ ಕೋಮುವಾದಿ ಶಕ್ತಿಗಳನ್ನು ಸೋಲಿಸುವ ದಿಸೆಯಲ್ಲಿ ಈ ನವ ಚೈತನ್ಯವನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳುವುದು ಅಗತ್ಯ. ಅದು ಆ ಪಕ್ಷದ ಕರ್ತವ್ಯವೂ ಹೊಣೆಯೂ ಆಗಿದೆ.

ರಾಜಸ್ಥಾನದವರೇ ಆದ ಡಾ|| ಅಬ್ರಾರ್ ಅಹಮದ್ ಕೂಡ ಕೆಲವು ವಾರಗಳ ಹಿಂದೆ ಭಾರತೀಯ ಜನತಾ ಪಕ್ಷವನ್ನು ಬಿಟ್ಟು ಕಾಂಗ್ರೆಸ್‌ಗೆ ಮರಳಿ ಸೇರಿದ್ದರು.

1998 ರ ಲೋಕ ಸಭೆ ಚುನಾವಣೆಗಳ ಸಂದರ್ಭದಲ್ಲಿ ಭಾರೀ ನಿರೀಕ್ಷೆಯೊಂದಿಗೆ ಬಿಜೆಪಿಯನ್ನು ಅಪ್ಪಿಕೊಂಡಿದ್ದ ಮಂದಿ ಇದೀಗ ಭ್ರಮನಿರಸನಗೊಂಡು ಮತ್ತೆ ಜತ್ಯಾತೀತ ಶಕ್ತಿಗಳತ್ತ ಒಲವು ತೋರುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ.

ದೆಹಲಿ ಪ್ರದೇಶದಲ್ಲಿ ಕೈಗಾರಿಕಾ ಮುಷ್ಕರ

ದೆಹಲಿ, ಗಾಜಿಯಾಬಾದ್, ಗೌತಮ ಬುದ್ಧ ನಗರ (ನೊಯ್ಡಾ) ಮತ್ತು ಫರೀದಾಬಾದ್‌ನಲ್ಲಿ ಆಗಸ್ಟ್ 21 ರಂದು ಕಾರ್ಮಿಕರು ಪೂರ್ಣ ಹರತಾಳ ಆಚರಿಸಿದರು ಸರಕಾರ ಅನುಸರಿಸುತ್ತಿರುವ ಕಾರ್ಮಿಕ ವಿರೋಧಿ ಹಾಗೂ ಜನವಿರೋಧಿ ನೀತಿಗಳನ್ನು ಪ್ರತಿಭಟಿಸಲು ಸಿಐಟಿಯು ದೆಹಲಿ ರಾಜ್ಯ ಸಮಿತಿ ಮುಷ್ಕರಕ್ಕೆ ಕರೆ ನೀಡಿತ್ತು.

ಬೆಲೆ ಏರಿಕೆಗೆ ಕಡಿವಾಣ, ಕನಿಷ್ಠ ವೇತನವನ್ನು 3500 ಹಾಗೂ ಡಿ.ಎ. 2ರೂಪಾಯಿಗೆ ಹೆಚ್ಚಿಸಬೇಕು ಮೊದಲಾದ 8 ಬೇಡಿಕೆಗಳನ್ನು ಸಿಐಟಿಯು ಮುಂದಿಟ್ಟಿದೆ.

ದೆಹಲಿಯ ನಜಫಗಢ, ನಂಗ್ಲೋಯ್ ಮಂಗೋಲ್ಪುರಿ ನರ್ವನಾ ಮಾಜಿರ್‌ಪುರ, ಜಿಟಿಕೆ ರೋಡ್, ನಿರಂಕಾರಿ ಸಮಯಾಪುರ್ ಬದ್ಲಿ, ಝಿಲ್‌ಮಿಲ್, ಫ್ರೆಂಡ್ಸ್‌ಕಾಲನಿ ಪ್ರತಾಪ ಗಂಜ್, ಜಖ್ಲಾ ಮೊದಲಾದೆಡೆ ಮುಷ್ಕರ ಪೂರ್ಣವಾಗಿತ್ತು. ಗಾಜಿಯಾಬಾದ್ ಸೆಕ್ಟರ್-4, ಮೀರತ್ ರಸ್ತೆ, ಬುಲಂದ್ ಶಹರ್ ರಸ್ತೆ ಮೊದಲಾದೆಡೆಯೂ ಮುಷ್ಕರ ಪೂರ್ಣವಾಗಿತ್ತು.

ದೆಹಲಿಯ ಎಲ್ಲಾ 58 ಕೈಗಾರಿಕೆ ಪ್ರದೇಶಗಳಲ್ಲಿ ಮುಂಜಾನೆಯೇ ಸೇರಿದ ಕಾರ್ಮಿಕರು ಮೆರವಣಿಗೆಗಳನ್ನು ನಡೆಸಿದರು.

ಗೂಂಡಾ ದಾಳಿ

ಸಮಯಪುರಿ ಬದ್ಲಿ ಕೈಗಾರಿಕೆ ಪ್ರದೇಶದಲ್ಲಿ ನಾರಾಯಣಸಿಂಗ್ ಎಂಬ ಸ್ಥಳೀಯ ಸಮಾಜ ವಿರೋಧಿ ಬಾಡಿಗೆ ಗೂಂಡಾಗಳ ಒಂದು ತಂಡ ಕಾರ್ಮಿಕರ ಮೆರವಣಿಗೆ ಮೇಲೆ ಆಕ್ರಮಣ ನಡೆಸಿತು. ಕಬ್ಬಿಣ ಸಲಾಕೆಗಳು ಮತ್ತು ಲಾಠಿಗಳಿಂದ ಹೊಡೆದರು. ಇದರಿಂದ ಒಬ್ಬ ಕಾರ್ಮಿಕ ಗಂಭೀರವಾಗಿ ಗಾಯಗೊಂಡಿದ್ದಾರೆ. ನಾರಾಯಣ ಸಿಂಗ್ ಸ್ಥಳೀಯ ಫ್ಯಾಕ್ಟರಿ ಮಾಲಿಕರ ಸಂಘದ ನಿಕಟ ಸಂಪರ್ಕ ಇಟ್ಟುಕೊಂಡಿದ್ದಾನೆ.

ಒಂದು ಕಡೆ ಪೊಲೀಸರು ಕಾರ್ಮಿಕರ ಮೆರವಣಿಗೆಯನ್ನು ನಡೆಸಲು ಅಡ್ಡಿಪಡಿಸಿದರು. 12 ಕಾರ್ಯಕರ್ತರನ್ನು ಬಂಧಿಸಿದರು. ಆದರೆ ಭಾರೀ ಸಂಖ್ಯೆಯಲ್ಲಿದ್ದ ಕಾರ್ಮಿಕರನ್ನು ಕಂಡು ಬಂಧಿತರನ್ನು ಪೊಲೀಸರು ಬಿಡುಗಡೆ ಮಾಡಿದರು. ಫರೀದಾಬಾದ್‌ನಲ್ಲಿ ಶಾಂತಿಯುತ ಮೆರವಣಿಗೆ ಮೇಲೆ ಪೊಲೀಸರ ಅಪ್ರಚೋದಿತ ಲಾಠಿ ಪ್ರಹಾರದಿಂದ ಐದು ಕಾರ್ಮಿಕರು ಗಾಯಗೊಂಡರು.

ಈ ಐತಿಹಾಸಿಕ ಮುಷ್ಕರವನ್ನು ಯಶಸ್ವಿಗೊಳಿಸಿದ್ದಕ್ಕಾಗಿ ಸಿಐಟಿಯು ಕಾರ್ಮಿಕರನ್ನು ಅಭಿನಂದಿಸಿದೆ. ಧೀರ್ಘಕಾಲದಿಂದ ಬಾಕಿಯಿರುವ ಬೇಡಿಕೆಗಳನ್ನು ಈಡೇರಿಸದಿದ್ದರೆ ಈ ಹೋರಾಟವನ್ನು ವಿಸ್ತರಿಸಿ ತೀಕ್ಷ್ಣಗೊಳಿಸಲಾಗುವುದೆಂದು ದೆಹಲಿ ಉತ್ತರ ಪ್ರದೇಶ ಮತ್ತು ಹರ್ಯಾಣ ಸರಕಾರಗಳಿಗೆ ಸಿಐಟಿಯು ಎಚ್ಚರಿಕೆ ನೀಡಿದೆ.

ಪ್ರಾಮಾಣಿಕತೆ ದಕ್ಷತೆಯ ಮತ್ತೊಂದು ಪರಿ!

ಸಮರ್ಥ ನಾಯಕತ ಸ್ಥಿರ ಸರಕಾರ, ಪಾರದರ್ಶಕ ಆಡಳಿತ... ಬಿಜೆಪಿ ನೇತೃತ್ವದ ಸರಕಾರದ ಭರವಸೆಗಳ ಮಹಾಪೂರ...

ಇವೆಲ್ಲವೂ ಹುಸಿ ಹಾಗೂ ಟೊಳ್ಳು ಆಶ್ವಾಸನೆಗಳು ಎಂಬುದು ಆಡಳಿತದ ಐದು ತಿಂಗಳಲ್ಲೇ ಸಾಬೀತಾಗಿ ಹೋಗಿದೆ. ಅದಕ್ಕೆ ಇನ್ನೊಂದು ಸೇರ್ಪಡೆ ಇಲ್ಲಿದೆ ಅಷ್ಟೆ.

ಎಂ.ಎಸ್. ಶೂಸ್ ಎಂಬ ತಪ್ಪಿತಸ್ಥ ಶೂ ಕಂಪೆನಿಗೆ ದೆಹಲಿಯಲ್ಲಿ 350 ಕೋಟಿ ರೂಪಾಯಿ ಮೌಲ್ಯದ ಬೆಲೆಬಾಳುವ ಜಮೀನನ್ನು ಮತ್ತೆ ಮಂಜೂರು ಮಾಡಿರುವ ಪ್ರಕರಣ ಇದೀಗ ಹೊಸ ಹೊಸ ತಿರುವನ್ನು ಪಡೆದು ಕೊಳ್ಳುತ್ತಿದೆ.

ಜಮೀನು ಮಂಜೂರಾಗುವಲ್ಲಿ ಕೇಂದ್ರ ನಗರ ವ್ಯವಹಾರಗಳ ಸಚಿವ ರಾಮಜೇಠ್ಮಲಾನಿ ಅವರ ಪಾತ್ರವಿದೆ, ಲಂಚವನ್ನು ನೀಡಲಾಗಿದೆ ಎಂದು ಆಪಾದಿಸಲಾಗಿದೆ. ಈ ಮೌಲ್ಯಯುತ ಜಮೀನನ್ನು ಎಂಎಸ್ ಶೂಸ್‌ಗೆ ಮಂಜೂರು ಮಾಡಲಾಗದು ಎಂದು ಖಾತೆಯ ಕಾರ್ಯದರ್ಶಿ ಟಿಪ್ಪಣಿ ಬರೆದಿದ್ದರೂ ಅದನ್ನು ಉಲ್ಲಂಘಿಸಿ ಸ್ವತಃ ಜೇಠ್ಮಲಾನಿ ಜಮೀನನ್ನು ಮಂಜೂರು ಮಾಡಿದರು.

ಈ ಜಮೀನಿನ ಮೌಲ್ಯ ಏನಿಲ್ಲವೆಂದರೂ 1000 ಕೋಟಿ ರೂಪಾಯಿ ಆಗಿದ್ದು ಎಂ.ಎಸ್. ಶೂಸ್‌ಗೆ ಅದನ್ನು 350 ಕೋಟಿಗೆ ಮಂಜೂರು ಮಾಡಲಾಗಿದೆ.

ಆದರೆ ಸರಕಾರಕ್ಕೆ ನಷ್ಟ ಆಗಬಾರದೆಂದು ಪ್ರಾಮಾಣಿಕ ಸಲಹೆ ನೀಡಿದ್ದ ಕಾರ್ಯದರ್ಶಿಗೆ ಸಿಕ್ಕಿದ ಫಲ ಏನು ಗೊತ್ತೆ? ಕಾರ್ಯದರ್ಶಿ ಕಿರಣ ಅಗರ್‌ವಾಲ್ ಅವರಿಂದ ಅನೇಕ ಮಹತ್ವದ ಹೊಣೆಗಳನ್ನು ಕಿತ್ತುಕೊಂಡು ಅವನ್ನು ಬೇರೆಯವರಿಗೆ ವಹಿಸಿಕೊಟ್ಟಿರುವ ಜೇಠ್ಮಲಾನಿ ಕಡತಗಳನ್ನು ತನಗೇ ನೇರವಾಗಿ ಸಲ್ಲಿಸಬೇಕೆಂದು ಸೂಚನೆ ನೀಡಿದ್ದಾರೆ.!

ಅತ್ಯಾಚಾರ ಆರೋಪ: ಆರ್‌ಜೆಡಿ ನಾಯಕಿಯ ಮಗನ ಬಂಧನ

ಬಿಹಾರದ ಐಎಎಸ್ ಅಧಿಕಾರಿಯೊಬ್ಬರ ಪತ್ನಿ ಚಂಪಾ ಬಿಶ್ವಾಸ್ ಸಹಿತ ಆ ಕುಟುಂಬದ ಆರು ಮಹಿಳೆಯರ ಮೇಲಿನ ಅತ್ಯಾಚಾರ, ಲೈಂಗಿಕ ಶೋಷಣೆ ಮತ್ತು ಬ್ಲಾಕ್ ಮೇಲ್ ಆರೋಪದ ಮೇಲೆ ರಾಷ್ಟ್ರೀಯ ಜನತಾದಳದ (ಆರ್‌ಜೆಡಿ) ಶಾಸಕಿಯೊಬ್ಬರ ಮಗ ಮೃತ್ಯುಂಜಯ ಯಾನೆ ಬಬ್ಲೂಯಾದವ್ ಎಂಬಾತನನ್ನು ಆಗಸ್ಟ್ 26 ರಂದು ಬಂಧಿಸಲಾಗಿದೆ. ಕಳೆದ ಎರಡು ವರ್ಷಗಳಿಂದ ಬಬ್ಲೂಯಾದವ್ ಅನ್ಯಾಯವೆಸಗುತ್ತಿದ್ದನು ಎಂದು ದೂರಲಾಗಿತ್ತು. ಬಬ್ಲೂನ ತಾಯಿ ಆರ್‌ಜೆಡಿ ನಾಯಕಿ ಹೇಮಲತಾ ಯಾದವ್ ಮಾಜಿ ಶಾಸಕಿಯಾಗಿದ್ದಾರೆ.

ಈ ಪ್ರಕರಣದ ಸಂಬಂಧ ಐದು ಜನರ ವಿರುದ್ಧ ಮೊಕದ್ದಮೆ ದಾಖಲಾಗಿದ್ದು ಉಳಿದ ಇಬ್ಬರಿಗಾಗಿ ಶೋಧ ಮುಂದುವರಿದಿದೆ.

ಉಡುಪಿ ವಿಮಾನೌಕರರ ಮಹಿಳಾ ಸಮಾವೇಶ

ಒಂದು ಸಮಾಜದ ನಿಜವಾದ ಸ್ಥಿತಿಗತಿ ಅಲ್ಲಿನ ಮಹಿಳೆಯರ ಸ್ಥಿತಿಗತಿಯ ಮೇಲಿಂದ ಅಳೆಯಲ್ಪಡ ಬೇಕೇ ಹೊರತು ಅಲ್ಲಿರುವ ದೇವಾಲಯಗಳು ಹೇಗಿವೆ ಇತ್ಯಾದಿಗಳ ಮೇಲಲ್ಲ, ಒಂದುಕಾಲದಲ್ಲಿ ಭಾರತೀಯ ಮಹಿಳೆ ತನ್ನ ಗಂಡನ ಜೊತೆಗೆ ಊಟಕ್ಕೆ ಕೂಡುವ ಅಧಿಕಾರವನ್ನು ಹೊಂದಿರಲಿಲ್ಲ. ಗಂಡ ಮಣೆಯ ಮೇಲೆ ಕುಳಿತರೆ ಹೆಂಡತಿ ನೆಲದ ಮೇಲೆ ಕುಳಿತು ಉಣಬೇಕಿತ್ತು. ಇತ್ತೀಚೆಗೆ ಮೇಜಿನ ಮೇಲೆ ಊಟ ಮಾಡುವ ಪದ್ಧತಿ ಬಂದ ಮೇಲೆ ಎಲ್ಲೋ ಸ್ವಲ್ಪ ಮಹಿಳೆಗೆ ಸಮಾನತೆ ದೊರೆತಂತಾಗಿದೆ ಎಂಬುದಾಗಿ ಖ್ಯಾತ ಲೇಖಕಿ ಹಾಗೂ ಶ್ರೀಪೂರ್ಣಪ್ರಜ್ಞ ಕಾಲೇಜಿನ ಪ್ರಾಧ್ಯಾಪಕಿ ಶ್ರೀಮತಿ ಮಾಧವಿ ಭಂಡಾರಿ ಹೇಳಿದರು. ಅವರು ಉಡುಪಿ ವಿಭಾಗದ ವಿಮಾನೌಕರರ ಸಂಘದ ಆಶ್ರಯದಲ್ಲಿ ಆಗಸ್ಟ್ 15 ರಂದು ಏರ್ಪಡಿಸ ಲಾಗಿದ್ದ ನಾಲ್ಕನೇ ಮಹಿಳಾ ನೌಕರರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಉಡುಪಿ ವಿಭಾಗದ ಆರು ಜಿಲ್ಲೆಗಳಿಂದ ಬಂದಿದ್ದ ಸುಮಾರು ಅರವತ್ತಕ್ಕೂ ಹೆಚ್ಚಿನ ಪ್ರತಿನಿಧಿಗಳು ಭಾಗವಹಿಸಿದ್ದ ಸಮಾವೇಶದ ಅಧ್ಯಕ್ಷತೆಯನ್ನು ಮೀರಾ ಎಸ್. ರಾವ್ ವಹಿಸಿದ್ದರು. ಜಾಗತೀಕರಣದ ಸನ್ನಿವೇಶದಲ್ಲಿ ಮಹಿಳೆಯರ ಮುಂದೆ ವಿಶೇಷವಾಗಿ ದುಡಿಯುವ ಮಹಿಳೆಯರ ಮುಂದಿರುವ ಸವಾಲುಗಳು, ಮಹಿಳಾ ಮೀಸಲಾತಿ ಮಸೂದೆ ಇತ್ಯಾದಿಗಳನ್ನು ಕುರಿತಂತೆ ಸುಮನಾ ಆರ್. ಉಪಾಧ್ಯಾಯ ಮತ್ತು ಮನೋರಮಾ ಬಾಯಿ ಮಂಡಿಸಿದ ಪ್ರಬಂಧದ ಮೇಲೆ ನಡೆದ ಚರ್ಚೆಯಲ್ಲಿ ಎಸ್. ಆರ್. ಕೀರ್ತಿಲತಾ, ಹೇಮಲತಾ, ಪದ್ಮಕುಮಾರಿ ಬಿ.ಎನ್. ನಾಗರತ್ನ, ಸಾದುಬಳ್ಳುರು, ಮೊದಲಾದವರು ಪಾಲುಗೊಂಡು ಸೂಕ್ತ ಸಲಹೆ ನೀಡಿದರು.

ಭಾರತೀಯ ಜೀವ ವಿಮಾ ನಿಗಮದ ಎಲ್ಲ ಕಚೇರಿಗಳಲ್ಲೂ ಶಿಶು ಕೇಂದ್ರ ಗಳನ್ನು ತೆರೆಯಬೇಕು, ಮಹಿಳೆಯರಿಗಾಗಿ ವಿಶ್ರಾಂತಿ ಕೊಠಡಿಗಳನ್ನು ನಿರ್ಮಿಸಬೇಕು, ಹೆರಿಗೆ ರಜೆಯನ್ನು ಆರು ತಿಂಗಳಿಗೆ ಏರಿಸಬೇಕು ಮತ್ತು ಮಹಿಳಾ ಮೀಸಲಾತಿ ಮಸೂದೆಯನ್ನು ಜಾರಿಗೊಳಿಸಬೇಕು. ಎಂಬ ನಿರ್ಣಯಗಳನ್ನು ಸರ್ವಾನು ಮತದಿಂದ ಅಂಗೀಕರಿಸಲಾಯಿತು.

ಮಹಿಳಾ ನೌಕರರ ಸಮಸ್ಯೆಗಳ ಕಡೆ ಗಮನ ನೀಡಲು ವಿಭಾಗ ಕಚೇರಿಯಲ್ಲಿ ಶ್ರೀಮತಿ ಮೀರಾ ಎಸ್. ರಾವ್, ಸುಮತಿ ಎಸ್.ರಾವ್, ನಳಿನಿ ಎಸ್.ಭಟ್, ಡಿ.ಎಂ.ಮಾಲತಿ, ವಿದ್ಯಾ ಎಸ್.ಕಾಮತ್ ಮತ್ತು ಸುಮನಾ ಆರ್.ಉಪಾಧ್ಯಾಯ (ಸಂಚಾಲಕಿ) ಅವರನ್ನೊಳಗೊಂಡ ಸಂಚಾಲಕ ಸಮಿತಿಯನ್ನು ನೇಮಿಸಲಾಯಿತು.

ದಕ್ಷಿಣ ವಲಯ ವಿಮಾ ನೌಕರರ ಒಕ್ಕೂಟದ ಅಧ್ಯಕ್ಷ ಕೆ.ವಿ.ಶ್ರೀನಿವಾಸನ್ ಅವರು ಮಹಿಳಾ ಕಾರ್ಮಿಕರ ಸಮಸ್ಯೆಗಳ ಕುರಿತು ವಿವರಿಸಿದರಲ್ಲದೆ ಸಮಾವೇಶಕ್ಕೆ ಶುಭಕೋರಿದರು. ಶ್ರೀಮತಿ ಹೇಮಲತಾ ಸ್ವಾಗತಿಸಿ ಶ್ರೀಮತಿ ಸುಮನಾ ಉಪಾಧ್ಯಾಯ ವಂದನಾರ್ಪಣೆ ಮಾಡಿದರು.

ವಿಮಾ ನೌಕರರ ವಾರ್ಷಿಕ ಮಹಾ ಸಮ್ಮೇಳನ

ಉಡುಪಿ: ದೇಶವು ಇದೀಗ ಫ್ಯಾಸಿಸಂನ ದೊಡ್ಡ ಅಪಾಯವನ್ನು ಎದುರಿಸುತ್ತಿದೆ. ಫ್ಯಾಸಿಸಂ ಮೊತ್ತಮೊದಲು ಆಕ್ರಮಣ ನಡೆಸುವುದು ಕಾರ್ಮಿಕ ವರ್ಗ ಮತ್ತು ಟ್ರೇಡ್‌ಯೂನಿಯನ್‌ಗಳ ಮೇಲೆ ಎಂಬುದು ನಾಝಿ ಜರ್ಮನಿಯ ಚರಿತ್ರೆಯಿಂದ ತಿಳಿಯುತ್ತದೆ. ಆದುದರಿಂದ ಕಾರ್ಮಿಕ ವರ್ಗದ ಅವಿಭಾಜ್ಯ ಅಂಗವಾಗಿರುವ ವಿಮಾ ನೌಕರರು ಎಚ್ಚೆತ್ತುಕೊಳ್ಳಬೇಕು. ನಮಗೆ ಬರೇ ಟ್ರೇಡ್ ಯೂನಿಯನ್ ಪ್ರಜ್ಞೆ ಇದ್ದರೆ ಸಾಲದು, ರಾಜಕೀಯ ಪ್ರಜ್ಞೆ ಮತ್ತು ಅದಕ್ಕಿಂತಲೂ ಮಿಗಿಲಾದ ವರ್ಗಪ್ರಜ್ಞೆಯನ್ನು ಬೆಳೆಸಿಕೊಳ್ಳುವುದರಿಂದ ಮಾತ್ರ ಫ್ಯಾಸಿಸಂ ವಿರುದ್ಧ ಸಮರ್ಥ ಹೋರಾಟ ನೀಡಲು ಸಾಧ್ಯ. ವಿಮಾ ನೌಕರರು ಅಂತಹ ಪ್ರಜ್ಞೆ ಯನ್ನು ಬೆಳೆಸಿಕೊಳ್ಳಬೇಕೆಂದು ಅಖಿಲ ಭಾರತ ವಿಮಾ ನೌಕರರ ಸಂಘದ (ಎಐಐಇಎ) ಜೊತೆ ಕಾರ್ಯದರ್ಶಿ ಆರ್.ಗೋವಿಂದರಾಜನ್ ಹೇಳಿದ್ದಾರೆ.

ಅವರು ಆಗಸ್ಟ್ 16 ರಂದು ಇಲ್ಲಿನ ಬ್ರಹ್ಮಗಿರಿಯ ಲಯನ್ಸ್ ಭವನದಲ್ಲಿ ನಡೆಯುತ್ತಿರುವ ವಿಮಾ ನೌಕರರ ಸಂಘ, ಉಡುಪಿ ವಿಭಾಗದ 40ನೇ ವಾರ್ಷಿಕ ಮಹಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಆರ್ಥಿಕ ಹಿಂಜರಿತದ ಇಂದಿನ ಸನ್ನಿವೇಶದಲ್ಲಿ ಬಹುತೇಕ ಉದ್ಯಮಗಳು ನಷ್ಟದತ್ತ ಸಾಗುತ್ತಿರುವಾಗ ಎಲ್‌ಐಸಿ ಮತ್ತು ಜಿಐಸಿ ಕ್ರಮವಾಗಿ ಶೇಕಡಾ 30 ಮತ್ತು ಶೇಕಡಾ 17 ರಷ್ಟು ಬೆಳವಣಿಗೆಯನ್ನು ಸಾಧಿಸಿರುವುದು ಗಮನಾರ್ಹ.

ಆದರೆ ಇಂದಿನ ಕೇಂದ್ರ ಸರಕಾರವು ಇದನ್ನು ಕಡೆಗಣಿಸಿ, ವಿಮಾ ರಂಗವನ್ನು ವಿದೇಶಿಯರಿಗೆ ಕೊಳ್ಳೆ ಹೊಡೆಯಲು ಅವಕಾಶ ಮಾಡಿಕೊಡುವ ದೇಶದ್ರೋಹಿ ಕ್ರಮದ ವಿರುದ್ಧ ವಿಮಾ ನೌಕರರು ಇತರ ಜನ ವಿಭಾಗಗಳೊಂದಿಗೆ ಸೇರಿ ವ್ಯಾಪಕ ಹೋರಾಟ ನಡೆಸಬೇಕು.

ಮಹಾಸಮ್ಮೇಳನದ ಅಧ್ಯಕ್ಷತೆಯನ್ನು ವಿಭಾಗೀಯ ಅಧ್ಯಕ್ಷರಾದ ಪಿ.ವಿಶ್ವನಾಥ ರೈ ವಹಿಸಿದ್ದರು. ದಕ್ಷಿಣ ಮಧ್ಯವಲಯ ವಿಮಾ ನೌಕರರ ಫೆಡರೇಷನ್‌ನ ಅಧ್ಯಕ್ಷ ಕೆ.ವಿ. ಶ್ರೀನಿವಾಸನ್, ಉಪಾಧ್ಯಕ್ಷ ಬಿ.ವಿ. ಸುಬ್ಬರಾಜು ಉಪಸ್ಥಿತರಿದ್ದರು.

ವಿಭಾಗೀಯ ಪ್ರಧಾನ ಕಾರ್ಯದರ್ಶಿ ಎ.ಎಸ್.ಆಚಾರ್ಯ ಅವರು ಕಳೆದ ಒಂದು ವರ್ಷದಲ್ಲಿ ಅಂತರ್ರಾಷ್ಟ್ರೀಯ, ರಾಷ್ಟ್ರೀಯ ಮತ್ತು ವಿಮಾ ಉದ್ದಿಮೆಗೆ ಸಂಬಂಧಿಸಿದ ವಿದ್ಯಮಾನಗಳ ಕುರಿತು ಕರಡು ವರದಿಯನ್ನು ಮಂಡಿಸಿದರು. ಪ್ರಾದೇಶಿಕ ಕಾರ್ಯದರ್ಶಿ ನಾಗೇಶ್ ಕುಮಾರ್ ಸ್ವಾಗತಿಸಿದರು.

ಮಂಗಳೂರು, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳ ವಿವಿಧ ಶಾಖಾ ಘಟಕಗಳಿಂದ ಸುಮಾರು 100 ಮಂದಿ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಗ್ರಾಮ ಪಂಚಾಯಿತಿ ನೌಕರರ ಸಮಾವೇಶ ಕರೆ ಬೇಡಿಕೆಗಳು ಈಡೇರದಿದ್ದರೆ ತೀವ್ರ ಹೋರಾಟ

ಗ್ರಾಮ ಪಂಚಾಯತ್ ನೌಕರರ ನ್ಯಾಯಯುತ ಬೇಡಿಕೆಗಳು ಶೀಘ್ರ ಈಡೇರದಿದ್ದರೆ ಮತ್ತೆ ತೀವ್ರ ಹೋರಾಟ ನಡೆಸಲಾಗುವುದೆಂದು ಇತ್ತಿಚೆಗೆ ನಡೆದ ಧಾರವಾಡ ಗದಗ ಮತ್ತು ಹಾವೇರಿ ಜಿಲ್ಲಾ ಪಂಚಾಯತ್ ನೌಕರರ ಸಮಾವೇಶ ಘೋಷಿಸಿದೆ.

ನೌಕರರ ಮುಖ್ಯ ಬೇಡಿಕೆಗಳಾದ ಸಮಾನ ಸೇವಾ ನಿಯಮಾವಳಿ ರೂಪಿಸಿ ಜಾರಿಗೊಳಿಸುವುದು, ತಾತ್ಕಾಲಿಕ ಪರಿಹಾರವಾಗಿ ನೌಕರರಿಗೆ ತಿಂಗಳಿಗೆ 900-1200 ರೂ ವೇತನ ನಿಗದಿ, ವೇತನ ಪಾವತಿಗೆ ಗ್ರಾಮ ಪಂಚಾಯತ್‌ಗಳಿಗೆ ಪ್ರತ್ಯೇಕ ಅನುದಾನ ಬಿಡುಗಡೆ ಜೊತೆಗೆ ಬಡ್ತಿಗೆ ಸಂಬಂಧಿಸಿದ ಬೇಡಿಕೆಗಳನ್ನು ಈಡೇರಿಸುವಂತೆ ಸಮಾವೇಶ ಸರ್ಕಾರವನ್ನು ಒತ್ತಾಯಿಸಿದೆ. ಸಮಾವೇಶದಲ್ಲಿ ಪ್ರಧಾನ ಕಾರ್ಯದರ್ಶಿ ಎ.ಪಿ. ಕುಲಕರ್ಣಿ ಭಾಗವಹಿಸಿ ಈ ವರೆಗೆ ಪಂಚಾಯತ್ ಸಚಿವರೊಂದಿಗಿನ ಮಾತುಕತೆಯ ವಿವರವನ್ನು ನೌಕರರಿಗೆ ತಿಳಿಸಲು ರಾಜ್ಯ ಸಂಚಾರ ನಡೆಸುವುದಾಗಿ ತಿಳಿಸಿದರು. ಸಮಾವೇಶದಲ್ಲಿ ವಿಮಾ ನೌಕರರ ಸಂಘದ ಆರ್ ಹೆಚ್ ಆಯಿ ಸಮುದಾಯ ಸಾಂಸ್ಕೃತಿಕ ಸಂಘಟನೆಯ ಕಾರ್ಯದರ್ಶಿ ಬಿ.ಎ. ಇಳಿಗೇರ, ವಿ.ಡಿ.ತುಪ್ಪದ ಗೌಡ ಪಾಟೀಲ ದೊಡ್ಡಾವ ಟಿ.ಬಿ. ಸೊಲಬಕ್ಕನವರು ಹಾಗೂ ಹಲವು ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

ಶಾಲಾ ಮಕ್ಕಳಿಗೆ ನೋಟ್ ಪುಸ್ತಕ ವಿತರಣೆ

ಮೈಸೂರು: ಜಿಲ್ಲಾ ಅಗರ್ ಬತ್ತಿ ಕಾರ್ಮಿಕರ ಸಂಘ ಮತ್ತು ವಿಮಾನೌಕರರ ಸಂಘ ಜಂಟಿಯಾಗಿ ಅಗರ್ ಬತ್ತಿ ಕಾರ್ಮಿಕರ ಮಕ್ಕಳಿಗೆ ಉಚಿತ ನೋಟ್ ವಿತರಿಸಿತು.

ಅಗರ್ ಬತ್ತಿ ಕಾರ್ಮಿಕರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕಾದರೆ. ತಮಗೆ ಬರಬೇಕಾದ ಸವಲತ್ತುಗಳನ್ನು ಸಂಘಟಿತರಾಗುವ ಮುಖಾಂತರ ಪಡೆಯುವಂತೆ ಕರೆ ನೀಡಿದ ಜಿಲ್ಲಾ ಅಗರ ಬತ್ತಿ ಕಾರ್ಮಿಕರ ಸಂಘದ ಕಾರ್ಯದರ್ಶಿ ಜಗದೀಶ ಸರ್ಕಾರ 1984 ರಿಂದಲೂ ಕನಿಷ್ಟ ಕೂಲಿ ನಿಗದಿ ಮಾಡದಿದೆ ಎಂದರು.

ವಿಮಾ ನೌಕರ ಸಂಘದ ಜಿಲ್ಲಾಧ್ಯಕ್ಷ ಎಲ್.ಜಗನ್ನಾಥ ಪುಸ್ತಕ ವಿತರಿಸಿದರು. ಕಾರ್ಮಿಕರನ್ನು ಉದೇಶಿಸಿ ಸಿಪಿಐ(ಎಂ) ಮುಖಂಡರಾದ ಎಂ.ಎಸ್. ಉಗ್ರಪ್ಪ ಎಸ್.ಎಸ್. ಪ್ರಭಾಕರ್, ಎಸ್.ಎಫ್.ಐ ಮುಖಂಡ ವಿ. ಶ್ರೀನಿವಾಸ್ ಮಾತನಾಡಿದರು. ಕೃಷ್ಣರಾವ್, ಶ್ರೀಧರ್, ಬಾಲಾಜ ಮೊದಲಾದವರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳ ಯಶಸ್ವಿಹೋರಾಟ

ಚಂದೂಪುರ(ಮಂಡ್ಯ): ಚಂದೂಪುರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರ ಕೊರತೆ ನೀಗಿಸಲು ಒತ್ತಾಯಿಸಿ ಎಸ್,ಎಫ್,ಐ ನೇತೃತ್ವದಲ್ಲಿ ಆಗಸ್ಟ್ 24 ರಂದು ನೂರಾರು ವಿದ್ಯಾರ್ಥಿಗಳು ಯಶಸ್ವಿ ಹೋರಾಟ ನಡೆಸಿದರು.

ಕಾಲೇಜಿನಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರು ಮತ್ತು ಪ್ರೌಢಶಾಲೆಯಲ್ಲಿ ನಾಲ್ಕು ವಿಷಯಗಳಿಗೆ ಶಿಕ್ಷಕರಿಲ್ಲದ್ದನ್ನು ಪ್ರತಿಭಟಿಸಿ ಚಂದುಪುರದಲ್ಲಿ ರಸ್ತೆತಡೆ ನಡೆಸಲಾಯ್ತು.

1ಗಂಟೆಗೂ ಹೆಚ್ಚು ಸಮಯ ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು. ಪರಿಣಾಮವಾಗಿ ಎರಡೇ ದಿನದಲ್ಲಿ ಇಬ್ಬರು ಶಿಕ್ಷಕರನ್ನು ಶಾಲೆಗೆ ವರ್ಗಾಯಿಸಲಾಯ್ತು. ಚಳುವಳಿಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳನ್ನು ಎಸ್.ಎಫ್.ಐ. ಅಭಿನಂದಿಸಿದೆ.

ಯೆಲ್ಸಿನ್‌ರಿಂದ ಪ್ರಧಾನಿ ನೇಮಕಾತಿ-ಪಾರ್ಲಿಮೆಂಟು ತಿರಸ್ಕಾರ

ಶರತ್ ಚಂದ್ರ

ರಶ್ಯಾದ ಆರ್ಥಿಕ ರಾಜಕೀಯ ಬಿಕ್ಕಟ್ಟು ತೀವ್ರವಾಗಿದೆ. ತನ್ನ ಇದ್ದ ಬದ್ದ ಅಧಿಕಾರ, ಮರ್ಯಾದೆ ಉಳಿಸಿಕೊಳ್ಳಲು ಅಧ್ಯಕ್ಷ ಯೆಲ್ಸನ್ ನಾಲ್ಕು ತಿಂಗಳ ಹಿಂದೆಯಷ್ಟೇ ನೇಮಿಸಿದ ಪ್ರಧಾನಿ ಕಿರಿಯೆಂಕೊ ಸರ್ಕಾರವನ್ನು ಬರ್ಖಾಸ್ತು ಮಾಡಿ, ಆಗ ಬರ್ಖಾಸ್ತು ಮಾಡಿದ್ದ ಚೆರ್ನೋಮೆರ್ದಿನ್ ರನ್ನು ಪುನಃ ನೇಮಕ ಮಾಡಿದ್ದಾರೆ. ಆದರೆ ಪಾರ್ಲಿಮೆಂಟು ಅವರ ನೇಮಕಾತಿಯನ್ನು ಭಾರೀ ಬಹುಮತದಿಂದ ತಿರಸ್ಕರಿಸಿದೆ. ಅವರ ನೇಮಕಾತಿಯನ್ನು ವಿರೋಧಿಸು ವವರು 253 ಇದ್ದರೆ, ಅವರನ್ನು ಬೆಂಬಲಿಸಿರುವವರು ಕೇವಲ 93. ರಶ್ಯನ್ ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿ ಎಡ-ದೇಶಪ್ರೇಮಿ ರಂಗ ಯೆಲ್ಸಿನ್‌ರ ಈ ನೇಮಕಾತಿಯನ್ನು ಪ್ರಶ್ನಿಸುವ, ಒಪ್ಪದಿರುವ ನಿರ್ಧಾರ ತೆಗೆದುಕೊಂಡಿವೆ.

ರಶ್ಯನ್ ಕಮ್ಯುನಿಸ್ಟ್ ಪಕ್ಷದ ನಾಯಕತ್ವ ಅಧ್ಯಕ್ಷ ಯೆಲ್ಸಿನ್ ರಾಜೀನಾಮೆ ನೀಡುವಂತೆ ಒತ್ತಾಯಿಸಿದೆ. ಅಲ್ಲದೆ ಪಾರ್ಲಿಮೆಂಟಿನಲ್ಲಿ ಬಹುಮತ ಇರುವ ಕೂಟದ ನಾಯಕನನ್ನು ಪ್ರಧಾನಿಯಾಗಿ ನೇಮಿಸುವಂತೆ ಒತ್ತಾಯಿಸಿದೆ. ಅಲ್ಲದೆ ರಶ್ಯಾವನ್ನು ಈ ದುಸ್ಥಿತಿಗೆ ತಂದ ವಿನಾಶಕಾರಿ ಖಾಸಗೀ ಕರಣ-ಐ.ಎಂ.ಎಫ್. ನೀತಿಯನ್ನು ಬದಲಾಯಿಸಿ ಜನಪರ ನೀತಿ ತರುವ ಸರಕಾರವನ್ನು ಮಾತ್ರ ಬೆಂಬಲಿಸುವುದಾಗಿ ಸ್ಪಷ್ಟಪಡಿಸಿದೆ. ನೇಮಕಾತಿ ರದ್ದು ಮಾಡಲ್ಪಟ್ಟ ಚೆರ್ನೋಮಿರ್ದಿನ್ ಅವರು ತಮ್ಮ ಮಂತ್ರಿ ಮಂಡಲ ಪ್ರಕಟಿಸಿದ್ದಾರೆ. ಹೆಚ್ಚು ಕಡಿಮೆ ಅವರು ಕಿರಿಯೆಂಕೊರ ಮಂತ್ರಿಮಂಡಲ ವನ್ನು ಉಳಿಸಿಕೊಂಡಿದ್ದು, ಹಾಗಾದರೆ ಈ ಪ್ರಧಾನಿ ಬದಲಾವಣೆಗೆ ಯಾಕೆ ಎಂದು ಎಲ್ಲರೂ ಪ್ರಶ್ನಿಸುವಂತೆ ಮಾಡಿದ್ದಾರೆ. ಪ್ರಧಾನಿ ಕಿರಿಯೆಂಕೊರ ನೇಮಕಾತಿಯನ್ನು ಎರಡೂ ಬಾರಿ ಪಾರ್ಲಿಮೆಂಟು ತಿರಸ್ಕರಿಸಿ, ಮೂರನೇ ಬಾರಿ ಅಂಗೀಕರಿಸಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳ ಬಹುದು. ಆಗ ಕಮ್ಯುನಿಸ್ಟ್ ಪಕ್ಷ ಕಿರಿಯೆಂಕೊ ಯಾವುದೇ ಆಡಳಿತ ಅನುಭವ ಇಲ್ಲದ ವ್ಯಕ್ತಿ ಎಂದು ಆತನ ನೇಮಕಾತಿಯನ್ನು ವಿರೋಧಿಸಿದ್ದು, ನಾಲ್ಕು ತಿಂಗಳೊಳಗೆ ಯೆಲ್ಸಿನ್ ಮಾತ್ರವಲ್ಲ, ಇಡೀ ದೇಶವೇ ಅದನ್ನು ಒಪ್ಪುವಂತಾಗಿದೆ.

ಈ ಬಾರಿ ಯೆಲ್ಸಿನ್ ತಮ್ಮ ಹಳೇ ಒತ್ತಡದ ತಂತ್ರ ಬಳಸಲಾರಂಭಿಸಿದ್ದಾರೆ. ಅದರ ಭಾಗವಾಗಿ ಪಾರ್ಲಿಮೆಂಟು ಚೆರ್ನೋಮಿರ್ದಿನ್ ನೇಮಕಾತಿ ರದ್ದು ಮಾಡಿದ ನಂತರ, ಅವರನ್ನು ಪುನಃ ನೇಮಕಾತಿ ಮಾಡಿ ಪಾರ್ಲಿಮೆಂಟಿಗೆ ವಾಪಸು ಕಳಿಸಿದ್ದಾರೆ. ಕಮ್ಯುನಿಸ್ಟ್ ನಾಯಕತ್ವದ ಎಡ-ಪ್ರಜಾಪ್ರಭುತ್ವ ರಂಗ ಇದನ್ನು ಪುನಃ ರದ್ದು ಮಾಡುವುದಾಗಿ ಹೇಳಿದೆ. ಈ ರೀತಿ ಮೂರು ಬಾರಿ ಆದರೆ, ರಶ್ಯನ್ ಸರ್ವಾಧಿಕಾರಿ ಸಂವಿಧಾನದ ಪ್ರಕಾರ ಅಧ್ಯಕ್ಷರು ಪಾರ್ಲಿಮೆಂಟನ್ನು ವಿಸರ್ಜಿಸಬಹುದು. ಆದರೆ ಈ ಬಾರಿ ಝುಗನೋವ್ ಯೆಲ್ಸಿನ್ ಪಾರ್ಲಿಮೆಂಟು ವಿಸರ್ಜಿಸಿದರೆ ವಿಸರ್ಜಿಸಲಿ, ಮರು ಚುನಾವಣೆ ನಡೆಯಲಿ ಎಂದು ಹೇಳಿದ್ದಾರೆ. 'ಪಾರ್ಲಿಮೆಂಟಿನ ವಿಸರ್ಜನೆ ನಮ್ಮ ಮುಂದಿರುವ ದೊಡ್ಡ ಸಮಸ್ಯೆ ಅಲ್ಲ. ಇಡೀ ದೇಶವನ್ನೇ ವಿಸರ್ಜಿಸಲಾಗುತ್ತಿದೆ ಎಂಬುದು ನಮ್ಮ ಸಮಸ್ಯೆ' ಎಂದು ಮಾರ್ಮಿಕವಾಗಿ ಹೇಳಿದ್ದಾರೆ. ಕಳೆದ ನಾಲ್ಕು ತಿಂಗಳಲ್ಲಿ ಪರಿಸ್ಥಿತಿ ಪೂರ್ಣ ಬದಲಾಗಿದೆ. ಅದರಲ್ಲೂ ರೂಬಲ್ ಅಪಮೌಲ್ಯದ ನಂತರ. ಆದ್ದರಿಂದ ಯೆಲ್ಸಿನ್ ರಾಜಿನಾಮೆ ನೀಡುವ, ಅಥವಾ ಪದಚ್ಯುತಿಗೊಳ್ಳುವ ಪ್ರಬಲ ಸಾಧ್ಯತೆ ಇದೆ.

ಈ ಮಧ್ಯೆ ಅಮೇರಿಕಾದ ಅಧ್ಯಕ್ಷ ಕ್ಲಿಂಟನ್ ಮಾಸ್ಕೋ ಭೇಟಿ ಹಿಂದೆ ಯೋಜಿಸಿದಂತೆ ನಡೆಯುತ್ತಿದೆ. ಅಧ್ಯಕ್ಷ ಕ್ಲಿಂಟನ್ ಸೇರಿದಂತೆ ಎಲ್ಲಾ ಸಾಮ್ರಾಜ್ಯಶಾಹಿ ದೇಶಗಳ ನಾಯಕರು ರಶ್ಯಾದ ಆರ್ಥಿಕ ಹಾಗೂ ರಾಜಕೀಯ ಬಿಕ್ಕಟ್ಟಿನಿಂದ ಭಯಭೀತರಾಗಿದ್ದಾರೆ.

ದಕ್ಷಿಣ ಆಫ್ರಿಕಾದಲ್ಲಿ ಅಲಿಪ್ತ ಶೃಂಗ ಸಭೆ ಭಾರತದ ಅಣ್ವಸ್ತ್ರ ಸ್ಫೋಟ ಚರ್ಚೆಯ ವಿಷಯ

ಭಾರತದ ಅಣ್ವಸ್ತ್ರ ಸ್ಫೋಟ ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಅಲಿಪ್ತ ದೇಶಗಳ ಶೃಂಗ ಸಭೆಯಲ್ಲಿ ತೀವ್ರ ಚರ್ಚೆಯ ವಿಷಯವಾಗಲಿದೆ. ಶೃಂಗ ಸಭೆಯ ಮೊದಲಿನ ವಿದೇಶ ಮಂತ್ರಿಗಳ ಸಭೆಯಲ್ಲಿ ಈಗಾಗಲೇ ಅದು ವಿವಾದಸ್ಪದ ವಿಷಯ ವಾಗಿದೆ. ಭಾರತ ಅಲಿಪ್ತ ದೇಶ. ದಕ್ಷಿಣ ಆಫ್ರಿಕವೇ ಭಾರತದ ಅಣ್ವಸ್ತ್ರ ಸ್ಫೋಟಕ್ಕೆ ವಿರೋಧ ವ್ಯಕ್ತಪಡಿಸಿದ್ದು, ಅಂತಹ ನಿರ್ಣಯವೊಂದನ್ನು ಸಭೆಯ ಮುಂದೆ ಮಂಡಿಸಲಿದೆ. ಇದಕ್ಕೆ ಪರ-ವಿರೋಧ ಎರಡೂ ಅಲಿಪ್ತ ಶೃಂಗಸಭೆಯಲ್ಲಿ ಪ್ರಬಲ ವಾಗಿದ್ದು, ಅಲಿಪ್ತ ದೇಶಗಳ ನಾಯಕನಾಗಿದ್ದ ಭಾರತ ವಾಜಪೇಯಿ ಸರ್ಕಾರದ ಹುಂಬುತನದಿಂದ ಖಂಡನೆಗೊಳಗಾಗಿ ಅವಮಾನಕ್ಕೊಳಗಾಗುವ ಸಾಧ್ಯತೆ ಇದೆ. ಐದು ಅಣ್ವಸ್ತ್ರದೇಶಗಳು ಅಣ್ವಸ್ತ್ರಗಳ ನಾಶಕ್ಕೆ ಅರ್ಥಪೂರ್ಣ ಕ್ರಮ, ವೇಳಾಪಟ್ಟಿಗೆ ಕರೆ ಕೊಡುವ ನಿರ್ಣಯ ಭಾರತ ಪ್ರತಿಪಾದಿಸುತ್ತಿದ್ದರೂ, ಎರಡೂ ನಿರ್ಣಯಗಳು ಚರ್ಚೆಗೆ ಬಂದು ಮಂಜೂರಾಗುವ ಸಾಧ್ಯತೆಗಳಿವೆ.


ಆಫ್‌ಘಾನಿಸ್ತಾನ, ಸೂಡಾನ್‌ಗಳಲ್ಲಿ ಅಮೇರಿಕನ್ ವಿಮಾನ ದಾಳಿಯನ್ನು ತೀವ್ರವಾಗಿ ಖಂಡಿಸುವ ನಿರ್ಣಯ ಅಲಿಪ್ತ ಸಭೆ ಅಂಗೀಕರಿಸುವ ಸಾಧ್ಯತೆ ಇದೆ. ಭಾರತ ಈ ಬಗ್ಗೆ ಹೆಚ್ಚು ಒಲವು ತೋರಿಸಿಲ್ಲ. ಒಟ್ಟಾರೆಯಾಗಿ ಭಾರತ ತನ್ನ ಸಾಮ್ರಾಜ್ಯಶಾಹಿ ವಿರೋಧಿ ನೀತಿಯಿಂದ ದೂರ ಸರಿಯುತ್ತಿರುವುದರಿಂದ ಅಲಿಪ್ತ ಸಭೆಯಲ್ಲಿ ತನ್ನ ಹಿಂದಿನ ನಾಯಕತ್ವದ ಪಾತ್ರ ಕಳೆದುಕೊಳ್ಳುತ್ತಿದೆ. ಕಾಂಗೋದಲ್ಲಿ ರಾಜಕೀಯ ಬಿಕ್ಕಟ್ಟು, ಆರ್ಥಿಕ ಸಹಕಾರ ಹಾಗೂ ಇತರ ವಿಷಯಗಳ ಬಗ್ಗೆ ಅಲಿಪ್ತ ಸಭೆ ಚರ್ಚಿಸಲಿದೆ.

ನೇಪಾಳದ ಕಾಂಗ್ರೆಸ್ ಸರ್ಕಾರಕ್ಕೆ ಎಂ.ಎಲ್. ಕಮ್ಯುನಿಸ್ಟ್ ವಿಭಾಗ ಸೇರ್ಪಡೆ

ನೇಪಾಳದಲ್ಲಿ ಹಲವು ತಿಂಗಳುಗಳಿಂದ ಈಗ ಆಳುತ್ತಿರುವ ನೇಪಾಳೀ ಕಾಂಗ್ರೆಸ್ ಅಲ್ಪಮತದ ಸರ್ಕಾರಕ್ಕೆ ನೇಪಾಳ ಕಮ್ಯುನಿಸ್ಟ್ ಪಕ್ಷ(ಎಂ.ಎಲ್.) ಸೇರಿ ಜಂಟಿ ಸರ್ಕಾರ ನಡೆಸಲಿದೆ. ಈ ಸರ್ಕಾರದಲ್ಲಿ ಕಮ್ಯುನಿಸ್ಟ್ ಪಕ್ಷ (ಎಂ.ಎಲ್.) ಭಾಗವಹಿಸಲಿದ್ದು, ಅವರ 13 ಜನ ಸದಸ್ಯರು ಮಂತ್ರಿಗಳಾಗಲಿದ್ದಾರೆ. ಅವರಿಗೆ ಮಂತ್ರಿ ಮಂಡಲದಲ್ಲಿ ಜಾಗ ಮಾಡಿಕೊಡಲು ನೇಪಾಳೀ ಕಾಂಗ್ರೆಸ್‌ನ ಹಲವು ಮಂತ್ರಿಗಳು ರಾಜೀನಾಮೆ ಕೊಡಬೇಕಾಗಿ ಬಂದಿದೆ.

ಕಳೆದ ಚುನಾವಣೆಯಲ್ಲಿ ಆಗಿನ ಅವಿಭಜಿತ ನೇಪಾಳೀ ಕಮ್ಯುನಿಸ್ಟ್ ಪಕ್ಷ(ಯು.ಎಂ.ಎಲ್.) ಅತಿ ದೊಡ್ಡ ಪಕ್ಷವಾಗಿ ಹೊಮ್ಮಿದ್ದರೂ ನಿಚ್ಚಳ ಬಹುಮತ ಪಡೆದಿರಲಿಲ್ಲ. ಕೆಲವು ತಿಂಗಳಗಳ ಕಾಲದ ಕಮ್ಯುನಿಸ್ಟ್ ಸರ್ಕಾರದ ನಂತರ, ಆ ಸರ್ಕಾರವನ್ನು ಉರುಳಿಸಲಾಯಿತು. ಅಗಿನಿಂದ ನೇಪಾಳದ ಎಲ್ಲಾ ಪಕ್ಷಗಳು ಬೇರೆ ಬೇರೆ ವಿಭಾಗಗಳ ಸಮ್ಮಿಶ್ರ ಸರಕಾರ ಬರುತ್ತಾ, ಹೋಗುತ್ತಾ ಇದ್ದು ಅಸ್ಥಿರತೆ ತಾಂಡವವಾಡುತ್ತಿದೆ. ನೇಪಾಳದ ಮೂರು ಪ್ರಮುಖ ಪಕ್ಷಗಳು - ಕಮ್ಯುನಿಸ್ಟ್, ಕಾಂಗ್ರೆಸ್, ರಾಜ-ಪರ ಆರ್.ಪಿ.ಪಿ. ಹಾಗೂ ಅದರ ವಿಭಾಗಗಳು ಬೇರೆ ಬೇರೆ ಹೊಂದಾಣಿಕೆಯಲ್ಲಿ ಅಧಿಕಾರಕ್ಕೆ ಬಂದಿವೆ.

ಕೆಲವು ತಿಂಗಳ ಹಿಂದೆ ಅತಿದೊಡ್ಡ ಪಕ್ಷವಾದ ಕಮ್ಯುನಿಸ್ಟ್ ಪಕ್ಷ (ಯು.ಎಂ.ಎಲ್.) ದುರದೃಷ್ಟವಶಾತ್ ಇಬ್ಭಾಗವಾದ್ದರಿಂದ, ನೇಪಾಳೀ ಕಾಂಗ್ರೆಸ್ ಅದರ ಲಾಭ ಪಡೆದು ಸರ್ಕಾರ ಸ್ಥಾಪಿಸಿದೆ. ಈಗ ಒಂದು ವಿಭಾಗವನ್ನು ಸಮ್ಮಿಶ್ರ ಸರ್ಕಾರದಲ್ಲಿ ಸೆಳೆಯುವುದಕ್ಕೂ ಸಾಧ್ಯವಾಗಿದೆ. ಆದರೂ ಈ ಕೂಟ ಮುಂದಿನ ಚುನಾವಣೆಯ ನಂತರ ಉಳಿಯಲಾರದು. ಮಂದಿನ ಚುನಾವಣೆ ವರೆಗೆ ಅಧಿಕಾರಕ್ಕೆ ಅಂಟಿಕೊಂಡದಕ್ಕೆ ನೇಪಾಳೀ ಕಾಂಗ್ರೆಸ್‌ನ ತಂತ್ರದ ಫಲ. ಇದು ನೇಪಾಳದಲ್ಲಿ ತೀರಾ ನಕಾರಾತ್ಮಕ ಬೆಳವಣಿಗೆ.



ದಕ್ಷಿಣ ಕೊರಿಯಾದ ಪ್ರಖ್ಯಾತ ಮೋಟಾರು ತಯಾರಿಕ ಕಂಪನಿ ಹ್ಯುಂಡ್ಯಾನ ಕಾರ್ಮಿಕನೊಬ್ಬನ ಪತ್ನಿ ಮತ್ತು ಮಕ್ಕಳು - ಕಾರ್ಖಾನೆಯಲ್ಲಿ ಆಗುತ್ತಿರುವ ರಿಟ್ರೆಂಚ್‌ಮೆಂಟ್‌ಗಳು ಈ ಇಂತಹ ಹಲವು ಕುಟುಂಬಗಳು ತಲ್ಲಣಗೊಂಡು ಬೀದಿಗಿಳಿಯಬೇಕಾಗಿ ಬಂದಿದೆ.

ಕ್ಲಿಂಟನ್ ಸಾಹೇಬ........................

...ಟ 5 ರಿಂದ

...ನುಭವಿಸುತ್ತಿದೆ.

ಅಫಘಾನಿಸ್ತಾನದ ಕತೆಯಂತೂ ಇನ್ನೂ ...ಷ್ಟು ಮಾಸದ ದುರುಂತಮಯ ಇತಿಹಾಸ. ...ರಡೂವರೆ ದಶಕಗಳ ಹಿಂದೆ ಅಲ್ಲಿ ...ಮ್ರಾಜ್ಯಶಾಹಿ ಬೆಂಬಲಿತ ಊಳಿಗಮಾನ್ಯ ...ಭುತ್ವದ ವಿರುದ್ಧ ಸವೂರ್ ಕ್ರಾಂತಿ ...ಡೆಯಿತು. ಈ ಕ್ರಾಂತಿಯಲ್ಲಿ ಹಲವು ...ರ್ಬಲ್ಯಗಳಿದ್ದವು, ನಿಜ. ಆದರೂ ಅದು ...ಮಾಜಿಕ ಉದ್ಧಾರದ ಪ್ರಕ್ರಿಯೆಯೊಂದನ್ನು ...ರಂಭಿಸಿತು. ಸಾರ್ವತ್ರಿಕ ಶಿಕ್ಷಣ, ಮಹಿಳಾ ...ಮಾನತೆ ಇವುಗಳಲ್ಲಿ ಮುಖ್ಯವಾದವುಗಳು. ...ಹಜವಾಗಿಯೇ ಇದಕ್ಕೆ ಇಸ್ಲಾಮೀ ...ೂಲಭೂತವಾದಿ ಶಕ್ತಿಗಳಿಂದ ವಿರೋಧ ...ತು. ಅಮೆರಿಕನ್ ಸಾಮ್ರಾಜ್ಯಶಾಹಿ ತನ್ನ ...ಕುಚಿತ ಸ್ವಾರ್ಥ ಸಾಧನೆಗಾಗಿ ಈ ...ೂಲಭೂತವಾದಿ ಶಕ್ತಿಗಳಿಗೆ ಸಕಲ ಶಸ್ತ್ರಾಸ್ತ್ರ ...ಬಲ ನೀಡಿತು. ಈಗ ಯಾವ ಬಿನ್ ...ಡೆನ್ ವಿರುದ್ಧ ಕ್ಲಿಂಟನ್ ಸಾಹೇಬ ಕೆಂಡ ...ರುತ್ತಿದ್ದಾನೋ ಅದೇ ಲಾಡೆನ್ ಆಗ ...ಮ್ಯುನಿಸ್ಟರ ವಿರುದ್ಧ 'ಜೆಹಾದ್' ಅಥವಾ ...ರ್ಮಯುದ್ಧ' ದಲ್ಲಿ ಅಮೆರಿಕನ್ ಆಳರಸರ ...ತ್ರನಾಗಿದ್ದ.

...ಪ್ರಗತಿಪರ ಶಕ್ತಿಗಳ ಪ್ರತಿನಿಧಿ ನಜಿಬುಲ್ಲಾ ...ಕಾರದ ಪತನದ ನಂತರ ಈ ಅಮೆರಿಕನ್ ...ಬೆಂಬಲಿತ ಮೂಲಭೂತ ವಾದಿ ಶಕ್ತಿಗಳಲ್ಲೇ ...ಕಚ್ಚಾಟಾಗಿ ಪರಸ್ಪರ ...ಬಡಿದಾಡಲಾರಂಭಿಸಿದರು. ಆಗ ...ಮೆರಿಕನ್ ಸಾಮ್ರಾಜ್ಯಶಾಹಿಗಳು ಬೆಂಬಲಿಸಿದ್ದು ಈಗ ಅದೇ ಒಸಮಾ ಬಿನ್ ಲಾಡೆನ್‌ಗೆ. ಆಶ್ರಯ ನೀಡಿರುವುದು ಎಂದು ಅಪಾದಿಸುವ ತಾಲಿಬಾನ್ ಮೂಲಭೂತ ವಾದಿ ಗುಂಪನ್ನು! ಇದು ಅಫಘಾನಿಸ್ತಾನದಲ್ಲೇ ಅತ್ಯಂತ ಮೂಲಭೂತವಾದಿ ಗುಂಪು. ಮಧ್ಯ ಏಶ್ಯಾದ ತೈಲ ಸಂಪನ್ಮೂಲಗಳ ಮೇಲೆ ಅಧಿಪತ್ಯ ಪಡೆಯುವ ಹುನ್ನಾರದಿಂದ ಅಮೆರಿಕನ್ ಆಳರಸರು ತಾಲಿಬಾನ್ ಪಡೆಗಳಿಗೆ ಅಧಿಕಾರ ಕಿತ್ತುಕೊಳ್ಳಲು ನೆರವು ನೀಡಿದರು. ಈಗ ಅದೇ ಅವರಿಗೆ ತಿರುಗುಬಾಣವಾಗಿದೆ.

ಮೂರನೇ ಜಗತ್ತಿನ ದೇಶಗಳಲ್ಲಿ ಮೂಲಭೂತವಾದದ ವಿರುದ್ಧ ದೃಢ ಹೋರಾಟ ನಡೆಸುವ ಶಕ್ತಿಯಿರುವುದು ಕಮ್ಯುನಿಸ್ಟರು ಮತ್ತು ಇತರ ಪ್ರಗತಿಪರ ಶಕ್ತಿಗಳಿಗೆ ಮಾತ್ರ. ಆದರೆ ತನ್ನ ಸಂಕುಚಿತ ಸ್ವಾರ್ಥ ಸಾಧನೆಗೆ ಈ ಶಕ್ತಿಗಳನ್ನು ಸದೆಬಡಿದು ಮೂಲಭೂತವಾದಿ ಶಕ್ತಿಗಳಿಗೆ ಮೇಲಿನ ಉದಾಹರಣೆಗಳಲ್ಲಿ ಕಂಡಂತೆ ನೇರವಾಗಿಯೋ, ಪರೋಕ್ಷವಾಗಿಯೋ ಬೆಂಬಲ ನೀಡಿ ತಾನೇ ಭಯಾನಕ ಪಿಶಾಚಿಗಳನ್ನು ಸೃಷ್ಟಿಸಿ, ಈಗ ಅವು ತನ್ನನ್ನೇ ಹಿಡಕೊಂಡಾಗ ಲಬೋ ಲಬೋ ಎಂದು ಬಡಕೊಳ್ಳುತ್ತಿದ್ದರೆ ಏನನ್ನಬೇಕು? 'ಮಾಡಿದ್ದುಣ್ಣೋ ಮಹರಾಯ' ಎಂದರೆ ತಪ್ಪೇ?

ಬಾಲಂಗೋಚಿ: ಅಫಘಾನಿಸ್ತಾನ, ಸೂಡಾನ್‌ಗಳ ಮೇಲೆ ಅಮೆರಿಕನ್ ಯುದ್ಧ ಹಡಗಿನಿಂದ ಕ್ಷಿಪಣಿಗಳನ್ನು ಎಸೆಯುತ್ತಿದ್ದಾಗ ಪಾಕಿಸ್ತಾನದಲ್ಲಿ ಒಬ್ಬ ಅಮೆರಿಕನ್ ಸೇನಾಪತಿ ಇದ್ದನಂತೆ. ಏಕೆ? ಒಂದು ಕ್ಷಿಪಣಿಯೇನಾದರೂ ದಾರಿತಪ್ಪಿ ಪಾಕಿಸ್ತಾನದಲ್ಲಿ ಬಿದ್ದರೆ ಅದು ಭಾರತ ಎಸೆದ ಕ್ಷಿಪಣಿಯೆಂದುಕೊಂಡು ಪಾಕಿಸ್ತಾನ ಪ್ರತಿಕಾರಕ್ಕೆ ಇಳಿಯಬಹುದು, ಹಾಗಾಗದಿರಲಿ ಎಂದು ತಿಳಿಹೇಳಲು ಆತ ಅಲ್ಲಿದ್ದನಂತೆ. ನಿಜವಾಗಿಯೂ ಆತ ಹಾಗೆ 'ತಿಳಿಹೇಳು'ತ್ತಿದ್ದನೇ, ಹೇಳಿದ್ದರೂ ಪಾಕಿಸ್ತಾನೀ ಆಳರಸರು ಕೇಳಲು ಸಿದ್ಧರಿರುತ್ತಿದ್ದರೇ ಎಂಬ ಪ್ರಶ್ನೆಗಳಿಗೆ ಬಹುಶಃ ನಮಗೆಂದೂ ಉತ್ತರ ಸಿಗದು.

ಆದರೆ ಇಲ್ಲಿ ಬಹಳ ಆತಂಕದಿಂದ ಗಮನಿಸಬೇಕಾದ ಸಂಗತಿಯೊಂದಿದೆ ಎನ್ನುತ್ತಾರೆ ಆರ್ಥಿಕ ತಜ್ಞ ಕಾರ್ತಿಕ್ ರಾಯ್. ಅಮೆರಿಕಾ ಎಂತಹ ಅಪಾಯಕಾರಿ ಕಿಡಿಗೇಡಿತನದ ಸಾಮರ್ಥ್ಯ ಹೊಂದಿದೆ ನೋಡಿ - ಅದು ಒಂದು ದೇಶದ ಮೇಲೆ ಕ್ಷಿಪಣಿ ಧಾಳಿ ಮಾಡುತ್ತದೆ. ಆ ದೇಶ ತನ್ನ ನೆರೆ ದೇಶದಿಂದ ಈ ಕ್ಷಿಪಣಿ ಧಾಳಿ ನಡೆದಿದೆ ಎಂದು ಪ್ರತಿಧಾಳಿಗೆ ಇಳಿಯುತ್ತದೆ. ಅವೆರಡೂ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಿದ್ದರೆ ವಿಶ್ವವನ್ನೇ ನಾಶ ಮಾಡಬಲ್ಲ ಪರಮಾಣು ಯುದ್ಧ ಅಕಾರಣವಾಗಿ ನಡೆದೇ ಬಿಡುತ್ತದೆ. ಕೇವಲ ಅಮೆರಿಕಾದ ಕಿಡಿಗೇಡಿತನದಿಂದ!

ಬೀಡಿ ಕಾರ್ಮಿಕರಿಗೆ ರಾಷ್ಟ್ರೀಯ ಮಟ್ಟದ ಕನಿಷ್ಠ ಕೂಲಿ ಜಾರಿಯಾಗಬೇಕು

ಬಂಟ್ವಾಳ: ಬೀಡಿ ಕಾರ್ಮಿಕರಿಗೆ ರಾಷ್ಟ್ರೀಯ ಮಟ್ಟದ ಕನಿಷ್ಟ ಕೂಲಿ ನಿಗದಿಗೊಳಿಸಿ ಬೀಡಿ ಸಿಗಾರ್ ಕೆಲಸಗಾರರ ಹಿತ ರಕ್ಷಿಸುವ ಕಾಯಿದೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ಜಾರಿಗೊಳಿಸಬೇಕು. ಸಣ್ಣ ಸಿಗರೇಟಿನ ಮೇಲೂ ತೆರಿಗೆ ವಿಧಿಸಬೇಕೆಂದು 20 ಲಕ್ಷ ಬೀಡಿಯ ವರೆಗಿನ ತೆರಿಗೆ ವಿನಾಯಿತಿಯನ್ನು ರದ್ದುಗೊಳಿಸಬೇಕು, ಕಡಿಮೆ ಕೂಲಿ ಹಾಗೂ ಸೌಲಭ್ಯಗಳಿಲ್ಲದ ರಾಜ್ಯಗಳಿಗೆ ಬೀಡಿ ಕೈಗಾರಿಕೆ ಪಲಾಯನ ಆಗದಂತೆ ತಡೆಯಬೇಕೆಂದು ಬಂಟ್ವಾಳ ತಾಲೂಕು ಬೀಡಿ ಕೆಲಸಗಾರರ ಸಂಘ (ಸಿ.ಐ.ಟಿ.ಯು) ದ 18 ನೇ ಮಹಾಸಭೆ ಕೇಂದ್ರ ಸರಕಾರವನ್ನು ಒತ್ತಾಯಿಸಿದೆ.

ಸಭೆಯನ್ನುದ್ದೇಶಿಸಿ ಮಾತನಾಡಿದ ಸಿ.ಐ.ಟಿ.ಯುವಿನ ದ.ಕ.ಜಿಲ್ಲಾ ಸಮಿತಿಯ ಕಾರ್ಯದರ್ಶಿ ಬಿ. ಮಾಧವರವರು ಬಿ.ಜೆ.ಪಿ. ನೇತ್ರತ್ವದ ಕೇಂದ್ರ ಸರಕಾರಕ್ಕೆ ಜನರ ಸಮಸ್ಯೆ ಸಂಕಷ್ಟಗಳ ಪರಿಹಾರದ ಕಾರ್ಯಕ್ರಮಗಳೇ ಇಲ್ಲ, ಆ ಸರಕಾರ ಅನುಸರಿಸುತ್ತಿರುವ ವಿನಾಶಕಾರಿ ಆರ್ಥಿಕ ನೀತಿ ದೇಶಕ್ಕೆ ಮಾರಕವಾಗಿದೆ, ಜನ ಎದುರಿಸುತ್ತಿರುವ ನಿತ್ಯ ಸಮಸ್ಯೆಗಳನ್ನು ಮರೆಮಾಚಲು ಅಣುಬಾಂಬು ಪ್ರಯೋಗ ನಡೆಸಿ ಜನ ಎದುರಿಸುತ್ತಿರುವ ನಿತ್ಯ ಸಮಸ್ಯೆಗಳನ್ನು ಮರೆ ಮಾಚಲು ಅಣು ದೇಶಕ್ಕೆ ಮಾರಕವಾಗಿದೆ, ಇನ್ನಷ್ಟು ಸಂಕಷ್ಟ ತಂದೊಡ್ಡಿದೆ ಎಂದು ದೂರಿದರು. ಸಭೆಯ ಅಧ್ಯಕ್ಷತೆಯನ್ನು ಬಿ. ವಾಸಗಟ್ಟೆ ವಹಿಸಿದ್ದರು.

ಬೀಡಿ ಕೆಲಸಗಾರರ ಜಿಲ್ಲಾ ಫೆಡರೇಶನ್‌ನ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಬೆಂಗಳೂರಿನ ರಮೇಶ್ ಜನವಾದಿ ಮಹಿಳಾ ಸಂಘಟನೆಯ ಸುಕನ್ಯ ಮಾತನಾಡಿದರು.

ಕಾಲೇಜು ಅಧ್ಯಾಪಕರು ನಡೆಸುತ್ತಿರುವ ಮುಷ್ಕರಕ್ಕೆ ಸಭೆಯು ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿ ಕೇಂದ್ರ ಸರಕಾರವು ಅಧ್ಯಾಪಕರ ಸಂಘದೊಂದಿಗೆ ಮಾತುಕತೆ ನಡೆಸಿ ಸಮಸ್ಯೆ ಪರಿಹರಿಸ ಬೇಕೆಂದೂ ಒತ್ತಾಯಿಸಿತು.

ಪದಾಧಿಕಾರಿಗಳು 25 ಜನ ಸದಸ್ಯರಿರುವ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಿ ಸಂಘದ ಅಧ್ಯಕ್ಷರಾಗಿ ಬಿ. ವಾಸುಗಟ್ಟೆ ಉಪಾಧ್ಯಕ್ಷರಾಗಿ ವಿಮಲ ಎ. ರಾಮಣ್ಣರನ್ನು ಕಾರ್ಯದರ್ಶಿಯಾಗಿ ಬಿ. ಸಂಜೀವ ಬಂಗೇರರನ್ನು ಸಹಕಾರ್ಯದರ್ಶಿಗಳಾಗಿ ಬಿ. ಉದಯ ಕುಮಾರ್ ಮತ್ತು ಗಂಗಮ್ಮರನ್ನು, ಕೋಶಾಧಿಕಾರಿಯಾಗಿ ಬಿ. ಹೂವಯ್ಯ ಬಂಗೇರರನ್ನು ಆಯ್ಕೆ ಮಾಡಲಾಯಿತು.

ಭ್ರಷ್ಟಾಚಾರ ಕ್ರಮಗಳನ್ನು ಮುಚ್ಚಿಹಾಕಲು ಸರಕಾರಿ ವಕೀಲರ ವಜಾ-ಸಿಪಿಐ(ಎಂ) ಖಂಡನೆ

ಜಾರಿ ನಿರ್ದೇಶನಾಲಯದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಎಂ.ಕೆ. ಕುಮಾರ್‌ರವರನ್ನು ಸೇವೆಯಿಂದ ವಜಾ ಮಾಡಿರುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ. ಕುಮಾರ್‌ರವರು ಜಯಲಲಿತಾರವರ ಗೆಳತಿ ಶಶಿಕಲಾ ನಟರಾಜನ್‌ರ ವಿದೇಶಿ ವಿನಿಮಯ ಉಲ್ಲಂಘನೆಯ ಕೆಲವು ಕೇಸುಗಳಲ್ಲಿ ಜಾರಿ ನಿರ್ದೇಶನಾಲಯವನ್ನು ಪ್ರತಿನಿಧಿಸುತ್ತಿದ್ದರು.

ವಾಜಪೇಯಿ ಸರಕಾರದ ಈ ನಗ್ನ ಕೃತ್ಯ ಭ್ರಷ್ಟಾಚಾರದ ಕೇಸುಗಳನ್ನು ಮುಚ್ಚಿಹಾಕಲು ರಾಜಕೀಯ ದುರುದ್ದೇಶದಿಂದ ಎಸಗಲಾಗಿದೆ ಎಂದಿರುವ ಸಿಪಿಐ(ಎಂ) ಭ್ರಷ್ಟಾಚಾರ ಮೊಕದ್ದಮೆಗಳಲ್ಲಿನ ಕಾನೂನು ಪ್ರಕ್ರಿಯೆಯಲ್ಲಿ ಈ ರೀತಿ ಸರಕಾರ ಹಸ್ತಕ್ಷೇಪ ಮಾಡುವುದನ್ನು ತಕ್ಷಣ ನಿಲ್ಲಿಸಬೇಕು ಎಂದು ಆಗ್ರಹಪಡಿಸಿದೆ. ಎಂ.ಕೆ. ಕುಮಾರ್‌ರವರನ್ನು ಮತ್ತೆ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಿಸಬೇಕು ಎಂದು ಅದು ಒತ್ತಾಯಿಸಿದೆ.

ಆದರೆ ನೀತಿ-ನಿಯಮಗಳನ್ನೆಲ್ಲಾ ಗಾಳಿಗೆ ತೂರಿ ಅಧಿಕಾರಕ್ಕೆ ಅಂಟಿಕೊಳ್ಳಲು ನಿರ್ಧರಿಸಿರುವ ಬಿಜೆಪಿ ನೇತೃತ್ವದ ಸರಕಾರದ ಕಿವಿಗೆ ಇಂತಹ ನೀತಿ ಮಾತುಗಳು ಬೀಳುತ್ತಿಲ್ಲ. ಅದು ತನ್ನ ನಗ್ನ ಕೃತ್ಯಗಳನ್ನು ಮುಂದುವರಿಸಿದಂತಿದೆ. ನಂತರ ಅಬಕಾರಿ ಇಲಾಖೆಯ ಕೇಸುಗಳನ್ನು ನೋಡಿಕೊಳ್ಳುತ್ತಿದ್ದ ವಕೀಲ ಕೆ.ವೀರರಾಘವನ್‌ರನ್ನೂ ವಜಾ ಮಾಡಿದೆ. ಅಬಕಾರಿ ಇಲಾಖೆಯ ಕೇಸುಗಳ ವಕಾಲತಿಗೆಂದು ಮೂರು ವರ್ಷಗಳ ಅವಧಿಗೆ ಇವರನ್ನು ಕೇಂದ್ರ ಸರಕಾರ ನೇಮಿಸಿತ್ತು. ಆದರೆ ಆಗಸ್ಟ್ 10 ರಂದು ಕೇಂದ್ರ ಸರಕಾರ ಉಪ ಕಾನೂನು ಸಲಹೆಗಾರರಿಂದ ಅವರ ನೇಮಕವನ್ನು ಅಂತ್ಯಗೊಳಿಸಿರುವುದಾಗಿ ಪತ್ರ ಕಳಿಸಲಾಗಿದೆ ಎಂದು 'ಇಂಡಿಯನ್ ಎಕ್ಸ್‌ಪ್ರೆಸ್'(ಸೆಪ್ಟಂಬರ್ 3) ಪತ್ರಿಕೆ ವರದಿ ಮಾಡಿದೆ.

ವಾಸ್ತವವಾಗಿ ಹೀಗೆ ನೇಮಕವನ್ನು ರದ್ದು ಮಾಡಲು, ಒಂದು ತಿಂಗಳ ನೋಟೀಸು ಕೊಡಬೇಕು. ಅದನ್ನು ಕೊಡದೆಯೇ ತನ್ನನ್ನು ವಜಾ ಮಾಡಲಾಗಿದೆ ಎಂದು ವೀರರಾಘವನ್ ಹೇಳಿದ್ದಾರೆ. ಅಲ್ಲದೆ ಈ ಇಂತಹ ನೋಟೀಸ್ ಕಾನೂನು ಮಂತ್ರಾಲಯದಿಂದ ಬರಬೇಕಿತ್ತು, ಇದನ್ನು ಮಂತ್ರಾಲಯ ದೊಡನೆ ಎತ್ತುತ್ತೇನೆ ಎಂದು ಅವರು ಹೇಳಿದ್ದಾರೆ.

ವೀರರಾಘವನ್ ಹಲವು ಉನ್ನತ ಕಂಪನಿಗಳ 3000 ಕೋಟಿ ರೂ.ಗಳಷ್ಟಾಗುವ ಸೇವಾ ತೆರಿಗೆ ಕೇಸುಗಳನ್ನು ನೋಡಿಕೊಳ್ಳುವಲ್ಲಿ ಕೇಂದ್ರ ಸರ್ಕಾರದ ಅಡಿಶನಲ್ ಸಾಲಿಸಿಟರ್ ಜನರಲ್‌ಗೆ ನೆರವಾಗುತ್ತಿದ್ದರು.

ಕೇಂದ್ರದಲ್ಲಿ ಬಿ.ಜೆ.ಪಿ. ಸರಕಾರ ಬಂದಂದಿನಿಂದ ಈ ರೀತಿ 70ಕ್ಕೂ ಹೆಚ್ಚು ವಕೀಲರನ್ನು ಹೊರದಬ್ಬಿ ಅವರ ಸ್ಥಾನಗಳಲ್ಲಿ ಎ.ಐ.ಎ.ಡಿ.ಎಂ.ಕೆ. ಕಾನೂನು ವಿಭಾಗದಲ್ಲಿ ಕೆಲಸ ಮಾಡುವ ವಕೀಲರನ್ನು ತರಲಾಗಿದೆ ಎಂದು 'ಇಂಡಿಯನ್ ಎಕ್ಸ್‌ಪ್ರೆಸ್' ವರದಿ ಮಾಡಿದೆ. ಇತ್ತೀಚೆಗೆ ಎ.ಐ.ಡಿ.ಎಂ.ಕೆ. ಮುಖಂಡರ ವಿರುದ್ಧ ಕೇಸುಗಳ ತನಿಖೆ ನಡೆಸುತ್ತಿರುವ ಆದಾಯ ತೆರಿಗೆ ಮತ್ತು ಸಿ.ಬಿ.ಐ. ಲಾಯರುಗಳ ನೇಮಕಕ್ಕೆ 10 ಪಾರ್ಟಿ ವಕೀಲರ ಪಟ್ಟಿಯನ್ನು ಎಐಎಡಿಎಂಕೆ ಮುಖ್ಯ. ಕಛೇರಿಯಿಂದ ಕಳಿಸಲಾಗಿದೆ ಎಂದೂ ಹೇಳಲಾಗಿದೆ.

ಆದರೂ ಜಯಲಲಿತಾರ ಬೆದರಿಕೆಗಳಿಗೆ ಮಣಿಯುವುದಿಲ್ಲ, ಭ್ರಷ್ಟಾಚಾರದ ಕೇಸುಗಳನ್ನು ಮುಚ್ಚಿ ಹಾಕುವುದಿಲ್ಲ ಎಂದು ಬಿ.ಜೆ.ಪಿ. ಮುಖಂಡರು ಅವ್ಯಾಹತವಾಗಿ ಹೇಳುತ್ತಲೇ ಇದ್ದಾರೆ. ○

ಯುದ್ಧ ಅಣುಯುದ್ಧ ಸಾಕು ಶಾಂತಿ, ವಿಶ್ವಶಾಂತಿ ಬೇಕು

ಯುದ್ಧ ಅಣುಯುದ್ಧ ಸಾಕು
ಶಾಂತಿ, ವಿಶ್ವಶಾಂತಿ ಬೇಕು
ಮೊದಲ ಮಹಾಮೂರ್ಖ ಮುತ್ತಿನಲಿ
ಮುಕ್ಕೋಟಿ ಮನುಜರ ಮುಕ್ಕಿದ
ಎರಡನೆಯ ಎಡವಟ್ಟ ಆಲಿಂಗನದಲಿ
ಐದು ಕೋಟಿ ನರ ನೆತ್ತರ ನೆಕ್ಕಿದ
ಯುದ್ಧ, ಅಣುಯುದ್ಧ ಸಾಕು
ಶಾಂತಿ, ವಿಶ್ವಶಾಂತಿ ಬೇಕು

ಪಶು-ಪಕ್ಷಿಗಳ ಮಧುರ ನುಡಿಯ
ಅಡಿಯಲಿ ಪುಡಿ ಪುಡಿ ಮಾಡುವ,
ನಡೆವ ನದಿಯ ನವಿರು ನಡುಗೆಯ
ನಡು ಪಯಣದಿ ನಡುಗಿಸುವ
ಯುದ್ಧ, ಅಣು ಯುದ್ಧ ಸಾಕು
ಶಾಂತಿ, ವಿಶ್ವಶಾಂತಿ ಬೇಕು

ಯುಗಯುಗದ ನಾಗರಿಕತೆಯ
ಕಲೆಯನು ಚಿತೆಗಿಕ್ಕುವ
ಮಾನವರ ಕನಸುಗಳ
ತಿನಸು ಮಾಡಿ ತಿನ್ನುವ
ಯುದ್ಧ, ಅಣುಯುದ್ಧ ಸಾಕು
ಶಾಂತಿ, ವಿಶ್ವಶಾಂತಿ ಬೇಕು

ಹೊಲಗಳಲಿ ತಳೆದ ಹಸಿರ
ಕೊರಳ ಕೊಯ್ದು ಬಂಜರಾಗಿಸುವ,
ದಟ್ಟಡವಿಯ ಹುಟ್ಟನ್ನೇ
ಸುಟ್ಟು 'ಬರಬೀಜ' ಬಿತ್ತುವ
ಯುದ್ಧ, ಅಣುಯುದ್ಧ ಸಾಕು
ಶಾಂತಿ, ವಿಶ್ವಶಾಂತಿ ಬೇಕು

ಜಾತಿ-ಭಾಷೆ-ನೆಲಕಾಗಿ ಕಚ್ಚಾಡುವ
ದುಷ್ಟ ಶಕ್ತಿಯಾಗಿರುವ,
ಕುಡಿಯೊಡೆವ ಆಸೆಯ
ಕೂಸನು ಹುಡಿ ಮಾಡುವ
ಯುದ್ಧ, ಅಣುಯುದ್ಧ ಸಾಕು
ಶಾಂತಿ, ವಿಶ್ವಶಾಂತಿ ಬೇಕು

- ಡಿ.ಬಿ.ಬಡಿಗೇರ

ಬಾಬ್ರಿ ಮೊಕದ್ದಮೆಯಲ್ಲಿ ವಿಳಂಬಕ್ಕೆ ಸಿಬಿಐಗೆ ಒತ್ತಡ!

ದಿಲ್ಲಿಯ 'ಸ್ಟೇಟ್ಸ್‌ಮೆನ್' ಪತ್ರಿಕೆಯ ಆಗಸ್ಟ್ 14ರ ಸಂಚಿಕೆ ಹೀಗೆಂದು ವರದಿ ಮಾಡಿದೆ- *ಬಿಜೆಪಿ ನೇತೃತ್ವದ ಸರಕಾರದ ಮಂತ್ರಿಗಳಾದ ಎಲ್.ಕೆ. ಅಡ್ವಾಣಿ, ಮುರಳಿ ಮನೋಹರ ಜೋಷಿ, ಉಮಾ ಭಾರತಿ, ಮತ್ತಿತರ ಬಾಬ್ರಿ ಮಸೀದಿ ಧ್ವಂಸ ಮೊಕದ್ದಮೆಯಲ್ಲಿನ ಆಪಾದಿತರನ್ನು ಖುಲಾಸೆ ಮಾಡಲು ಸಿಬಿಐ ಮೇಲೆ ಸರಕಾರ ಒತ್ತಡ ಹಾಕುತ್ತಿದೆ ಎಂದು ವರದಿಯಾಗಿದೆ.*

ಲಕ್ನೋ ಹೈಕೋರ್ಟ್ ಸಿಬಿಐ ವಿಚಾರಣಾ ನ್ಯಾಯಾಲಯ ಹಾಕಿದ ಆರೋಪಗಳನ್ನು ಬದಿಗೊತ್ತಬೇಕೆಂಬ ಒಂದು ಅರ್ಜಿಯನ್ನು ಹಾಕಲಾಗಿದ್ದು ಸಿಬಿಐ ಇದನ್ನು ವಿರೋಧಿಸಬಾರದು, ಅಥವಾ ದಿಲ್ಲಿಯ ವಿಶೇಷ ಸಿಬಿಐ ನ್ಯಾಯಾಲಯದಲ್ಲಿ ಎದುರು ವಾದಿಸಬಾರದು ಎಂಬುದು ಸರಕಾರದ ಆಶಯ ಎಂದು ಕೇಂದ್ರ ಗೃಹ ಇಲಾಖೆ ಹಾಗೂ ಸಿಬಿಐನ ಹಿರಿಯ ಅಧಿಕಾರಿಗಳು ಹೇಳುತ್ತಿರುವುದಾಗಿ ಈ ಪತ್ರಿಕೆ ವರದಿ ಮಾಡಿದೆ.

ಈ ಮೊಕದ್ದಮೆಯ ವಿಚಾರಣೆ ನಡೆಸುವ ವಿಶೇಷ ಸಿಬಿಐ ನ್ಯಾಯಾಲಯವೊಂದು ಎಲ್ಲಾ 49 ಆಪಾದಿತರ ವಿರುದ್ಧ ಆರೋಪ ಪತ್ರ ರೂಪಿಸಲು ನಿರ್ದೇಶನ ನೀಡಿದೆ. 49 ಆಪಾದಿತರಲ್ಲಿ ಅಡ್ವಾಣಿ, ಜೋಷಿ, ಉಮಾ ಭಾರತಿ, ವಿಜಯರಾಜೇ ಸಿಂಧ್ಯ ಹೆಸರುಗಳೂ ಸೇರಿವೆ. ಧರ್ಮ ಮತ್ತು ಜನಾಂಗ ಆಧಾರದ ಮೇಲೆ ವೈರತ್ವವನ್ನು ಪ್ರೋತ್ಸಾಹಿಸಿದ್ದಾರೆಂಬುದು ಅವರ ಮೇಲಿರುವ ಮುಖ್ಯ ಆರೋಪ. ಬೇರೆ ಆಪಾದನೆಗಳೆಂದರೆ ಕಾನೂನು ಬಾಹಿರ ಸಭೆ, ಗಲಭೆ, ಮಾರಕಾಸ್ತ್ರಗಳೊಂದಿಗೆ ಗಲಭೆ ಮತ್ತು ಯಾವುದೇ ವರ್ಗದ ಧಾರ್ಮಿಕ ಭಾವನೆಗಳನ್ನು ಉದ್ರೇಕಿಸುವ ದ್ವೇಷಪೂರ್ಣ ಚಟುವಟಿಕೆಗಳು.

ವಿಚಾರಣಾ ನ್ಯಾಯಾಲಯದ ಈ ಆದೇಶದ ನಂತರ ಆಪಾದಿತರಲ್ಲಿ ಕೆಲವರು ಈ ಆದೇಶವನ್ನು ರದ್ದು ಮಾಡುವಂತೆ ಕೋರಿ ಲಕ್ನೋ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ನ್ಯಾಯಮೂರ್ತಿ ಜೆ.ಪಿ. ಶ್ರೀವಾಸ್ತವ ಈ ಅರ್ಜಿಯನ್ನು ಸ್ವೀಕರಿಸಿದರೂ ಆದೇಶಕ್ಕೆ ತಡೆಯಾಜ್ಞೆ ನೀಡಲು ನಿರಾಕರಿಸಿದರು. ಆದ್ದರಿಂದ ವಿಚಾರಣಾ ನ್ಯಾಯಾಲಯ ಆರೋಪ ರೂಪಿಸಲು ದಿನಾಂಕಗಳನ್ನು ಗೊತ್ತು ಪಡಿಸಿತು.

ಸಿಬಿಐ ಮುಖ್ಯಸ್ಥರಾದ ತ್ರಿನಾಥ್ ಮಿಶ್ರರ ಬಳಿ ಹೋಗಿರುವ ಹಿರಿಯ ಬಿಜೆಪಿ ಮುಖಂಡರು ಹಾಗೂ ಕೇಂದ್ರ ಸರಕಾರದ ಅಧಿಕಾರಿಗಳು ಈ ಮೊಕದ್ದಮೆಯಲ್ಲಿ ಬಿಜೆಪಿಗೆ ಮುಜುಗರವಾಗುವುದನ್ನು ತಪ್ಪಿಸಬೇಕೆಂದು ಕೇಳಿದರು ಎಂದು ವಿಚಾರಣೆಗಳಿಂದ ಬೆಳಕಿಗೆ ಬಂದಿದೆಯಂತೆ. ಈ ವಿಷಯ ತನಿಖೆ ಮಾಡುತ್ತಿರುವ ಕಾನೂನು ತಂಡದಲ್ಲಿನ ಅಧಿಕಾರಿಗಳನ್ನು ಸೇರಿದಂತೆ ಸಿಬಿಐ ಅಧಿಕಾರಿಗಳ ಮೇಲೆ ಲಗಾಮು ಹಾಕಬೇಕು ಎಂದು ಸಿಬಿಐ ಮುಖ್ಯಸ್ಥರಿಗೆ ಕೇಳಿರುವುದಾಗಿ ತಿಳಿದು ಬಂದಿದೆ. ಆದರೆ ಅವರು ಹೀಗೆ ಮಾಡಲು ನಿರಾಕರಿಸಿದ್ದಾರಂತೆ. ಕಾನೂನಿನ ಮಾರ್ಗಗಳಲ್ಲಿ ಹಸ್ತಕ್ಷೇಪ ಮಾಡುವ ಸ್ಥಿತಿಯಲ್ಲಿ ತಾವಿಲ್ಲ ಎಂದು ಅವರು ಹೇಳಿರುವುದಾಗಿ ತಿಳಿದು ಬಂದಿದೆ. ಹೈಕೋರ್ಟ್ ಸೇರಿದಂತೆ ಎರಡು ನ್ಯಾಯಾಲಯಗಳು ಈ ಮೊಕದ್ದಮೆಯ ವಿಚಾರಣೆ ನಡೆಸುತ್ತಿರುವಾಗ ತಾನೇನೂ ಮಾಡಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರಂತೆ.

ಕಾನೂನು ತಂಡವನ್ನು ಬದಲಿಸಿ ಅಥವಾ ನ್ಯಾಯಾಲಯದಲ್ಲಿ ತಮ್ಮ ವಿರೋಧವನ್ನು ತಗ್ಗಿಸಲಿ ಎಂದು ಸಿಬಿಐ ನಿರ್ದೇಶಕರಿಗೆ ಕೇಳಿರುವುದಾಗಿಯೂ ತಿಳಿದುಬಂದಿದೆ. ತಾನು ಹಾಗೆ ಮಾಡಲು ಸಾಧ್ಯವಿಲ್ಲ, ಏಕೆಂದರೆ ಮುಂದೊಮ್ಮೆ ಅದನ್ನು ಪ್ರಶ್ನಿಸಬಹುದು ಎಂದು ಸಿಬಿಐ ನಿರ್ದೇಶಕರು ಹೇಳಿದರಂತೆ.

ಸಿಬಿಐ ನಿರ್ದೇಶಕ ಮಿಶ್ರಾರವರ ಈ ನಿರಾಕರಣೆಯಿಂದ ಕುಪಿತರಾಗಿರುವ ಸರಕಾರದ ಮಂತ್ರಿಗಳು ಈ ಬಗ್ಗೆ ತಮ್ಮ ಅಸಂತೋಷವನ್ನು ವ್ಯಕ್ತಪಡಿಸಿ ಕೇಂದ್ರ ಜಾಗೃತ ಆಯೋಗದ ಪುನರ್ರಚನೆ ಮಾಡಿದಾಗ ಅವರನ್ನು ಹೊರಕಳಿಸಲಾಗುವುದು ಎಂದೂ ಸಂಕೇತ ನೀಡಿದ್ದಾರಂತೆ.

ಅಡ್ವಾಣಿ, ಜೋಷಿ ಹಾಗೂ ಉಮಾ ಭಾರತಿಯವರ ವಕೀಲ ಕೆ.ಕೆ.ಸೂದ್‌ರನ್ನು ಕೇಳಿದಾಗ ವಿಚಾರಣಾ ನ್ಯಾಯಾಲಯ ಆರೋಪ ಪತ್ರ ರೂಪಿಸಲು ದಿನಾಂಕಗಳನ್ನು ನಿರ್ದಿಷ್ಟ ಪಡಿಸಿದ ಬಗ್ಗೆ ತನಗೆ ತಿಳಿದಿಲ್ಲ ಎಂದರು. ಸಹಜವಾಗಿ ಸಿಬಿಐ ತನ್ನ ನಿಲುವನ್ನ ಮೆದುಗೊಳಿಸಬೇಕೆಂಬ ಪ್ರಯತ್ನಗಳ ಬಗ್ಗೆ ತನಗೆ ಏನೇನೂ ತಿಳಿದಿಲ್ಲ ಎಂದೂ ಅವರು ಹೇಳಿದರು. ಅದು ಸಹಜವೇ. ಈ ಮೊಕದ್ದಮೆಯನ್ನು ದುರ್ಬಲಗೊಳಿಸುವ ಪ್ರಯತ್ನ ನಡೆಸುತ್ತಿಲ್ಲ ಎಂದು ಸಿಬಿಐ ವಕ್ತಾರರು ಹೇಳಿದ್ದಾರೆ.

ಇತಿಹಾಸ ಸಂಶೋಧನಾ ಮಂಡಳಿಯಲ್ಲಿ ಮತ್ತೆ ಕೋಮುವಾದಿಗಳ ಅಟ್ಟಹಾಸ

ಭಾರತೀಯ ಐತಿಹಾಸಿಕ ಸಂಶೋಧನಾ ಮಂಡಳಿಯನ್ನು ಕಾವಿಪಡೆಗಳ ಬಾಲಂಗೋಚಿಯಾಗಿಸುವ ಪ್ರಯತ್ನದ ಭಾಗವಾಗಿ ಕಳೆದವಾರ ಇನ್ನೊಬ್ಬ ಇತಿಹಾಸಕಾರರನ್ನು ಮಂಡಳಿಯಿಂದ ಹೊರದಬ್ಬಲಾಗಿದೆ.

ದಿಲ್ಲಿ ವಿಶ್ವವಿದ್ಯಾಲಯದ ಇತಿಹಾಸದ ಪ್ರಾಧ್ಯಾಪಕ ಟಿ.ಕೆ.ವಿ. ಸುಬ್ರಮಣಿಯನ್ ಸಂಶೋಧನಾ ಮಂಡಳಿಯ ಸದಸ್ಯ-ಕಾರ್ಯದರ್ಶಿಯಾಗಿ ಜನವರಿ 19 ರಿಂದ ಮೂರು ವರ್ಷಗಳ ಅವಧಿಗೆ ನೇಮಕವಾಗಿದ್ದರು. ಆದರೆ ಅವರನ್ನು ಕಳೆದ ವಾರ ಮಂಡಳಿಯ ಸರ್ವಸದಸ್ಯರ ಸಭೆ ವಜಾ ಮಾಡಿದೆ. ಇವರು ಭಾರತೀಯ ಇತಿಹಾಸ ಸಮ್ಮೇಳನದ ಜೊತೆ ಜಂಟಿ ಕಾರ್ಯದರ್ಶಿಗಳೂ ಆಗಿದ್ದು ಬಾಬ್ರಿ ಮಸೀದಿ ಧ್ವಂಸವನ್ನು ಬಹಿರಂಗವಾಗಿ ಟೀಕಿಸಿದ್ದರು, ಅಯೋಧ್ಯೆಯಲ್ಲಿ ನಡೆದ ಗಲಭೆಕೋರತನವನ್ನು ವಿಶ್ವ ಪ್ರಾಚ್ಯ ಸಂಶೋಧನಾ ಸಮ್ಮೇಳನದಲ್ಲಿ ಚರ್ಚಿಸಬೇಕು ಎಂದು ಒತ್ತಾಯಿಸಿದ್ದವರಲ್ಲಿ ಇವರೂ ಒಬ್ಬರು. ಇದಕ್ಕೆ ಪ್ರತೀಕಾರವಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂಬುದು ಸಾಮಾನ್ಯವಾಗಿರುವ ಭಾವನೆ. ಆದರೆ ಮಂಡಳಿ ಕೊಟ್ಟಿರುವ ಕಾರಣ ಮಾತ್ರ ಬೇರೆ - ಮಂಡಳಿಯ ಅಧ್ಯಕ್ಷರ ಅಧಿಕಾರ ವ್ಯಾಪ್ತಿಯನ್ನು ಬುಡಮೇಲು ಮಾಡಿ ಅಶಿಸ್ತು ಪ್ರದರ್ಶಿಸಿದ್ದಕ್ಕಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಲಾಗಿದೆ. ಆದರೆ ವಾಸ್ತವವಾಗಿ ಮಂಡಳಿಯ ಪ್ರಮುಖರ ಹಣಕಾಸು ಅಶಿಸ್ತನ್ನು ಪ್ರಶ್ನಿಸಿದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸುಬ್ರಮಣಿಯನ್ ಹೇಳುತ್ತಾರೆ.

ಸುಬ್ರಮಣಿಯನ್‌ರವರ ವಿವರಣೆ ಹೀಗಿದೆ - "ಮಂಡಳಿಯ ಗೌರವಾಧ್ಯಕ್ಷರು ದಿಲ್ಲಿ ನಿವಾಸಿಯಲ್ಲ. ಅವರು ಪೂರ್ಣಕಾಲದ ಹುದ್ದೆಯಾದ ಸದಸ್ಯ-ಕಾರ್ಯದರ್ಶಿಯ ಕೆಲಸಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದರು. ಇದು ಮಂಡಳಿಯ ನಿಯಮಾವಳಿಗಳಿಗೆ ವಿರುದ್ಧವಾದದ್ದು. ನಾನು ಕೆಲವು ಹಣಕಾಸು ಮತ್ತು ಆಡಳಿತ ಸುಧಾರಣೆ ತರಬಯಸಿದ್ದೆ. ಅದು ಬಹಳ ಮಂದಿಗೆ ಇಷ್ಟವಾಗಿಲ್ಲ."

ಮಂಡಳಿಯ ಅಲ್ಪ ಸಂಪನ್ಮೂಲವನ್ನು ಖರ್ಚು ಮಾಡುವಲ್ಲಿ ಹಣಕಾಸು ಶಿಸ್ತು ಇಲ್ಲ, ಬಜೆಟ್ ಪ್ರಸ್ತಾವಗಳಿಗೆ ಆಡಳಿತ ಸಮಿತಿಯಿಂದ ಮಂಜೂರಾತಿ ಪಡೆಯುವುದಿಲ್ಲ, ಒಂದು ಬಾಬ್ತಿಗೆ ಮೀಸಲಿಟ್ಟ ಹಣವನ್ನು ಇನ್ನೊಂದು ಬಾಬ್ತಿಗೆ ಬಳಸಲಾಗುತ್ತದೆ ಎಂದು ಕಳೆದ ತಿಂಗಳು ಮಂಡಳಿಯ ಅಧ್ಯಕ್ಷರಿಗೆ ಬರೆದ ಪತ್ರದಲ್ಲಿ ಅವರು ತಿಳಿಸಿದ್ದರು. ಮಂಡಳಿಯ ನಿರ್ದೇಶಕ ಸುಶೀಲ್ ಕುಮಾರ್ ಇತ್ತೀಚೆಗೆ ರಚಿಸಿದ ಪ್ರಾದೇಶಿಕ ಕೇಂದ್ರಗಳಿಗೆ ಭಾರೀ ಹಣ ಖರ್ಚು ಮಾಡುವಲ್ಲಿ ದುರುದ್ದೇಶವಿದೆ ಎಂದೂ ಅವರು ತಿಳಿಸಿದ್ದರು.

"ಸುಬ್ರಮಣಿಯನ್‌ರವರನ್ನು ವಜಾ ಮಾಡುವ ನಿರ್ಣಯ ಸಂಪೂರ್ಣವಾಗಿ ಸ್ವೇಚ್ಛಾಚಾರದ್ದು ಹಾಗೂ ಕಾನೂನು ಬಾಹಿರ. ಏಕೆಂದರೆ ಯಾವುದೇ ಚಾರ್ಜ್‌ಶೀಟ್ ಅಥವಾ ತನಿಖೆ ನಡೆಸಿಲ್ಲ" ಎಂದು ಕೆಲವು ಇತಿಹಾಸಕಾರರು ಅಭಿಪ್ರಾಯ ಪಟ್ಟಿದ್ದಾರೆ. ಸುಬ್ರಮಣಿಯನ್ ಕಾನೂನಿನ ಮೂಲಕ ನ್ಯಾಯ ಪಡೆಯುವ ಬಗ್ಗೆ ಪರಿಶೀಲಿಸುತ್ತಿದ್ದಾರೆ ಎಂದು ತಿಳಿದು ಬಂದಿದೆ.

ಎಚ್ಚರಗೊಳ್ಳದ ....

ಪುಟ 1 ರಿಂದ

ಆತಂಕಕಾರಿಯಾಗಿವೆಂದು ಹೇಳಿದರೆ ತಪ್ಪಾಗಲಾರದು. ಕಳೆದೆರಡು ವರ್ಷಗಳಿಂದಲೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯ ರಚನೆ ನನೆಗುದಿಗೆ ಬಿದ್ದಿತ್ತು. ಕಾಂಗ್ರೆಸ್ಸಿನಲ್ಲಿ ಪ್ರಾರಂಭದಿಂದಲೂ ನಡೆದುಕೊಂಡು ಬಂದ ಚಾಳಿಯೇ ಆದಾಗಿದೆ. ಆದರೆ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳಿಗೆ ಹಾಗೆಯೇ ದೇಶದ ಐಕ್ಯತೆ ಸಮಗ್ರತೆಗೆ ಮಾರಕವಾಗಿ ಬೆಳೆದು ಬಂದು ಅಧಿಕಾರಕ್ಕೆ ಬಂದಿರುವ ಅಪಾಯಕಾರಿ ದುಷ್ಟ ಶಕ್ತಿಯ ವಿರುದ್ಧ ಹೋರಾಟ ಮಾಡಬೇಕಾದಂಥ ಸಂದಿಗ್ದ ಪರಿಸ್ಥಿತಿ ಉಂಟಾದಾಗ ಚರಿತ್ರಾರ್ಹ ಜವಾಬ್ದಾರಿಯನ್ನು ಹೊರಲು ಬೇಕಾಗುವಂಥ ಪಕ್ಷದ ಸಂಘಟನೆಯನ್ನು ರೂಪಿಸುವುದು ಅಗತ್ಯವೆಂಬ ಅರಿವು ಇಂದಿಗೂ ಕಾಂಗ್ರೆಸ್ ಮುಖಂಡರಲ್ಲಿ ಬಾರದಿರುವುದು ದುರದೃಷ್ಟಕರ. ತಮ್ಮ ಪಕ್ಷದ ಸಂವಿಧಾನಕ್ಕೆ ವಿರೋಧವಾದ, ಅವ್ಯವಹಾರಿಕವಾದ, ಹಾಸ್ಯಾಸ್ಪದ ರೀತಿಯ ಕೆ.ಪಿ.ಸಿ.ಸಿ. ಪಟ್ಟಿ ಈಗ ಪ್ರಕಟವಾಗಿದೆ. ಧರ್ಮಸಿಂಗ್ ಅಧ್ಯಕ್ಷರಾಗಿರುವ 161 ಮಂದಿ ಸದಸ್ಯರ ಕೆ.ಪಿ.ಸಿ.ಸಿ. ರಚನೆಯಾಗಿದೆ. ಅದರಲ್ಲಿ 18 ಉಪಾಧ್ಯಕ್ಷರು, 25 ಪ್ರಧಾನ ಕಾರ್ಯದರ್ಶಿಗಳು, 28 ಕಾರ್ಯದರ್ಶಿ, 31 ಕಾರ್ಯಕಾರಿ ಸದಸ್ಯರು, 42 ಕಾರ್ಯ ಆಮಂತ್ರಿತರು ಮತ್ತು 16 ವಿಶೇಷ ಆಮಂತ್ರಿತರಿಂದ ಕೂಡಿದ ಹೊಸ ರಾಜ್ಯ ಸಮಿತಿ. ಇದು ಅತ್ಯಂತ ಹಾಸ್ಯಾಸ್ಪದ. ಕಮಿಟಿಗಳನ್ನು ಆರಿಸುವ ಅಥವಾ ರಚಿಸುವ ಹಕ್ಕು ಆಯಾ ಪಕ್ಷಗಳಿಗೆ ಸೇರಿದೆಯಾದರೂ ಈ ಕಮಿಟಿ ರಚನೆಯಿಂದಾಗಿ ಕಾಂಗ್ರೆಸ್ ಪಕ್ಷದಲ್ಲಿರುವ ಒಳಗುದಿಗೆ ಪರಿಹಾರ ಒದಗೀತೇ, ಮುಂಬರುವ ಚುನಾವಣೆಗಳಲ್ಲಿ ಮತೀಯ ಶಕ್ತಿಗಳನ್ನು ಸೋಲಿಸಲಿಕ್ಕೆ ಬೇಕಾದಂಥ ಒಗ್ಗಟ್ಟು, ಐಕ್ಯತೆ ಮೂಡಿಬರಲು ಸಾಧ್ಯವೇ ಎಂಬುದ[ನ್ನು] ಆ ಪಕ್ಷದವರೇ ವಿಮರ್ಶಿಸಿಕೊಳ್ಳುವುದು ಅಗತ್ಯ.

ಜನತಾದಳ, ಕಾಂಗ್ರೆಸ್ಸಿನ ಪರಿಸ್ಥಿ[ತಿ] ಹಿಂಗಾದರೆ ಲೋಕಶಕ್ತಿ ಮತ್ತು ಬಿ.ಜೆ.ಪಿ. ಕೂಡಾ ಗಂಭೀರ ಆಂತರಿಕ ಸಂಘಟನಾ[ತ್ಮಕ] ಸಮಸ್ಯೆಗಳನ್ನೆದುರಿಸುತ್ತಿವೆ.

ಒಂದು ಕಡೆ ಬಿ.ಜೆ.ಪಿ.ಯಂಥ ಮತೀಯ ಶಕ್ತಿಗಳನ್ನು ಸೋಲಿಸಲು ಜನತಾದಳ, ಕಾಂಗ್ರೆಸ್ ಪಕ್ಷಗಳು ಗುಂಪುಗಾರಿಕೆ, ಒಳಜಗಳಗಳನ್ನು ತೊರೆದು ಒಗ್ಗಟ್ಟಾಗಬೇಕೆಂದು ಹೇಳುತ್ತಿರುವಾಗಲೇ ದುಡಿಯುವ ಜನತೆಯ ಹಿತದೃಷ್ಟಿಯಿಂದ ಬಿ.ಜೆ.ಪಿ. ಶಕ್ತಿಯನ್ನು ದಮನ ಮಾಡುವುದರ ಜೊತೆಯಲ್ಲಿಯೇ ಐ.ಎಂ. ಎಫ್. ವಿಶ್ವಬ್ಯಾಂಕ್ ಒತ್ತಡದಿಂದ ಅನುಕರಣೆಯಲ್ಲಿ ತರಲಾಗುತ್ತಿರುವ ಉದಾರೀಕರಣ ಆರ್ಥಿಕ ನೀತಿಯನ್ನೂ ಹಾಗೆಯೇ ಈಗ ಅಧಿಕಾರದಲ್ಲಿರುವ ಬಿ.ಜೆ.ಪಿ. ಆರ್ಥಿಕ ನೀತಿಯ ಜೊತೆಯಲ್ಲಿ ಅನುಷ್ಠಾನದ[ಲ್ಲಿ] ತರುತ್ತಿರುವ ಕೋಮುವಾದವನ್ನು ಸಮರ್ಥವಾ[ಗಿ] ಎದುರಿಸಿ ಅದನ್ನು ಹಿಂದಕ್ಕಟ್ಟಿ ಸಿ.ಪಿ.ಐ.(ಎಂ) ದೇಶದ ಜನರ ಮುಂದಿಟ್ಟಿರುವ ಪರ್ಯಾಯ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲು ಸಾಧ್ಯವಾಗುವಂತೆ ಎಡ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಬಲ ಸಂವರ್ಧನೆಗಾಗಿ ಎಡ ಪಕ್ಷಗಳು ಅದರಲ್ಲೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ತನ್ನ ಸ್ವತಂತ್ರ ಚಳುವಳಿಗಳನ್ನು ತೀವ್ರಗೊಳಿಸಿ ಬಲಸಂವರ್ಧನೆ ಮಾಡಿಕೊಳ್ಳುವುದು ಅಗತ್ಯ. ಕಾರ್ಮಿಕ ವರ್ಗದ ಶಕ್ತಿ, ರೈತ-ಕಾರ್ಮಿಕ ಐಕ್ಯತೆಯಿಂದ ಮಾತ್ರ ಜನರಲ್ಲಿ ಹೊಸ ಚೈತನ್ಯ ತುಂಬಿ ಬಿ.ಜೆ.ಪಿಯನ್ನು ಸೋಲಿಸಲು ಸಾಧ್ಯ. ಅದಕ್ಕೆ ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳ, ಪಕ್ಷಗಳ ಬೆಂಬಲ ಅಗತ್ಯ.

Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹವಿ ಪ್ರಿಂಟರ್ಸ್, ಕ್ವೀನ್ ರಸ್ತೆ; ಬೆಂಗಳೂರು-1
Printed & Published by P.Ramachandra Rao for Communist Party of India(Marxist), Karnataka State Committee, EDITOR: P.RAMACHANDRA RAO